# ಕರ್ನಾಟಕ ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ನಿಯಮಗಳು, 2002

(ಕರ್ನಾಟಕ ರಾಜ್ಯಪತ್ರ, ಗುರುವಾರ, ಏಪ್ರಿಲ್ 27, 2006, ಭಾಗ – IVಎ, ಪುಟ 521 ರಿಂದ 560ರ ವರೆಗೆ ಪ್ರಕಟಿಸಲಾಗಿದೆ.)

**ನಿಯಮಗಳ ಅನುಕ್ರಮಣಿಕೆ**

**ಪ್ರಕರಣಗಳು:**


**ಅಧ್ಯಾಯ – I**
**ಪ್ರಾರಂಭಿಕ**

1. ಶೀರ್ಷಿಕೆ ಮತ್ತು ಪ್ರಾರಂಭ
2. ಪರಿಭಾಷೆಗಳು

**ಅಧ್ಯಾಯ – II**
**ಬಾಲಕ ನ್ಯಾಯ ಮಂಡಲಿ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ರಚನೆ**

3. ಆಯ್ಕೆ ಸಮಿತಿ
4. ಬಾಲಕ ನ್ಯಾಯ ಮಂಡಲಿಯ ಸದಸ್ಯರ ನೇಮಕಾತಿ
5. ಬಾಲಕ ನ್ಯಾಯ ಮಂಡಲಿಯ ಸದಸ್ಯರ ಪದಾವಧಿ ಮತ್ತು ಅವರು ರಾಜೀನಾಮೆ ನೀಡುವ ವಿಧಾನ
6. ಮಂಡಲಿಯ ಉಪವೇಶನಗಳ ಸಮಯ ಮತ್ತು ಸ್ಥಳ
7. ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಮತ್ತು ಸದಸ್ಯರ ನೇಮಕಾತಿಗೆ ಅರ್ಹತೆಗಳು
8. ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರ ಪದಾವಧಿ ಮತ್ತು ರಾಜೀನಾಮೆ ನೀಡುವ ವಿಧಾನ
9. ಸಮಿತಿಯು ಸಭೆ ಸೇರುವ ಸಮಯ ಮತ್ತು ಸ್ಥಳ

**ಅಧ್ಯಾಯ – III**
**ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕ**

10. ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕನನ್ನು ಮಂಡಲಿಯ ಮುಂದೆ ಹಾಜರುಪಡಿಸುವುದು
11. ಪರಿವೀಕ್ಷಣಾಲಯಕ್ಕೆ ಬಾಲಕನನ್ನು ಕಳುಹಿಸುವ ವಿಧಾನ
12. ಬಾಲಕರ ವಿಶೇಷ ಪೊಲೀಸು ಘಟಕ ಮತ್ತು ಅದರ ಕಾರ್ಯವಿಧಾನ
13. ಮಂಡಲಿಯು ವಿಚಾರಣೆಯನ್ನು ನಡೆಸುವಾಗ ಅನುಸರಿಸಬೇಕಾದ ಕಾರ್ಯವಿಧಾನ
14. ಪರಿವೀಕ್ಷಣಾಲಯಗಳು
15. ಪರಿವೀಕ್ಷಣಾಲಯಗಳ ವ್ಯವಸ್ಥಾಪನೆ
16. ವಿಶೇಷ ಗೃಹಗಳು
17. ವಿಶೇಷ ಗೃಹಗಳ ವ್ಯವಸ್ಥಾಪನೆ
18. ಬಾಲಕರ ವರ್ಗೀಕರಣ

**ಅಧ್ಯಾಯ – IV**
**ಪಾಲನೆ ಮತ್ತು ಸಂರಕ್ಷಣೆಯ ಅಗತ್ಯವಿರುವ ಮಗು**

19. ವಿಚಾರಣೆಗಳ ಅವಧಿಯಲ್ಲಿ ಮಕ್ಕಳ ಕಲ್ಯಾಣ ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನ
20. ಪೊಲೀಸ್ ಮತ್ತು ಸಮಿತಿಗೆ ವರದಿ ಮಾಡುವ ರೀತಿ
21. ಮಕ್ಕಳ ಗೃಹಕ್ಕೆ ಒಂದು ಮಗುವನ್ನು ಕಳಿಸುವ ವಿಧಾನ
22. ಮಕ್ಕಳ ಗೃಹಗಳು
23. ಮಕ್ಕಳ ಗೃಹಗಳ ವ್ಯವಸ್ಥಾಪನೆ
24. ಆಶ್ರಯಧಾಮಗಳು
25. ಮಕ್ಕಳ ಗೃಹಗಳಿಗೆ ಪರಿಶೀಲನಾ ಸಮಿತಿಗಳು
26. ಮೇಲ್ವಿಚಾರಣಾ ಮತ್ತು ನಿರ್ಧರಣಾ ಸಮಿತಿ
27. ಸಾಮಾಜಿಕ ಲೆಕ್ಕಪರಿಶೋಧನೆ

**ಅಧ್ಯಾಯ – V**
**ಪುನರ್ವಸತಿ ಮತ್ತು ಸಾಮಾಜಿಕ ಸಾಮರಸ್ಯ**

28. ದತ್ತಕ
29. ರಕ್ಷಾಪಾಲನೆ
30. ಪ್ರಾಯೋಜಕತೆ
31. ಅನುಪಾಲನಾ ಸಂಸ್ಥೆಗಳು
32. ವಿವಿಧ ಏಜೆನ್ಸಿಗಳ ನಡುವೆ ಸಂಪರ್ಕಗಳು

## ಅಧ್ಯಾಯ – VI
### ಸಂಕೀರ್ಣ

33. ಪರಿವೀಕ್ಷಣ ಗೃಹ / ವಿಶೇಷ ಗೃಹ / ಮಕ್ಕಳ ಗೃಹವು ಕಾಪಾಡಿಕೊಂಡು ಬರಬೇಕಾದ ಗುಣಮಟ್ಟಗಳು
34. ಪರಿವೀಕ್ಷಣಾಲಯಗಳ ಅಥವಾ ವಿಶೇಷ ಗೃಹಗಳ ಅಥವಾ ಮಕ್ಕಳ ಗೃಹಗಳ ಪ್ರಮಾಣೀಕರಣ
35. ಪ್ರಮಾಣೀಕರಿಸಲಾದ ಅಥವಾ ಮಾನ್ಯತೆ ಪಡೆದ ಸಂಸ್ಥೆಗೆ ಸಹಾಯಾನುದಾನ
36. ಸೂಕ್ತ ವ್ಯಕ್ತಿ ಅಥವಾ ಸೂಕ್ತ ಸಂಸ್ಥೆಯ ಮಾನ್ಯತೆ
37. ಸಾಂಸ್ಥಿಕ ವ್ಯವಸ್ಥಾಪನೆ (ಪರಿವೀಕ್ಷಣಾ ಗೃಹಗಳು, ವಿಶೇಷ ಗೃಹಗಳು, ಆಶ್ರಯಧಾಮಗಳು ಮತ್ತು ಮಕ್ಕಳ ಗೃಹಗಳು)
38. ತುರ್ತು ಪರಿಸ್ಥಿತಿಗಳು
39. ಮಕ್ಕಳ ಗೃಹಗಳು / ಬಾಲಕ ಗೃಹಗಳು / ವಿಶೇಷ ಗೃಹಗಳ ಪ್ರಭಾರ ಹೊಂದಿರುವ ಪರಿವೀಕ್ಷಣಾಧಿಕಾರಿಯ/ ಅಧೀಕ್ಷಕನ ಕರ್ತವ್ಯಗಳು
40. ವಿಶೇಷ ಅಗತ್ಯತೆಗಳಿರುವ ಮಕ್ಕಳು
41. ಕಾಣೆಯಾದ ಮಕ್ಕಳ ಒಂದು ವಿಭಾಗ
42. ಬಾಲಕ ನ್ಯಾಯನಿಧಿ
43. ಸಲಹಾ ಮಂಡಲಿಗಳು
44. ದಾಖಲೆಗಳ / ದಸ್ತಾವೇಜುಗಳ ವಿಲೇವಾರಿ
45. ಬಾಲಕ ನ್ಯಾಯ ಅಧಿನಿಯಮ, 2000 – ಇದನ್ನು ಅನುಷ್ಠಾನಗೊಳಿಸಲು ಕೈಪಿಡಿ
46. ನಿರಸನ ಮತ್ತು ಉಳಿಸುವಿಕೆಗಳು

ನಮೂನೆಗಳು I ರಿಂದ XIV

### ಮಹಿಳಾ ಮತ್ತು ಮಕ್ಕಳ ಸಚಿವಾಲಯ
### ಅಧಿಸೂಚನೆ

**ಸಂಖ್ಯೆ. ಡಬ್ಲ್ಯೂಸಿಡಿ 40 ಎಸ್‌ಬಿಬಿ 2001 (ಪಿ), ಬೆಂಗಳೂರು, ದಿನಾಂಕ 26 ಸೆಪ್ಟೆಂಬರ್ 2002**

ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000ದ 68 ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ, ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

## ಅಧ್ಯಾಯ – I
### ಪ್ರಾರಂಭಿಕ

**1. ಶೀರ್ಷಿಕೆ ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ನಿಯಮಗಳು, 2002 ಎಂದು ಕರೆಯತಕ್ಕದ್ದು.

(2) ಅವು, ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧಿನಿಯಮ" ಎಂದರೆ ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2002 (2000ದ ಕೇಂದ್ರ ಅಧಿನಿಯಮ 56);

(ಬಿ) "ದತ್ತುಸ್ವೀಕಾರ" ಎಂದರೆ ಒಂದು ಮಗುವಿನ ಖಾಯಂ ಅಭಿರಕ್ಷೆ ಮತ್ತು ಜವಾಬ್ದಾರಿಯನ್ನು ಸ್ವೀಕರಿಸುವುದು, ಮತ್ತು ಅದು ಸ್ವಂತ ಮಗುವಿನ ಎಲ್ಲ ಹಕ್ಕುಗಳು ಮತ್ತು ವಿಶೇಷಾಧಿಕಾರಗಳನ್ನು ಹೊಂದಿರತಕ್ಕದ್ದು;

(ಸಿ) "ವಿಶೇಷ ಅಗತ್ಯತೆಗಳು ಇರುವ ಮಗು" ಎಂದರೆ ಯಾವ ಮಗುವಿಗೆ ಈ ಅಧಿನಿಯಮದ ಅಡಿಯಲ್ಲಿ ಒದಗಿಸಲಾದ ನಿಯತ ಸೇವೆಗಳ ಜೊತೆಗೆ ಸೂಕ್ತ ಪಾಲನೆ ಮತ್ತು ಪುನರ್ವಸತಿ ಸೌಲಭ್ಯಗಳು ದೊರೆಯುವಂತಾಗಲು ತಜ್ಞಸೇವೆಗಳ ಅಗತ್ಯವಿದೆಯೋ ಆ ಮಗು;

(ಡಿ) "ನಿರ್ದೇಶಕ" ಎಂದರೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕ;

(ಇ) "ರಕ್ಷಾಪಾಲನೆ" ಎಂದರೆ ಮಗುವನ್ನು ಬಿಡಿ ಕುಟುಂಬದಲ್ಲಿ ಅಥವಾ ಸಮೂಹ ಪಾಲನಾ ಗೃಹದಲ್ಲಿ ಇರಿಸುವುದು;

(ಎಫ್) "ನಮೂನೆ" ಎಂದರೆ ಈ ನಿಯಮಗಳಿಗೆ ಅನುಬಂಧಿಸಲಾದ ಒಂದು ನಮೂನೆ;

(ಜಿ) ಈ ನಿಯಮಗಳ ಉದ್ದೇಶಗಳಿಗಾಗಿ "ಸಂಸ್ಥೆ " ಎಂದರೆ ಅನುಕ್ರಮವಾಗಿ 8, 9, 34 ಮತ್ತು 37 ನೇ ಪ್ರಕರಣಗಳ ಅಡಿಯಲ್ಲಿ ಪ್ರಮಾಣೀಕರಿಸಿದ ಅಥವಾ ಮನ್ನಣೆ ನೀಡಿದ ಪರಿವೀಕ್ಷಣಾ ಗೃಹ ಅಥವಾ ವಿಶೇಷ ಗೃಹ ಅಥವಾ ಮಕ್ಕಳ ಗೃಹ ಅಥವಾ ಆಶ್ರಯ ಧಾಮ;

(ಎಚ್) "ಪ್ರಭಾರಿ ಅಧಿಕಾರಿ" ಎಂದರೆ ಅಧಿನಿಯಮದ ಅಡಿಯಲ್ಲಿ ಪ್ರಭಾರಿ ಅಧಿಕಾರಿಯೆಂದು ಪ್ರಮಾಣೀಕರಿಸಲಾದ ಅಥವಾ ಮನ್ನಣೆ ನೀಡಲಾದ ಮತ್ತು ಒಂದು ಸಂಸ್ಥೆಯ ನಿಯಂತ್ರಣ ಮತ್ತು ವ್ಯವಸ್ಥಾಪನೆಗಾಗಿ ರಾಜ್ಯ ಸರ್ಕಾರವು ನೇಮಕ ಮಾಡಿದ ಒಬ್ಬ ವ್ಯಕ್ತಿ;

(ಐ) "ಪರಿವೀಕ್ಷಣಾಧಿಕಾರಿ" ಎಂದರೆ ಬಾಲಕ ನ್ಯಾಯ ಮಂಡಲಿಗೆ ಸಂಬಂಧಪಟ್ಟ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ದಿಷ್ಟವಾಗಿ ನಿರ್ವಹಿಸುವ ಉದ್ದೇಶಕ್ಕಾಗಿ, ಈ ಅಧಿನಿಯಮದ ಅಡಿಯಲ್ಲಿ ಒಬ್ಬ

ಪರಿವೀಕ್ಷಣಾಧಿಕಾರಿಯ ಅಧಿಕಾರಗಳನ್ನು ಪ್ರದಾನ ಮಾಡಲಾದ ಒಬ್ಬ ಅಧಿಕಾರಿ ಅಥವಾ ಒಬ್ಬ ವ್ಯಕ್ತಿ ಅಥವಾ ಅಪರಾಧಿಗಳ ಪರಿವೀಕ್ಷಣೆ ಅಧಿನಿಯಮ, 1958ರ ಅಡಿಯಲ್ಲಿ ಒಬ್ಬ ಪರಿವೀಕ್ಷಣಾಧಿಕಾರಿಯಾಗಿ ರಾಜ್ಯ ಸರ್ಕಾರದಿಂದ ನೇಮಕಗೊಂಡ ಒಬ್ಬ ಅಧಿಕಾರಿ;

(ಜೆ) "ಪ್ರಕರಣ" ಎಂದರೆ ಅಧಿನಿಯಮದ ಒಂದು ಪ್ರಕರಣ.

(2) ಈ ಅಧಿನಿಯಮದಲ್ಲಿ ಪರಿಭಾಷಿಸಲಾದ ಮತ್ತು ಉಪಯೋಗಿಸಲಾದ, ಆದರೆ ಈ ನಿಯಮಗಳಲ್ಲಿ ಪರಿಭಾಷಿಸಿಲ್ಲದ ಎಲ್ಲ ಪದಗಳು ಮತ್ತು ಅಭಿವ್ಯಕ್ತಿಗಳು, ಈ ಅಧಿನಿಯಮದಲ್ಲಿ ಅವುಗಳಿಗೆ ನೀಡಲಾಗಿರುವಂಥ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ – II

## ಬಾಲಕ ನ್ಯಾಯ ಮಂಡಲಿ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ರಚನೆ

**3. ಆಯ್ಕೆ ಸಮಿತಿ.–** (1) ರಾಜ್ಯ ಸರ್ಕಾರವು ರಚಿಸಿದ ಒಂದು ಆಯ್ಕೆ ಸಮಿತಿಯು ಬಾಲಕ ನ್ಯಾಯ ಮಂಡಲಿಯ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡತಕ್ಕದ್ದು. ಆಯ್ಕೆ ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು:–

| | | |
|---|---|---|
| (1) | ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ | ಅಧ್ಯಕ್ಷ |
| (2) | ಪ್ರಾಧ್ಯಾಪಕ ದರ್ಜೆಗೆ ಕಡಿಮೆಯದಲ್ಲದ ದರ್ಜೆಯ, ಭಾರತ ರಾಷ್ಟ್ರೀಯ ಕಾನೂನು ಶಾಲಾ ವಿಶ್ವವಿದ್ಯಾನಿಲಯದ ಒಬ್ಬ ಪ್ರತಿನಿಧಿ | ಸದಸ್ಯ |
| (3) | ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಥವಾ ಕಾರ್ಯದರ್ಶಿಯು ನಾಮ ನಿರ್ದೇಶನ ಮಾಡಿದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿ | ಸದಸ್ಯ |
| (4) | ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ ಅಥವಾ ಕಾರ್ಯದರ್ಶಿಯು ನಾಮನಿರ್ದೇಶನ ಮಾಡಿದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯದಲ್ಲದ ದರ್ಜೆಯ ಒಬ್ಬ ಅಧಿಕಾರಿ | ಸದಸ್ಯ |
| (5) | ನಿರ್ದೇಶಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯ ಕಾರ್ಯದರ್ಶಿ. |

(2) ಆಯ್ಕೆ ಸಮಿತಿಯ ಸಭೆಗೆ ಕೋರಂ, ಅಧ್ಯಕ್ಷನೂ ಸೇರಿದಂತೆ ಮೂವರು ಸದಸ್ಯರಿಗಿಂತ ಕಡಿಮೆ ಇರತಕ್ಕದ್ದಲ್ಲ.

(3) ಬಾಲಕ ನ್ಯಾಯ ಮಂಡಲಿಯ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ, ಆಯ್ಕೆ ಸಮಿತಿಯು, ಸಾರ್ವಜನಿಕರಿಂದ ಅರ್ಹ ಅಭ್ಯರ್ಥಿಗಳ ನಾಮನಿರ್ದೇಶನಗಳನ್ನು ಕೋರತಕ್ಕದ್ದು ಮತ್ತು ಹಾಗೆ ಸ್ವೀಕರಿಸಲಾದ ನಾಮನಿರ್ದೇಶನಗಳ ಪೈಕಿಯಿಂದ ಅಂತಿಮ ಆಯ್ಕೆ ಮಾಡುವುದಕ್ಕಾಗಿ ಒಂದು ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಪರಿಗಣನೆಗಾಗಿ ರಾಜ್ಯಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

**4. ಬಾಲಕ ನ್ಯಾಯ ಮಂಡಲಿಯ ಸದಸ್ಯರ ನೇಮಕಾತಿ.–** (1) 3ನೇ ನಿಯಮದ (1) ನೇ ಉಪ ನಿಯಮದ ಅಡಿಯಲ್ಲಿ ರಚಿಸಲಾದ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ 4ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ, ರಾಜ್ಯ ಸರ್ಕಾರವು ಇಬ್ಬರು ಸಮಾಜ ಸೇವಕರನ್ನು ನೇಮಕ ಮಾಡತಕ್ಕದ್ದು.

(2) ಮಂಡಲಿಯ ಸಮಾಜ ಸೇವಕ – ಸದಸ್ಯನು ಮೊದಲ ನೇಮಕಾತಿಯ ಸಮಯದಲ್ಲಿ 65 ವರ್ಷಗಳಿಗಿಂತ ಹೆಚ್ಚು ವಯಸ್ಸಿನವನಾಗಿರತಕ್ಕದ್ದಲ್ಲ ಮತ್ತು ಗರಿಷ್ಠ ಎರಡು ಅವಧಿ ಕಾಲದವರೆಗೆ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು.

(3) ಸಮಾಜ ಸೇವಕ – ಸದಸ್ಯನ ಸಂಬಂಧದಲ್ಲಿ ಉಂಟಾದ ಯಾವುದೇ ಆಕಸ್ಮಿಕ ಖಾಲಿಸ್ಥಾನವನ್ನು ಇನ್ನೊಬ್ಬ ವ್ಯಕ್ತಿಯನ್ನು ನೇಮಕ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು, ಮತ್ತು ಅವನು, ಮಂಡಲಿಯ ಉಳಿದ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

**5. ಬಾಲಕ ನ್ಯಾಯ ಮಂಡಲಿಯ ಸದಸ್ಯರ ಪದಾವಧಿ ಮತ್ತು ಅವರು ರಾಜೀನಾಮೆ ನೀಡುವ ವಿಧಾನ.–** (1) ಮಂಡಳಿಯ ಸದಸ್ಯರ ಪದಾವಧಿಯು, ಅವರು ನೇಮಕಗೊಂಡ ದಿನಾಂಕದಿಂದ ಮೂರು ವರ್ಷಗಳವರೆಗೆ ಇರತಕ್ಕದ್ದು.

(2) ಒಬ್ಬ ಸದಸ್ಯನು ಪ್ರಧಾನ ಮ್ಯಾಜಿಸ್ಟ್ರೇಟನಿಗೆ ಮೂರು ತಿಂಗಳಿಗೆ ಮುಂಚಿತವಾಗಿ, ಲಿಖಿತ ನೋಟೀಸನ್ನು ನೀಡಿ, ರಾಜ್ಯ ಸರ್ಕಾರಕ್ಕೆ ಅದರ ಒಂದು ಪ್ರತಿಯನ್ನು ಕಳುಹಿಸಿ, ಯಾವುದೇ ಸಮಯದಲ್ಲಿ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು. ಅಂಥ ರಾಜೀನಾಮೆಯನ್ನು ಪ್ರಧಾನ ಮ್ಯಾಜಿಸ್ಟ್ರೇಟನು ಅಂಗೀಕರಿಸಿದ ತರುವಾಯ ಅದು ಪರಿಣಾಮಕ್ಕೆ ಬರತಕ್ಕದ್ದು.

**6. ಮಂಡಲಿಯ ಉಪವೇಶನಗಳ ಸಮಯ ಮತ್ತು ಸ್ಥಳ.–** (1) ಒಂದು ಜಿಲ್ಲೆಯ ಅಥವಾ ಜಿಲ್ಲೆಗಳ ಸಮೂಹದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಪರಿವೀಕ್ಷಣಾಲಯದ ಆವರಣದಲ್ಲಿ ಮಂಡಲಿಯು ತನ್ನ ಉಪವೇಶನಗಳನ್ನು ನಡೆಸತಕ್ಕದ್ದು ಮತ್ತು ಪ್ರಧಾನ ಮ್ಯಾಜಿಸ್ಟ್ರೇಟನು ನಿರ್ಧರಿಸಬಹುದಾದಂಥ ಸಮಯದಲ್ಲಿ ಕಡೇ ಪಕ್ಷ ವಾರಕ್ಕೊಮ್ಮೆಯಾದರೂ ಸಭೆ ಸೇರತಕ್ಕದ್ದು. ಆದಾಗ್ಯೂ, ಅಗತ್ಯವಿದ್ದಾಗ, ಪ್ರಧಾನ ಮ್ಯಾಜಿಸ್ಟ್ರೇಟನು ಅಥವಾ ಸದಸ್ಯರ ಮನವಿಯ ಮೇಲೆ, ಪ್ರಧಾನ ಮ್ಯಾಜಿಸ್ಟ್ರೇಟನು ನಿರ್ದಿಷ್ಟಪಡಿಸಬಹುದಾದ ಅಂಥ ಸ್ಥಳ ಮತ್ತು ಅಂಥ ಸಮಯದಲ್ಲಿ ತುರ್ತುಸಭೆಗಳನ್ನು ಕರೆಯಬಹುದು.

(2) ಮಂಡಲಿಯ ಸಭೆಗೆ ಕೋರಂ ಪ್ರಧಾನ ಮ್ಯಾಜಿಸ್ಟ್ರೇಟನೂ ಸೇರಿದಂತೆ ಎರಡು ಆಗಿರತಕ್ಕದ್ದು.

(3) ಮಂಡಲಿಯು ಸಮಾಜ ಸೇವಕ – ಸದಸ್ಯರಿಗೆ ವಾಸ್ತವಿಕ ಪ್ರಯಾಣ ಭತ್ಯೆಯನ್ನು ಮತ್ತು ರಾಜ್ಯ ಸರ್ಕಾರದ "ಎ" ದರ್ಜೆಯ ಹಿರಿಯ ಶ್ರೇಣಿಯ ಅಧಿಕಾರಿಗೆ ಅನುಮತಿಸಬಹುದಾದಂಥ ಉಪವೇಶನ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

**7. ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಮತ್ತು ಸದಸ್ಯರ ನೇಮಕಾತಿಗೆ ಅರ್ಹತೆಗಳು.–** ಯಾರೇ ವ್ಯಕ್ತಿಯು,–

(i) ಮಕ್ಕಳ ಮನೋವಿಜ್ಞಾನ, ಸಮಾಜ ಸೇವೆ ಅಥವಾ ಸಮಾಜ ಶಾಸ್ತ್ರದಲ್ಲಿ ಒಂದು ಪದವಿಯನ್ನು ಪಡೆದಿದ್ದು ಆಯಾ ಕ್ಷೇತ್ರದಲ್ಲಿ ಕನಿಷ್ಠ ಐದು ವರ್ಷಗಳ ಅನುಭವ ಇದ್ದ ಹೊರತು; ಅಥವಾ

(ii) ಮಕ್ಕಳ ಕಲ್ಯಾಣ ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಅನುಭವ ಇರುವ ಶಿಕ್ಷಕ, ವೈದ್ಯ ಅಥವಾ ಹಿರಿಯ ನಿವೃತ್ತ ಸಾರ್ವಜನಿಕ ನೌಕರನಾಗಿದ್ದ ಹೊರತು

- ಅವನನ್ನು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಅಥವಾ ಸದಸ್ಯನನ್ನಾಗಿ ನೇಮಕ ಮಾಡತಕ್ಕದ್ದಲ್ಲ.

(2) 3ನೇ ನಿಯಮದ (1) ನೇ ಉಪನಿಯಮದ ಅಡಿಯಲ್ಲಿ ರಚಿಸಲಾದ ಆಯ್ಕೆ ಸಮಿತಿಯ ಶಿಫಾರಸುಗಳ ಮೇಲೆ 29 ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ, ರಾಜ್ಯ ಸರ್ಕಾರವು, ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷನನ್ನು ಮತ್ತು ಸದಸ್ಯರನ್ನು ನೇಮಕ ಮಾಡತಕ್ಕದ್ದು.

**8. ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರ ಪದಾವಧಿ ಮತ್ತು ರಾಜಿನಾಮೆ ನೀಡುವ ವಿಧಾನ.-** (1) ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರ ಪದಾವಧಿಯು, ಅವರು ನೇಮಕಗೊಂಡ ದಿನಾಂಕದಿಂದ ಮೂರು ವರ್ಷಗಳವರೆಗೆ ಇರತಕ್ಕದ್ದು.

(2) ಸಮಿತಿಯ ಸದಸ್ಯನಿಗೆ ಮೊದಲ ನೇಮಕಾತಿಯ ಅವಧಿಯಲ್ಲಿ 65 ವರ್ಷಗಳಿಗಿಂತ ಹೆಚ್ಚು ವಯಸ್ಸಾಗಿರತಕ್ಕದ್ದಲ್ಲ ಮತ್ತು ಅವನು ಗರಿಷ್ಠ ಎರಡು ಅವಧಿಗಳಿಗೆ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು.

(3) ರಾಜೀನಾಮೆ, ಮರಣ ಅಥವಾ ಯಾವುದೇ ಇತರ ಕಾರಣದಿಂದಾಗಿ ಸಮಿತಿಯಲ್ಲಿ ಉಂಟಾದ ಯಾವುದೇ ಆಕಸ್ಮಿಕ ಖಾಲಿ ಸ್ಥಾನವನ್ನು ಬೇರೊಬ್ಬ ವ್ಯಕ್ತಿಯನ್ನು ನೇಮಕ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು ಅವನು ಸಮಿತಿಯ ಉಳಿದ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(4) ಸದಸ್ಯನು, ರಾಜ್ಯ ಸರ್ಕಾರಕ್ಕೆ ಒಂದು ತಿಂಗಳ ಲಿಖಿತ ನೋಟೀಸನ್ನು ನೀಡುವ ಮೂಲಕ ಮತ್ತು ಸಮಿತಿಯ ಅಧ್ಯಕ್ಷನಿಗೆ ಅದರ ಒಂದು ಪ್ರತಿಯನ್ನು ಕಳುಹಿಸುವ ಮೂಲಕ ಯಾವುದೇ ಸಮಯದಲ್ಲಿ ರಾಜೀನಾಮೆ ನೀಡಬಹುದು.

(5) ಒಬ್ಬ ಸದಸ್ಯನಿಗೆ, ರಾಜ್ಯ ಸರ್ಕಾರದ "ಎ" ಗುಂಪಿನ ಹಿರಿಯ ಶ್ರೇಣಿಯ ಅಧಿಕಾರಿಗೆ ನೀಡಬಹುದಾದಂಥ ವಾಸ್ತವಿಕ ಪ್ರಯಾಣ ಭತ್ಯೆ ಮತ್ತು ಉಪವೇಶನ ಫೀಜನ್ನು ಸಂದಾಯ ಮಾಡತಕ್ಕದ್ದು.

**9. ಸಮಿತಿಯು ಸಭೆ ಸೇರುವ ಸಮಯ ಮತ್ತು ಸ್ಥಳ.-** (1) ಸಮಿತಿಯು ಮಕ್ಕಳ ಗೃಹದ ಆವರಣದಲ್ಲಿ ಅಥವಾ ಶಿಶು ಕಲ್ಯಾಣ ಸಮಿತಿಯು ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ಸ್ಥಳದಲ್ಲಿ ತನ್ನ ಸಭೆಗಳನ್ನು ನಡೆಸತಕ್ಕದ್ದು ಮತ್ತು ಕೊನೇ ಪಕ್ಷ ವಾರಕ್ಕೆ ಎರಡು ಬಾರಿಯಾದರೂ ಸಭೆ ಸೇರತಕ್ಕದ್ದು.

(2) ಅಧ್ಯಕ್ಷನೂ ಸೇರಿದಂತೆ ಮೂವರು ಸದಸ್ಯರು ಸಭೆಯ ಕೋರಂ ಆಗಿರತಕ್ಕದ್ದು. ಸಮಿತಿಯು ಸಭೆ ಸೇರದಿರುವಾಗ ಒಬ್ಬ ಸದಸ್ಯನು ಕೈಗೊಂಡ ಯಾವುದೇ ನಿರ್ಣಯಕ್ಕೆ ಸಮಿತಿಯ ಮುಂದಿನ ಸಭೆಯಲ್ಲಿ ಅನುಸಮರ್ಥನೆಯು ಅಗತ್ಯವಾಗಿರತಕ್ಕದ್ದು.

(3) ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳ ಪ್ರಕರಣಗಳ ಅಂತಿಮ ವಿಲೆಯನ್ನು, ಕಡೇ ಪಕ್ಷ, ಸಮಿತಿಯ ಮೂವರು ಸದಸ್ಯರ ಆದೇಶದ ಮೂಲಕ ಮಾಡತಕ್ಕದ್ದು. ಹಾಗೆ ವಿಲೆ ಮಾಡುವುದಕ್ಕೆ ಮುಂಚೆ, ಮಗುವಿನ ವಯಸ್ಸು, ದೈಹಿಕ ಮತ್ತು ಮಾನಸಿಕ ಆರೋಗ್ಯದ ಹಿನ್ನೆಲೆ, ಮಗುವಿನ ಅಭಿಪ್ರಾಯ ಮತ್ತು ಪರಿವೀಕ್ಷಣಾಧಿಕಾರಿಯ ಶಿಫಾರಸು - ಇವುಗಳನ್ನು ಸಮಿತಿಯು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

## ಅಧ್ಯಾಯ – III

## ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕ

**10. ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕನನ್ನು ಮಂಡಲಿಯ ಮುಂದೆ ಹಾಜರುಪಡಿಸುವುದು.–** ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕನನ್ನು,-

(1) ಯಾರೇ ಪೊಲೀಸ್ ಅಧಿಕಾರಿ ಅಥವಾ ಬಾಲಾಪರಾಧಿ ವಿಶೇಷ ಪೊಲೀಸ್ ಘಟಕದ ಮಕ್ಕಳ ಕಲ್ಯಾಣಾಧಿಕಾರಿಯ ಮೂಲಕ, ಅಥವಾ

(2) ಮಕ್ಕಳ ಸಹಾಯವಾಣಿ ಅಥವಾ ಮನ್ನಣೆ ಪಡೆದ ಯಾವುದೇ ಸ್ವಯಂಸೇವಾ ಸಂಸ್ಥೆಯ ಮೂಲಕ, ಅಥವಾ

(3) ಯಾರೇ ಲೋಕ ನೌಕರನ ಮೂಲಕ

- ಮಂಡಲಿಯ ಮುಂದೆ ಹಾಜರುಪಡಿಸಬಹುದು.

**11. ಪರಿವೀಕ್ಷಣಾಲಯಕ್ಕೆ ಬಾಲಕನನ್ನು ಕಳುಹಿಸುವ ವಿಧಾನ.-** (1) ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕನು, ಪೊಲೀಸರಿಂದ ಅಥವಾ ಬಾಲಾಪರಾಧಿ ವಿಶೇಷ ಪೊಲೀಸ್ ಘಟಕದ ಮಕ್ಕಳ ಕಲ್ಯಾಣ ಅಧಿಕಾರಿಯಿಂದ ದಸ್ತಗಿರಿಗೊಳಪಟ್ಟರೆ, ಬಾಲಾಪರಾಧಿ ವಿಶೇಷ ಪೊಲೀಸು ಘಟಕ ಅಥವಾ ಗೊತ್ತುಮಾಡಿದ ಪೊಲೀಸು ಅಧಿಕಾರಿಯ ವಶದಲ್ಲಿ ಅವನನ್ನು ಇರಿಸತಕ್ಕದ್ದು ಮತ್ತು ಅವರು ಮಂಡಲಿಯ ಒಬ್ಬ ಸದಸ್ಯನಿಗೆ ಆ ವಿಷಯವನ್ನು ತಕ್ಷಣವೇ ವರದಿ ಮಾಡತಕ್ಕದ್ದು.

(2) ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕನನ್ನು ಹಾಜರುಪಡಿಸಲು ಗೊತ್ತುಮಾಡಲಾದ ವ್ಯಕ್ತಿಗಳು ಒಂದು ವರದಿಯನ್ನು ಮಂಡಲಿಗೆ ಸಲ್ಲಿಸಬಹುದು, ಅದರಲ್ಲಿ ಬಾಲಕರ ವಿಶೇಷ ಪೊಲೀಸು ಘಟಕದಲ್ಲೇ ಮಕ್ಕಳ ಕಲ್ಯಾಣಾಧಿಕಾರಿಯು ಬುದ್ಧಿಮಾತು ಹೇಳಿ ತರುವಾಯ ತಕ್ಷಣವೇ ಬಿಡುಗಡೆ ಮಾಡುವ ಬಗ್ಗೆ ಅಥವಾ ರಾಜೀ ಮಾಡುವ ಬಗ್ಗೆ ಶಿಫಾರಸುಗಳು ಸೇರಿರಬಹುದು.

(3) ಅಂಥ ಶಿಫಾರಸುಗಳನ್ನು ಮಂಡಲಿಯ ಒಬ್ಬ ಸದಸ್ಯನು ಅಂಗೀಕರಿಸಿ ಸಮರ್ಥಿಸಿದಾಗ, ಸಣ್ಣ ಪುಟ್ಟ ಅಪರಾಧಗಳನ್ನು ಮಾಡಿರುವ ಮಕ್ಕಳನ್ನು ಗರಿಷ್ಠ ಇಪ್ಪತ್ನಾಲ್ಕು ಗಂಟೆಗಳ ಪ್ರಾಥಮಿಕ ವಿಚಾರಣಾ ಅವಧಿಯೊಳಗಾಗಿ ಬಾಲಕರ ವಿಶೇಷ ಪೊಲೀಸು ಘಟಕದಿಂದಲೇ ಬಿಡುಗಡೆ ಮಾಡಬಹುದು. ಇಲ್ಲದಿದ್ದರೆ, ಸದರಿ ಮಗುವನ್ನು ಪರಿವೀಕ್ಷಣಾ ಗೃಹಕ್ಕೆ ವರ್ಗಾವಣೆ ಮಾಡಬಹುದು ಅಥವಾ ಅದರಲ್ಲಿ ಉಳಿಸಬಹುದು ಮತ್ತು ಮಂಡಲಿಯ ಮುಂದೆ ಖುದ್ದಾಗಿ ಹಾಜರುಪಡಿಸಬಹುದು.

(4) ಬಾಲಕರ ವಿಶೇಷ ಪೊಲೀಸು ಘಟಕದಲ್ಲಿನ ಮಕ್ಕಳ ಕಲ್ಯಾಣಾಧಿಕಾರಿಯು ಆ ಮಗುವನ್ನು ಸ್ನೇಹಯುತವಾಗಿ ಬರಮಾಡಿಕೊಳ್ಳತಕ್ಕದ್ದು ಮತ್ತು ಪ್ರಾಥಮಿಕ ವಿಚಾರಣೆಯ ಅವಧಿಯಲ್ಲಿ ಆ ಮಗುವು ನಿರಾತಂಕವಾಗಿ ಇರುವಂತೆ ನೋಡಿಕೊಳ್ಳತಕ್ಕದ್ದು.

(5) ಪ್ರಾಥಮಿಕ ವಿಚಾರಣೆಗಳನ್ನು ನಡೆಸುವುದಕ್ಕಾಗಿ, ಆ ಮಗುವನ್ನು ಪೊಲೀಸು ಠಾಣೆಯ ಲಾಕಪ್‌ನಲ್ಲಿ ಇಡತಕ್ಕದ್ದಲ್ಲ ಮತ್ತು ಸಾಧ್ಯವಾದಷ್ಟು ಬೇಗ ಒಂದು ಪರಿವೀಕ್ಷಣಾಲಯಕ್ಕೆ ಅಥವಾ ಸೂಕ್ತ ಸಂಸ್ಥೆಗೆ ಕರೆದೊಯ್ಯತಕ್ಕದ್ದು.

(6) ಆ ಮಗುವನ್ನು, ಪರಿವೀಕ್ಷಣಾಲಯದ ಪರಿವೀಕ್ಷಣಾಧಿಕಾರಿಯು ಅಥವಾ ಸಂದರ್ಭಾನುಸಾರ, ಸೂಕ್ತ ಸಂಸ್ಥೆಯು, ದಸ್ತಗಿರಿ ಮಾಡಿದ ಇಪ್ಪತ್ನಾಲ್ಕು ಗಂಟೆಗಳೊಳಗಾಗಿ (ಪೊಲೀಸು ಠಾಣೆಯಿಂದ/ ಸುರಕ್ಷಿತ ಸ್ಥಳದಿಂದ ಮಂಡಲಿಗೆ ಮಗುವನ್ನು ಕರೆತರಲು ತೆಗೆದುಕೊಂಡ ಸಮಯವನ್ನು ಹೊರತುಪಡಿಸಿ) ಪ್ರಧಾನ ಮ್ಯಾಜಿಸ್ಟ್ರೇಟ್ ಅಥವಾ ಮಂಡಲಿಯ ಒಬ್ಬ ಸದಸ್ಯನ ಮುಂದೆ ಹಾಜರುಪಡಿಸತಕ್ಕದ್ದು. ಮ್ಯಾಜಿಸ್ಟ್ರೇಟ್ / ಮಂಡಲಿಯ ಮುಂದೆ ಹಾಜರುಪಡಿಸುವಲ್ಲಿ ವಿಳಂಬ ಉಂಟಾದ ಸಂದರ್ಭದಲ್ಲಿ, ಹಾಗೆ ಮಾಡದಿರುವ ಬಗ್ಗೆ ಕಾರಣಗಳನ್ನು ಪೊಲೀಸು ಡೈರಿಯಲ್ಲಿ / ಸಾಮಾನ್ಯ ಡೈರಿಯಲ್ಲಿ ದಾಖಲು ಮಾಡತಕ್ಕದ್ದು.

(7) ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕನೊಂದಿಗೆ ವ್ಯವಹರಿಸಲು ಗೊತ್ತುಮಾಡಲಾದ ಎಲ್ಲ ವ್ಯಕ್ತಿಗಳು, ದಸ್ತಗಿರಿ ಮಾಡುವ ಸಂದರ್ಭವನ್ನು ಹೊರತುಪಡಿಸಿ, ಸಾದಾ ಉಡುಪುಗಳನ್ನು ಮಾತ್ರ ಧರಿಸತಕ್ಕದ್ದೇ ವಿನಃ ಪೊಲೀಸು ಸಮವಸ್ತ್ರವನ್ನು ಧರಿಸತಕ್ಕದ್ದಲ್ಲ. ಆದಾಗ್ಯೂ, ಗುರುತಿನ ಚೀಟಿಯನ್ನು ಜೊತೆಯಲ್ಲಿ ಒಯ್ಯತಕ್ಕದ್ದು ಮತ್ತು ಕೇಳಿದಾಗ ಅದನ್ನು ಹಾಜರುಪಡಿಸತಕ್ಕದ್ದು.

(8) ಪರಿವೀಕ್ಷಣಾಲಯಕ್ಕೆ ಅಂಥ ಮಗುವನ್ನು ಕರೆತರುವಾಗ, ಪೊಲೀಸರು ಮಗುವಿಗೆ ಬೇಡಿಯನ್ನು ತೊಡಿಸತಕ್ಕದ್ದಲ್ಲ. ಯಾವುದೇ ರೀತಿಯಲ್ಲಿ ಕೆಟ್ಟದಾಗಿ ನಡೆಸಿಕೊಳ್ಳತಕ್ಕದ್ದಲ್ಲ ಅಥವಾ ತೊಂದರೆ ನೀಡತಕ್ಕದ್ದಲ್ಲ. ಒಂದು ಹೆಣ್ಣುಮಗುವಿನ ಸಂದರ್ಭದಲ್ಲಿ, ಒಬ್ಬ ಮಹಿಳಾ ಪೊಲೀಸ್ ಅವಳೊಂದಿಗೆ ಇರತಕ್ಕದ್ದು ಮತ್ತು ಪರಿವೀಕ್ಷಣಾಲಯದಲ್ಲಿ ಅಧಿಕಾರಿಗಳ ಬಳಿ ಆ ಮಗು ಸುರಕ್ಷಿತವಾಗಿರುವ ಬಗ್ಗೆ ಸೂಕ್ತ ಎಚ್ಚರ ವಹಿಸತಕ್ಕದ್ದು.

(9) ಕಾನೂನು ಸಂಬಂಧ ಸಂಘರ್ಷಕ್ಕೊಳಗಾದ ಬಾಲಕನನ್ನು ಮಕ್ಕಳ ಸಹಾಯವಾಣಿ ಅಥವಾ ಮಾನ್ಯತೆ ಪಡೆದ ಸ್ವಯಂ ಸೇವಾ ಸಂಸ್ಥೆ ಅಥವಾ ಒಬ್ಬ ಸಾರ್ವಜನಿಕ ನೌಕರನು ದಸ್ತಗಿರಿ ಮಾಡಿದರೆ, ಅಂಥ ಸ್ವಯಂ ಸೇವಾ ಸಂಸ್ಥೆ / ಸಾರ್ವಜನಿಕ ನೌಕರ ಅಥವಾ ಮಕ್ಕಳ ಸಹಾಯ ವಾಣಿಯು ಸಂಬಂಧಪಟ್ಟ ಪೊಲೀಸು ಠಾಣೆಗೆ ತಿಳಿಸತಕ್ಕದ್ದು. ಅವರು ಪ್ರತಿಯಾಗಿ ಅದನ್ನು ಬಾಲಕರ ವಿಶೇಷ ಪೊಲೀಸು ಘಟಕಕ್ಕೆ ತಿಳಿಸಬಹುದು.

(10) ಬಾಲಕನನ್ನು ಯಾವ ಬಾಲಕರ ವಿಶೇಷ ಪೊಲೀಸು ಘಟಕಕ್ಕೆ ಕರೆತರಲಾಗಿದೆಯೋ ಅದು, ಅಂಥ ದಸ್ತಗಿರಿಗೆ ಸಂಬಂಧಪಟ್ಟ ಪರಿವೀಕ್ಷಣಾಧಿಕಾರಿಗೆ ಆ ಬಾಲಕನ ಪೂರ್ವ ವೃತ್ತಾಂತ ಮತ್ತು ಕುಟುಂಬದ ಹಿನ್ನೆಲೆಯ ಬಗ್ಗೆ ಮತ್ತು ವಿಚಾರಣೆಯನ್ನು ನಡೆಸಲು ಮಂಡಲಿಗೆ ನೆರವಾಗುವ ಸಂಭವವಿರುವ ಇತರ ಮುಖ್ಯ ಸನ್ನಿವೇಶಗಳ ಬಗ್ಗೆ ಮಾಹಿತಿಯನ್ನು ಪಡೆಯುವಂತೆ ತಿಳಿಸತಕ್ಕದ್ದು.

(11) ಪರಿವೀಕ್ಷಣಾಧಿಕಾರಿಯು, ತಂದೆ ತಾಯಿಗಳಿಗೆ ಅಥವಾ ಕಾನೂನು ಸಮ್ಮತ ಪಾಲಕನಿಗೆ ದಸ್ತಗಿರಿಯ ಬಗ್ಗೆ ತಿಳಿಸತಕ್ಕದ್ದು ಮತ್ತು ಬಾಲಕನನ್ನು ಯಾವುವೇ ಹೆಚ್ಚಿನ ಪ್ರಶ್ನೆಗಳಿಗೆ ಒಳಪಡಿಸುವ ಸಮಯದಲ್ಲಿ ತಂದೆ ತಾಯಿ ಅಥವಾ ಕಾನೂನು ಸಮ್ಮತ ಪಾಲಕನ ಹಾಜರಾತಿಯನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸತಕ್ಕದ್ದು. ಪ್ರಾರಂಭಿಕ ವಿಚಾರಣೆಗಳನ್ನು ಸಾಧ್ಯವಾದಷ್ಟು ಬೇಗ ಪೂರ್ಣಗೊಳಿಸತಕ್ಕದ್ದು ಮತ್ತು ಅದರಿಂದ ಬಾಲಕನಿಗೆ ಯಾವುದೇ ರೀತಿಯ ಒತ್ತಡ ಉಂಟಾಗದಂತೆ ಎಚ್ಚರ ವಹಿಸತಕ್ಕದ್ದು.

(12) ಮಾನ್ಯತೆ ಪಡೆದ ಸ್ವಯಂಸೇವಾ ಸಂಸ್ಥೆಯು, ದಸ್ತಗಿರಿಯ ಸನ್ನಿವೇಶಗಳು ಮತ್ತು ಮಾಡಲಾದ ಅಪರಾಧಗಳನ್ನು ನಿರೂಪಿಸುವ ಒಂದು ವರದಿಯನ್ನು ಸಿದ್ಧಪಡಿಸತಕ್ಕದ್ದು, ಮತ್ತು ಆ ಬಾಲಕನನ್ನು ಅವನ ವರದಿಯೊಂದಿಗೆ ಮಂಡಲಿಯ ಅಥವಾ ಪೊಲೀಸರ ಮುಂದೆ ಹಾಜರುಪಡಿಸತಕ್ಕದ್ದು.

(13) ಪರಿವೀಕ್ಷಣಾಲಯವು / ಸೂಕ್ತ ಸಂಸ್ಥೆಯು, ದಸ್ತಗಿರಿ ಮಾಡಲಾಗಿರುವ ಅಥವಾ ತಮ್ಮ ಪ್ರಭಾರದಲ್ಲಿ ಇಟ್ಟಿರುವ ಮಗುವಿಗೆ ಅಂಥ ಅವಧಿಯವರೆಗೆ ಸುರಕ್ಷತೆಗೆ ಮತ್ತು ಅದಕ್ಕೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ಜವಾಬ್ದಾರಿಯಾಗಿರತಕ್ಕದ್ದು.

(14) ಪರಿವೀಕ್ಷಣಾಲಯ ಅಥವಾ ಸೂಕ್ತ ಸಂಸ್ಥೆಯಲ್ಲಿ ಬಾಲಕನಿಗೆ ಪ್ರವೇಶ ದೊರೆತ ತರುವಾಯ ತಕ್ಷಣದ ವೈದ್ಯಕೀಯ ಚಿಕಿತ್ಸೆ, ಮೂಲಭೂತ ಅಗತ್ಯತೆಗಳು, ಸಲಹಾ ವ್ಯವಸ್ಥೆ - ಇವುಗಳನ್ನು ಒದಗಿಸತಕ್ಕದ್ದು.

(15) ರಾಜ್ಯ ಸರ್ಕಾರವು, ಪರಿವೀಕ್ಷಣಾ ಸೇವೆಗಳನ್ನು, ಸಲಹಾ ವ್ಯವಸ್ಥೆಯನ್ನು, ವಿಷಯ ನಿರ್ವಹಣೆಯನ್ನು, ಸುರಕ್ಷಿತ ಸ್ಥಳವನ್ನು ಒದಗಿಸಬಲ್ಲಂಥ ಮತ್ತು ಬಾಲಕರ ವಿಶೇಷ ಪೊಲೀಸು ಘಟಕದೊಂದಿಗೆ ಸಹವರ್ತಿಸುವ ನೋಂದಾಯಿತ ಸ್ವಯಂ ಸೇವಾ ಸಂಸ್ಥೆಗಳಿಗೆ ಮಾತ್ರ ಮಾನ್ಯತೆ ನೀಡತಕ್ಕದ್ದು.

**12. ಬಾಲಕರ ವಿಶೇಷ ಪೊಲೀಸು ಘಟಕ ಮತ್ತು ಅದರ ಕಾರ್ಯವಿಧಾನ.-** (1) (ಎ) ಒಬ್ಬ ಬಾಲಕ / ಮಕ್ಕಳ ಕಲ್ಯಾಣ ಅಧಿಕಾರಿಯನ್ನು 63ನೇ ಪ್ರಕರಣಕ್ಕನುಸಾರವಾಗಿ ಪೊಲೀಸು ಠಾಣೆಯ ಮಟ್ಟದಲ್ಲಿ ಗೊತ್ತುಮಾಡತಕ್ಕದ್ದು ಮತ್ತು ಆತನಿಗೆ ಮಕ್ಕಳ ಹಕ್ಕುಗಳು, ಬಾಲಕ ನ್ಯಾಯ ವ್ಯವಸ್ಥೆ, ಮಕ್ಕಳ ಮನೋವಿಜ್ಞಾನ, ಮುಂತಾದವುಗಳ ಬಗ್ಗೆ ಸೂಕ್ತ ತರಬೇತಿ ಮತ್ತು ಪುನರ್‌ಮನನವನ್ನು ನೀಡತಕ್ಕದ್ದು;

(ಬಿ) ಬಾಲಕರ ವಿಶೇಷ ಪೊಲೀಸು ಘಟಕಗಳಿಗೆ ಈ ಅಧಿನಿಯಮದ ಅಡಿಯಲ್ಲಿ ಬಾಲಕರನ್ನು ಗುರುತಿಸುವಲ್ಲಿ ಮತ್ತು ಬಾಲಕರು ಅಥವಾ ಮಕ್ಕಳಿಗೆ ನೆರವಾಗುವಲ್ಲಿ ಸಹಾಯ ಮಾಡಲು ಮಾನ್ಯತೆ ಪಡೆದ ಸ್ವಯಂ ಸೇವಾ ಸಂಸ್ಥೆಗಳು ನೆರವಾಗತಕ್ಕದ್ದು.

(2) (i) ಬಾಲಕರ ವಿಶೇಷ ಪೊಲೀಸು ಘಟಕವು, ಮಗುವನ್ನು ಸ್ವೀಕರಿಸತಕ್ಕದ್ದು, ಮತ್ತು ಅವನ ವಿರುದ್ಧ ಇರುವ ಆರೋಪಗಳನ್ನು ಯಾವುದೇ ವಿಳಂಬ ಮಾಡದೆ ಮತ್ತು ನೇರವಾಗಿ ಅವನಿಗೆ ಅರ್ಥವಾಗುವ ಭಾಷೆಯಲ್ಲಿ ಮತ್ತು ರೀತಿಯಲ್ಲಿ, ಅದನ್ನು ಪೂರ್ಣವಾಗಿ ಗ್ರಹಿಸುವ ಹಾಗೆ ಅವನಿಗೆ ತಿಳಿಸತಕ್ಕದ್ದು;

(ii) ತಪ್ಪೊಪ್ಪಿಕೊಳ್ಳುವಂತೆ ಅಥವಾ ಸಾಕ್ಷ್ಯ ನೀಡುವಂತೆ ಮಗುವನ್ನು ಒತ್ತಾಯಪಡಿಸತಕ್ಕದ್ದಲ್ಲ. ಮಗುವಿನಿಂದ ಮಾಹಿತಿಯನ್ನು ಹೊರಡಿಸುವ ದೃಷ್ಟಿಯಿಂದ ಯಾವುದೇ ರೀತಿಯ ಹಿಂಸೆ ಅಥವಾ ಕಿರುಕುಳ ನೀಡತಕ್ಕದ್ದಲ್ಲ;

(iii) ಸಂಪರ್ಕ ಸ್ಥಳದಲ್ಲಿ ತ್ವರಿತ ನಿರ್ಧರಣೆಯನ್ನು ಮಾಡಿ ಅದರ ವಿವರಗಳನ್ನು ದಾಖಲು ಮಾಡತಕ್ಕದ್ದು;

(iv) ಆ ಮಗುವನ್ನು ಬಾಲಕರ ವಿಶೇಷ ಪೊಲೀಸು ಘಟಕದ ಅಧಿಕಾರಿಗಳಲ್ಲದ ಪೊಲೀಸನು ಸ್ವೀಕರಿಸಿದ್ದರೆ, ಅವನು, ಸಾಧ್ಯವಾದಷ್ಟು ಮಟ್ಟಿಗೆ ಆ ಮಗುವಿನ ಪ್ರಕರಣವನ್ನು ಬಾಲಕರ ವಿಶೇಷ ಪೊಲೀಸು ಘಟಕಕ್ಕೆ ಅಥವಾ 32 ನೇ ಪ್ರಕರಣದ ಅಡಿಯಲ್ಲಿನ ಯಾವುದೇ ಇತರ ಪ್ರಾಧಿಕಾರಕ್ಕೆ ವರ್ಗಾವಣೆ ಮಾಡತಕ್ಕದ್ದು;

(v) ಪೊಲೀಸರು ಒಂದು ಮಗುವನ್ನು ವಶಕ್ಕೆ ತೆಗೆದುಕೊಂಡಾಗಲೆಲ್ಲಾ, ಆ ಮಗುವನ್ನು ತನಿಖೆಗಾಗಿ ಮಕ್ಕಳ ಕಲ್ಯಾಣ ಅಧಿಕಾರಿಯ ಬಳಿ ಕಳುಹಿಸಿಕೊಡತಕ್ಕದ್ದು. ಅವನು ಪ್ರತಿಯಾಗಿ ಪ್ರಾರಂಭಿಕ ವಿಚಾರಣೆ ನಡೆಸಿದ ತರುವಾಯ, ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಗುವಿನ ಸಂದರ್ಭದಲ್ಲಿ ಆ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಅಥವಾ ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕನ ಸಂದರ್ಭದಲ್ಲಿ, ಬಾಲಕರ ವಿಶೇಷ ಪೊಲೀಸು ಘಟಕಕ್ಕೆ ತಿಳಿಸಿ ಅವನನ್ನು ಬಾಲಕ ನ್ಯಾಯ ಮಂಡಲಿಯ ಮುಂದೆ ಹಾಜರುಪಡಿಸತಕ್ಕದ್ದು;

(vi) ತನಿಖೆ, ವಿಚಾರಣೆ, ಶೋಧನೆ, ಮುಂತಾದವುಗಳನ್ನು ನಡೆಸುವಾಗ ಆ ಮಗುವನ್ನು ಸಭ್ಯತೆ ಮತ್ತು ಘನತೆಯಿಂದ ನೋಡಿಕೊಳ್ಳತಕ್ಕದ್ದು;

(vii) ಪೊಲೀಸರು ಸಾಮಾನ್ಯ ಸಂದರ್ಭಗಳಲ್ಲಿ, ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಒಬ್ಬ ಬಾಲಕನನ್ನು ಸೂರ್ಯಾಸ್ತ ಮತ್ತು ಸೂರ್ಯೋದಯದ ನಡುವಣ ಅವಧಿಯಲ್ಲಿ ವಶಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ. ಅಸಾಮಾನ್ಯ ಸಂದರ್ಭಗಳಲ್ಲಿ ಪೊಲೀಸರು ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕನನ್ನು ಸೂರ್ಯಾಸ್ತ ಮತ್ತು ಸೂರ್ಯೋದಯದ ನಡುವಣ ಅವಧಿಯಲ್ಲಿ ವಶಕ್ಕೆ ತೆಗೆದುಕೊಳ್ಳುವುದು ಅಗತ್ಯವಾದರೆ, ಪೊಲೀಸರು ಆ ಬಾಲಕನನ್ನು ಪೊಲೀಸು ಠಾಣೆಯ ಲಾಕಪ್‌ನಲ್ಲಿ ಇರಿಸತಕ್ಕದ್ದಲ್ಲ. ಆದರೆ ಸಂಗತಿಯನ್ನು ಲಿಖಿತದಲ್ಲಿ ದಾಖಲು ಮಾಡಿ, ಆ ಬಾಲಕನನ್ನು ಸುರಕ್ಷಿತ ಸ್ಥಳದಲ್ಲಿ ಅಥವಾ ಪರಿವೀಕ್ಷಣಾಲಯದಲ್ಲಿ ಅಥವಾ ಒಂದು ಸೂಕ್ತ ಸಂಸ್ಥೆಯಲ್ಲಿ ಅಥವಾ ಸೂಕ್ತ ವ್ಯಕ್ತಿಯ ರಕ್ಷಣೆಯಲ್ಲಿ ಇರಿಸತಕ್ಕದ್ದು;

(viii) ಪೊಲೀಸರು, ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕನನ್ನು ವಶಕ್ಕೆ ತೆಗೆದುಕೊಂಡಾಗ, ಆದಷ್ಟು ಬೇಗನೆ, ಪರಿವೀಕ್ಷಣಾಧಿಕಾರಿಗೆ ಮತ್ತು ಸದರಿ ಬಾಲಕನ ತಂದೆ ತಾಯಿ / ಪಾಲಕನಿಗೆ ತಿಳಿಸತಕ್ಕದ್ದು.

(3) ಕಾನೂನಿನ ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕನನ್ನು ಬಾಲಕ ನ್ಯಾಯ ಮಂಡಲಿಯ ಮುಂದೆ ಹಾಜರುಪಡಿಸಿದಾಗಲೆಲ್ಲಾ, ಪೊಲೀಸರು ಈ ಮುಂದಿನ ವಿವರಗಳನ್ನು ಒದಗಿಸತಕ್ಕದ್ದು:-

(i) ಒಂದು ಮಗುವನ್ನು ವಶಕ್ಕೆ ತೆಗೆದುಕೊಂಡ ದಿನಾಂಕ ಮತ್ತು ಸಮಯ, ಮಗುವಿನ ವಿಳಾಸ, ಮಾಡಲಾಗಿದೆಯೆಂದು ಹೇಳಲಾದ ಅಪರಾಧ ಮತ್ತು ಮಗುವನ್ನು ಬಾಲಕ ನ್ಯಾಯ ಮಂಡಲಿಯ ಮುಂದೆ ಹಾಜರುಪಡಿಸುವ ಸಮಯದವರೆಗೆ ಆ ಮಗುವನ್ನು ಇಟ್ಟಿದ್ದಂಥ ಸ್ಥಳ;

(ii) ಪರಿವೀಕ್ಷಣಾಧಿಕಾರಿಗೆ ಅಥವಾ ಮಗುವಿನ ತಂದೆ ತಾಯಿ/ ಪಾಲಕನಿಗೆ ಕಳುಹಿಸಿದ್ದ ತಿಳಿವಳಿಕೆ ಪತ್ರದ ಪ್ರತಿ;

(iii) ವಶಕ್ಕೆ ತೆಗೆದುಕೊಳ್ಳುವ ಸಮಯದಲ್ಲಿ ಮಗುವಿನಿಂದ ಪಡೆಯಲಾದ ಸ್ವತ್ತು ಅಥವಾ ವಸ್ತುಗಳ ವಿವರಗಳು;

(iv) ಪೊಲೀಸರು ಕರ್ತವ್ಯದ ಮೇಲಿರುವಾಗ ಮಗುವನ್ನು ವಶಕ್ಕೆ ತೆಗೆದುಕೊಳ್ಳುವ ಸಮಯದಲ್ಲಲ್ಲದೆ ಉಳಿದ ಸಮಯದಲ್ಲಿ ಸಾದಾ ಉಡುಪಿನಲ್ಲಿ ಮಕ್ಕಳನ್ನು ನೋಡಿಕೊಳ್ಳತಕ್ಕದ್ದು;

(v) ಪೊಲೀಸರು ಮಗುವಿಗೆ ಬೇಡಿ ಅಥವಾ ಸಂಕೋಲೆಯನ್ನು ತೊಡಿಸತಕ್ಕದ್ದಲ್ಲ.

**13. ಮಂಡಲಿಯು ವಿಚಾರಣೆಯನ್ನು ನಡೆಸುವಾಗ ಅನುಸರಿಸಬೇಕಾದ ಕಾರ್ಯವಿಧಾನ.-** (1) ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕನನ್ನು, ಪ್ರಧಾನ ಮ್ಯಾಜಿಸ್ಟ್ರೇಟರ ಮುಂದೆಯಾಗಲಿ ಅಥವಾ ಮಂಡಲಿಯು ಉಪವೇಶನದಲ್ಲಿಲ್ಲದಿರುವಾಗ, ಮಂಡಲಿಯ ಸಮಾಜ ಸೇವಕ - ಸದಸ್ಯನ ಮುಂದೆಯಾಗಲಿ ಹಾಜರುಪಡಿಸತಕ್ಕದ್ದು. ಒಂದು ಮಗುವನ್ನು ಮಂಡಲಿಯ ಒಬ್ಬ ಸದಸ್ಯನ ಮುಂದೆ ಹಾಜರುಪಡಿಸಿದಾಗ, ಆ ಸದಸ್ಯನು ನೀಡಿದ ಆದೇಶವನ್ನು ಮಂಡಲಿಯ ಮುಂದಿನ ಸಭೆಯಲ್ಲಿ ಸ್ಥಿರೀಕರಿಸತಕ್ಕದ್ದು.

(2) ಮಂಡಲಿಯು, ಪ್ರಾರಂಭಿಕ ವಿಚಾರಣೆಯನ್ನು ನಡೆಸುವ ದೃಷ್ಟಿಯಿಂದ ಮಗುವನ್ನು ಪೊಲೀಸು ಠಾಣೆಯ ಲಾಕಪ್‌ನಲ್ಲಿ ಇಟ್ಟಿರಲಿಲ್ಲವೆಂಬ ಬಗ್ಗೆ ಪೊಲೀಸರ ಲಿಖಿತ ಘೋಷಣೆಯಿಂದಾಗಲಿ ಅಥವಾ ಬೇರೆ ರೀತಿಯಿಂದಾಗಲಿ ಸ್ವತಃ ಮನದಟ್ಟು ಮಾಡಿಕೊಳ್ಳತಕ್ಕದ್ದು. ಪ್ರತಿಯಾಗಿ ನಲವತ್ತೆಂಟು ಗಂಟೆಗಳನ್ನು ಮೀರದಂಥ ಸಾಧ್ಯವಾದಷ್ಟು ಕಡಿಮೆ ಕಾಲಾವಧಿಯೊಳಗೆ ಅವನನ್ನು ಪರಿವೀಕ್ಷಣಾಲಯ ಅಥವಾ ಸೂಕ್ತ ಸಂಸ್ಥೆಯಂಥ ಒಂದು ಸುರಕ್ಷಿತ ಸ್ಥಳಕ್ಕೆ ಒಯ್ಯತಕ್ಕದ್ದು.

(3) ಮಗುವನ್ನು ಮಂಡಲಿಯ ಮುಂದೆ ತರುವ ಉದ್ದೇಶಕ್ಕಾಗಿ, ಮಗುವನ್ನು ವಶಕ್ಕೆ ತೆಗೆದುಕೊಂಡ ಪೊಲೀಸರು ಅಥವಾ ಯಾರೇ ಇತರ ವ್ಯಕ್ತಿಯು ಮಗುವನ್ನು ಹಿಂಸೆಗೆ ಅಥವಾ ಕಿರುಕುಳಕ್ಕೆ ಗುರಿಪಡಿಸಿಲ್ಲ ಎಂಬುದನ್ನು ಮಂಡಲಿಯು ಮನದಟ್ಟು ಮಾಡಿಕೊಳ್ಳತಕ್ಕದ್ದು. ಯಾರೇ ಹೆಣ್ಣುಮಗುವನ್ನು ಪೊಲೀಸರು ಸೂರ್ಯಾಸ್ತ ಮತ್ತು ಸೂರ್ಯೋದಯದ ನಡುವೆ ವಶಕ್ಕೆ ತೆಗೆದುಕೊಂಡಿಲ್ಲ, ಆದರೆ ಸಂದರ್ಭವು, ಅಗತ್ಯಪಡಿಸಿದ್ದರೆ ಅವಳನ್ನು ಒಂದು ಸುರಕ್ಷಿತ ಸ್ಥಳದಲ್ಲಿ ಅಥವಾ ಒಂದು ಪರಿವೀಕ್ಷಣಾಲಯದಲ್ಲಿ ಒಬ್ಬ ಮಹಿಳೆಯ ರಕ್ಷಣೆಯಲ್ಲಿ ಇಡಲಾಗಿತ್ತೆಂಬ ಬಗ್ಗೆ ಸಹ ಮಂಡಲಿಯು ಖಚಿತಪಡಿಸಿಕೊಳ್ಳತಕ್ಕದ್ದು.

(4) ಮಗುವನ್ನು ವಶಕ್ಕೆ ತೆಗೆದುಕೊಂಡ ಮೇಲೆ, ಪೊಲೀಸರು, 13ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಸಂಬಂಧಪಟ್ಟ ಪರಿವೀಕ್ಷಣಾಧಿಕಾರಿಗೆ ಮತ್ತು ಮಗುವಿನ ತಂದೆ ತಾಯಿ / ಪಾಲಕರಿಗೆ ತಿಳಿಸಿದ್ದಾರೆ ಎಂಬುದನ್ನು ಮಂಡಲಿಯು ಮನದಟ್ಟು ಮಾಡಿಕೊಳ್ಳತಕ್ಕದ್ದು. ಈ ಅಂಶದ ಬಗ್ಗೆ ಪೊಲೀಸರು ನಮೂನೆ I ಮತ್ತು II ರಲ್ಲಿ ಒಂದು ಲಿಖಿತ ಹೇಳಿಕೆಯನ್ನು ದಾಖಲ್ಮಾಡತಕ್ಕದ್ದು.

(5) ಮಗುವಿನ ವಿರುದ್ಧ ಇರುವ ಆರೋಪಗಳನ್ನು ಯಾವುದೇ ವಿಳಂಬ ಮಾಡದೆ ಮತ್ತು ನೇರವಾಗಿ ಆ ಮಗುವಿಗೆ ಅರ್ಥವಾಗುವ ಭಾಷೆಯಲ್ಲಿ ಮತ್ತು ರೀತಿಯಲ್ಲಿ, ಅದನ್ನು ಸಂಪೂರ್ಣವಾಗಿ ಗ್ರಹಿಸಲು ಸಾಧ್ಯವಾಗುವಂತೆ ತಿಳಿಸತಕ್ಕದ್ದು.

(6) ಮಗುವು, ತಾನು ಇಷ್ಟಪಡುವ ಯಾರೇ ವ್ಯಕ್ತಿಯನ್ನು ದೂರವಾಣಿ ಮೂಲಕ ಅಥವಾ ಬೇರೆ ರೀತಿಯಲ್ಲಿ ಕರೆಸಿಕೊಳ್ಳುವ ತನ್ನ ಹಕ್ಕನ್ನು ಈಡೇರಿಸಿಕೊಳ್ಳಲು ಅನುವಾಗುವಂತೆ ಮಾಡಲು ಸಾಧ್ಯವಿರುವ ಎಲ್ಲ ನೆರವನ್ನು ನೀಡತಕ್ಕದ್ದು.

(7) ಮಂಡಲಿಯು, ವ್ಯವಹರಣೆಗಳನ್ನು ಅನೌಪಚಾರಿಕವಾದ ಮತ್ತು ಮಗುವಿಗೆ ಸ್ನೇಹಪರವಾದ ರೀತಿಯಲ್ಲಿ ನಡೆಸತಕ್ಕದ್ದು.

(8) ಮಂಡಲಿಯು, ನಗರಪಾಲಿಕೆ ಅಥವಾ ಪುರಸಭಾ ಪ್ರಾಧಿಕಾರವು ನೀಡಿದ ಒಂದು ಜನನ ಪ್ರಮಾಣಪತ್ರ ಅಥವಾ ಮಗು ಪ್ರಪ್ರಥಮವಾಗಿ ಸೇರಿದ್ದ ಶಾಲೆಯಿಂದ ಜನನ ದಿನಾಂಕದ ಒಂದು ಪ್ರಮಾಣಪತ್ರ, ಲಭ್ಯವಿದ್ದರೆ, ಅದನ್ನು ಪಡೆಯತಕ್ಕದ್ದು ಮತ್ತು ಮೇಲ್ಕಂಡ ಯಾವುವೂ ಇಲ್ಲದಿದ್ದರೆ, ಮಗುವಿನ ವಯಸ್ಸಿನ ಸಂಬಂಧದಲ್ಲಿ, ಅವನ ದೈಹಿಕ ಮತ್ತು ಮಾನಸಿಕ ಸ್ಥಿತಿಗತಿಗಳ ಬಗ್ಗೆ ವೈದ್ಯಕೀಯ ಅಭಿಪ್ರಾಯ ಪಡೆಯತಕ್ಕದ್ದು. ಅಂಥ ಸಂದರ್ಭಗಳಲ್ಲಿ ಆದೇಶಗಳನ್ನು ಹೊರಡಿಸುವಾಗ, ಲಭ್ಯವಿರಬಹುದಾದಂಥ ಸಾಕ್ಷ್ಯವನ್ನು ಅಥವಾ ಸಂದರ್ಭಾನುಸಾರ, ವೈದ್ಯಕೀಯ ಅಭಿಪ್ರಾಯವನ್ನು ಪರಿಗಣನೆಗೆ ತೆಗೆದುಕೊಂಡ ತರುವಾಯ, ಅವನ ವಯಸ್ಸಿನ ಸಂಬಂಧದಲ್ಲಿ ಒಂದು ನಿರ್ಣಯವನ್ನು ದಾಖಲ್ಮಾಡತಕ್ಕದ್ದು.

(9) ಮಗುವನ್ನು ಮಂಡಲಿಯ ಮುಂದೆ ಹಾಜರುಪಡಿಸಿದಾಗ, ಮಂಡಲಿಯು ತಕ್ಷಣವೇ ಆ ಮಗುವನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದೇ ಎಂಬ ಬಗ್ಗೆ ನಿರ್ಧರಿಸತಕ್ಕದ್ದು. ಮಗುವನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದಾಗಿರುವಲ್ಲಿ, ಆಗ, ಮಂಡಲಿಯು, ಮಗುವನ್ನು ತಂದೆ ತಾಯಿಯ, ಪಾಲಕನ, ಸೂಕ್ತ ವ್ಯಕ್ತಿಯ ಅಥವಾ ಸೂಕ್ತ ಸಂಸ್ಥೆಯ ರಕ್ಷಣೆಯ ಮೇಲೆ ಬಿಡುಗಡೆ ಮಾಡತಕ್ಕದ್ದು. ಮಂಡಲಿಯ ಯಾರೇ ಸದಸ್ಯನು ಮಗುವನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಸಕ್ಷಮನಾಗಿರುತ್ತಾನೆ.

(10) ಮಗುವನ್ನು ಪರೀಕ್ಷಿಸುವಲ್ಲಿ ಮತ್ತು ಅವನ ಹೇಳಿಕೆಯನ್ನು ದಾಖಲು ಮಾಡುವಲ್ಲಿ, ಸಕ್ಷಮ ಪ್ರಾಧಿಕಾರವು, ಮಗುವನ್ನು ನಿರಾತಂಕವಾಗಿಡುವ ದೃಷ್ಟಿಯಿಂದ ಮಗುವಿನ ಬಗ್ಗೆ ಆಪಾದಿಸಲಾಗಿರುವ ಅಪರಾಧಗಳ ಸಂಬಂಧದಲ್ಲಿ ಮಾತ್ರವಲ್ಲದೆ, ಮಗುವಿನ ಮನೆ ಮತ್ತು ಸುತ್ತಮುತ್ತಲ ಪರಿಸರ ಮತ್ತು ಮಗು ಒಳಗಾಗಿರಬಹುದಾದಂಥ ಪ್ರಭಾವ ಇವುಗಳ ಬಗ್ಗೆ ಸಹ ಸತ್ಯ ಸಂಗತಿಗಳನ್ನು ಹೊರಡಿಸಲು ಸೂಕ್ತವೆಂದು ತೋರಬಹುದಾದಂಥ ಯಾವುದೇ ರೀತಿಯಲ್ಲಿ ಮಗುವಿನೊಂದಿಗೆ ಮಾತನಾಡಲು ಮುಕ್ತವಾಗಿರತಕ್ಕದ್ದು. ಹೇಳಿಕೆಯ ಒಳಾಂಶಗಳು ಮತ್ತು ಯಾವ ಸಂದರ್ಭಗಳಲ್ಲಿ ಹೇಳಿಕೆ ನೀಡಲಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ಮಂಡಲಿಯು ಸೂಕ್ತವೆಂದು ಪರಿಗಣಿಸಬಹುದಾದಂಥ ರೀತಿಯಲ್ಲಿ ಪರೀಕ್ಷೆ ಮಾಡಿದ ಬಗ್ಗೆ ದಾಖಲೆ ಇರತಕ್ಕದ್ದು.

(11) ಮಗುವು ತನ್ನ ವಿರುದ್ಧ ಆಪಾದಿಸಲಾಗಿರುವ ಅಪರಾಧವನ್ನು ಮಾಡಿರುವುದಾಗಿ ಒಪ್ಪಿಕೊಂಡರೆ, ಆಗ ಮಂಡಲಿಯು, ಆ ಅಂಗೀಕಾರವನ್ನು ದಾಖಲು ಮಾಡತಕ್ಕದ್ದು ಮತ್ತು ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೂಕ್ತ ಆದೇಶವನ್ನು ಹೊರಡಿಸತಕ್ಕದ್ದು. ಗಂಭೀರವಲ್ಲದ ಅಪರಾಧಗಳ ಸಂದರ್ಭದಲ್ಲಿ, ಮಂಡಲಿಯು, ಸಾಧ್ಯವಾದೆಡೆಗಳಲ್ಲಿ ಒಂದು ವಾಗ್ದಂಡನಾ ಆದೇಶವನ್ನು ಹೊರಡಿಸಬಹುದು ಮತ್ತು ಮಗುವನ್ನು ಬಿಡುಗಡೆ ಮಾಡಬಹುದು.

(12) ಪರೀಕ್ಷೆಗಾಗಿ ಸಾಕ್ಷಿದಾರರನ್ನು ಹಾಜರುಪಡಿಸಿದಾಗ, ಮಂಡಲಿಯು, ಮಗುವಿನ ಪರವಾಗಿರಬಹುದಾದ ಯಾವುದೇ ಅಂಶವನ್ನು ಅವರಿಂದ ಹೊರಡಿಸುವಂತೆ ಅವರನ್ನು ಪ್ರಶ್ನಿಸಲು ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ ಕೇಂದ್ರ ಅಧಿನಿಯಮ 1)ರ 165ನೇ ಪ್ರಕರಣದಿಂದ ತನಗೆ ಪ್ರದತ್ತವಾದ ಅಧಿಕಾರವನ್ನು ಅದು ಮುಕ್ತವಾಗಿ ಬಳಸತಕ್ಕದ್ದು.

(13) ಮಗುವು ಆರೋಪದ ವಿಷಯವನ್ನು ಒಪ್ಪಿಕೊಳ್ಳದಿದ್ದರೆ, ಆಗ, ಮಂಡಲಿಯು, ಪ್ರಾಸಿಕ್ಯೂಷನನ್ನು ಸುನಾವಣೆ ಮಾಡಲು ಕ್ರಮಕೈಗೊಳ್ಳತಕ್ಕದ್ದು ಮತ್ತು ಪ್ರಾಸಿಕ್ಯೂಷನ್ ಹಾಜರುಪಡಿಸಿದ ಎಲ್ಲ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಆರೋಪಿಯ ಅಹವಾಲನ್ನು ಸಹ ಕೇಳತಕ್ಕದ್ದು ಮತ್ತು ಅವನು ತನ್ನ ಸಮರ್ಥನೆಗೆ ಹಾಜರುಪಡಿಸಬಹುದಾದ ಎಲ್ಲ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು.

(14) ಈ ಅಧಿನಿಯಮದ ಅಡಿಯಲ್ಲಿ ಅಂಗೀಕಾರಾರ್ಹವಾದಂಥ ಒಂದು ಕುಟುಂಬ, ಒಂದು ಸಂಸ್ಥೆ, ಮುಂತಾದವುಗಳಲ್ಲಿ ಮಗುವನ್ನು ಇರಿಸುವ ಅತ್ಯುತ್ತಮ ವಿಧಾನದ ಸಾಧ್ಯತೆಯನ್ನು ನಿರ್ಧರಿಸುವ ದೃಷ್ಟಿಯಿಂದ ಮಗುವಿನ ನಡತೆ ಮತ್ತು ಪೂರ್ವಾಪರಗಳ ಬಗ್ಗೆ ಒಂದು ಸಾಮಾಜಿಕ ತನಿಖೆ ನಡೆಸಿ, ನಮೂನೆ III ರಲ್ಲಿ ವರದಿ ಮಾಡುವಂತೆ ಪರಿವೀಕ್ಷಣಾಧಿಕಾರಿಗೆ ಮಂಡಲಿಯು ಆದೇಶ ನೀಡತಕ್ಕದ್ದು.

(15) ಒಂದು ಮಗುವನ್ನು ತಂದೆ ತಾಯಿ ಅಥವಾ ಪಾಲಕನ ರಕ್ಷಣೆಯಲ್ಲಿ ಇಟ್ಟಿರುವಾಗ ಮತ್ತು ಬಾಲಕ ನ್ಯಾಯ ಮಂಡಲಿಯು ಆ ಮಗುವನ್ನು ಪರಿವೀಕ್ಷಣಾಧಿಕಾರಿಯ ಮೇಲ್ವಿಚಾರಣೆಯಲ್ಲಿ ಇಡುವುದು ಯುಕ್ತವೆಂದು ಭಾವಿಸಿದಾಗ, ಅದು ನಮೂನೆ V ರಲ್ಲಿ ಒಂದು ಮೇಲ್ವಿಚಾರಣಾ ಆದೇಶವನ್ನು ಹೊರಡಿಸತಕ್ಕದ್ದು.

(16) ಮಂಡಲಿಯು, ಮಗುವನ್ನು ತಂದೆ ತಾಯಿಯ, ಪಾಲಕನ ಅಥವಾ ಸಂದರ್ಭಾನುಸಾರ ಸೂಕ್ತ ವ್ಯಕ್ತಿಯ ರಕ್ಷಣೆಯಲ್ಲಿ ಇರಿಸುವ ಒಂದು ಆದೇಶವನ್ನು ಹೊರಡಿಸುವಾಗ, ಅಂಥ ತಂದೆ ತಾಯಿಗೆ, ಪಾಲಕನಿಗೆ ಅಥವಾ ಸೂಕ್ತ ವ್ಯಕ್ತಿಗೆ ನಮೂನೆ VI ರಲ್ಲಿ ಜಾಮೀನು ಸಹಿತವಾಗಿ ಅಥವಾ ಜಾಮೀನು ಇಲ್ಲದೆ ಒಂದು ಬಂಧಪತ್ರವನ್ನು ಬರೆದುಕೊಡುವಂತೆ ನಿರ್ದೇಶನ ನೀಡಬಹುದು.

(17) ಮಂಡಲಿಯು, ಪರಿವೀಕ್ಷಣಾಧಿಕಾರಿಯ ವರದಿಯನ್ನು ತರಿಸಿಕೊಳ್ಳದೆ, ವ್ಯವಹರಣೆಗಳ ನ್ಯಾಯನಿರ್ಣಯ ಮಾಡತಕ್ಕದ್ದಲ್ಲ ಅಥವಾ ಯಾವುದೇ ವಿಚಾರಣೆಯನ್ನು ವಿಲೆ ಮಾಡತಕ್ಕದ್ದಲ್ಲ.

(18) ಮಂಡಲಿಯು, ಪರಿವೀಕ್ಷಣಾಧಿಕಾರಿಯ ವರದಿಗೆ ವಿರುದ್ಧವಾಗಿ ಯಾವುದೇ ಸಂಸ್ಥೆಗೆ ಒಂದು ಮಗುವನ್ನು ಒಪ್ಪಿಸಲು ನಿರ್ಧರಿಸಿದರೆ, ಆ ಬಗ್ಗೆ ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡತಕ್ಕದ್ದು.

(19) ಬಾಲಕ ನ್ಯಾಯ ಮಂಡಲಿಯು, ಒಂದು ಮಗುವನ್ನು ಒಂದು ಸಂಸ್ಥೆಯಲ್ಲಿ ಇಡಬೇಕೆಂದು ಆದೇಶಿಸಿದಾಗಲೆಲ್ಲಾ, ಅದು, ಅದರ ಆದೇಶದ ಒಂದು ಪ್ರತಿಯನ್ನು ಆ ಮಗುವಿನ ಮನೆ ಮತ್ತು ತಂದೆ ತಾಯಿಗಳ ಅಥವಾ ಪಾಲಕರ ಹಾಗೂ ಹಿಂದಿನ ದಾಖಲೆಗಳ ವಿವರಗಳೊಂದಿಗೆ ನಮೂನೆ VI ರಲ್ಲಿ ಅಂಥ ಸಂಸ್ಥೆಯ ಅಧೀಕ್ಷಕನಿಗೆ ಕಳುಹಿಸತಕ್ಕದ್ದು.

(20) ಮಂಡಲಿಯು, 9ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ವಿಶೇಷ ಗೃಹ ಎಂದು ಪ್ರಮಾಣೀಕರಿಸಲಾದ ಸಂಸ್ಥೆಗೆ ಯಾರೇ ಬಾಲಕನನ್ನು ಒಪ್ಪಿಸುವ ಮುಂಚಿತವಾಗಿ ಅದರ ಅಧೀಕ್ಷಕನಿಗೆ ತಿಳಿಸತಕ್ಕದ್ದು.

(21) ಸದರಿ ಸಂಸ್ಥೆಯ ಅಧೀಕ್ಷಕನು, ಮಾಹಿತಿ ದೊರೆತ ಮೇಲೆ ಬಾಲಕನ ಒಪ್ಪಿಸುವಿಕೆಯ ಬಗ್ಗೆ ಆಕ್ಷೇಪಣೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಲಿಖಿತದಲ್ಲಿ ತಿಳಿಸತಕ್ಕದ್ದು ಮತ್ತು ಮಗುವನ್ನು ಸದರಿ ಸಂಸ್ಥೆಗೆ (ಸರ್ಕಾರವು ನಡೆಸುವ ವಿಶೇಷ ಗೃಹಗಳು ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಸ್ವಯಂಸೇವಾ ಸಂಸ್ಥೆಗಳು) ಒಪ್ಪಿಸಿಕೊಡುವ ಮುಂಚೆ, ಮಂಡಲಿಯು, ಆಕ್ಷೇಪಣೆಗಳನ್ನು ಪೂರ್ಣವಾಗಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(22) ಮಂಡಲಿಯು, ಮಗುವಿನ ತಂದೆ ತಾಯಿಗೆ ಅಥವಾ ಮಗುವಿಗೆ ದಂಡವನ್ನು ಸಂದಾಯ ಮಾಡುವಂತೆ ಆದೇಶಿಸಿದ ಸಂದರ್ಭದಲ್ಲಿ, ವಸೂಲಾದ ಆ ಮೊತ್ತವನ್ನು ಸರ್ಕಾರಿ ಖಜಾನೆಯಲ್ಲಿ ಠೇವಣಿ ಇಡತಕ್ಕದ್ದು.

(23) ಮಂಡಲಿಯು, ಮಗುವಿನ ಅಭಿಪ್ರಾಯಗಳನ್ನು ಮತ್ತು ಅದರ ಉತ್ತಮ ಹಿತಾಸಕ್ತಿಯನ್ನು ಗಣನೆಗೆ ತೆಗೆದುಕೊಂಡು ಆದೇಶವನ್ನು ಹೊರಡಿಸತಕ್ಕದ್ದು ಮತ್ತು ಆಪರಾಧಿಕ ಕಾನೂನಿನ ಅಡಿ ಶಿಕ್ಷಾರ್ಹವಾದ ಅಪರಾಧಗಳ ಸಂಬಂಧದಲ್ಲಿ ಮಾತ್ರ ಬಂಧನಕ್ಕೆ ಶಿಫಾರಸು ಮಾಡಬಹುದು.

(24) 15ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಮತ್ತು (ಸಿ) ಖಂಡದ ಅಡಿಯಲ್ಲಿ ಹೊರಡಿಸಲಾದ ಆದೇಶಗಳ ಬಗ್ಗೆ, ಮಂಡಲಿಯು ನಿರ್ದೇಶಿಸಿದಂತೆ ಮೇಲ್ವಿಚಾರಣೆ ಮಾಡಲು ಮತ್ತು ನಿಯತಕಾಲಿಕ ವರದಿಗಳನ್ನು ಸಲ್ಲಿಸಲು ರಾಜ್ಯ ಸರ್ಕಾರವು, ಮಾನ್ಯತೆ ಪಡೆದ ನೋಂದಾಯಿತ ಸ್ವಯಂಸೇವಾ ಸಂಸ್ಥೆಗಳಿಗೆ ಒಪ್ಪಿಸತಕ್ಕದ್ದು.

(25) ಮಂಡಲಿಯು, ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಒಬ್ಬ ಬಾಲಕನನ್ನು ಇಡುವ ಉದ್ದೇಶಕ್ಕಾಗಿ ಯಾವುದೇ ಮಕ್ಕಳ ಗೃಹವನ್ನು ಅಥವಾ ಆಶ್ರಯ ಧಾಮಗಳನ್ನು, ಸುರಕ್ಷಿತ ಸ್ಥಳವೆಂದಾಗಲಿ ಅಥವಾ ಯೋಗ್ಯ ಸಂಸ್ಥೆಯೆಂದಾಗಲಿ ಘೋಷಿಸತಕ್ಕದ್ದಲ್ಲ ಮತ್ತು ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಯಾರೇ ಬಾಲಕನನ್ನು ಯಾವುದೇ ಸಂದರ್ಭದಲ್ಲೂ, ಮಕ್ಕಳ ಗೃಹ ಅಥವಾ ಆಶ್ರಯಧಾಮಗಳಲ್ಲಿ ಇಡಲು ಆದೇಶಿಸತಕ್ಕದ್ದಲ್ಲ.

(26) ಮಗುವನ್ನು ಅವರ ಹಿತಾಸಕ್ತಿಯಲ್ಲಿ ಅವರದೇ ಮನೆಗೆ ತೀರ ಹತ್ತಿರ ಇಡಲಾಗದಂಥ ಘರ್ಷಣೆ / ವಿಪತ್ತಿನ ಸಂದರ್ಭಗಳನ್ನು ಹೊರತುಪಡಿಸಿ, ಅದಕ್ಕೆ ಸೇರಿದಂಥ ಮನೆಗೆ ಸಮೀಪದ ಗೃಹದಲ್ಲಿ ಇರಿಸತಕ್ಕದ್ದು.

**14. ಪರಿವೀಕ್ಷಣಾಲಯಗಳು.–** (1) ಪರಿವೀಕ್ಷಣಾಲಯಕ್ಕೆ ಒಬ್ಬ ಬಾಲಕನ ಪ್ರವೇಶವನ್ನು,–

(ಎ) ಎಲ್ಲ ವೇಳೆಯಲ್ಲಿಯೂ ಮಾಡಿಕೊಳ್ಳತಕ್ಕದ್ದು ಮತ್ತು ಪರಿವೀಕ್ಷಣಾಲಯದ ಪ್ರಭಾರಿ ಅಧಿಕಾರಿಯು, ಕಾಲದ ಗಣನೆ ಇಲ್ಲದೆ ಬಾಲಕನನ್ನು ಸೇರಿಸಿಕೊಳ್ಳತಕ್ಕದ್ದು;

(ಬಿ) ಬಾಲಕ ನ್ಯಾಯ ಮಂಡಲಿಯು, ವಿಧ್ಯುಕ್ತವಾಗಿ ಸಹಿ ಹಾಕಿದ ಮತ್ತು ಮೊಹರು ಮಾಡಿದ ಒಂದು ಸ್ಥಳ ನಿರ್ದೇಶನ ಆದೇಶವನ್ನು ಹೊರಡಿಸುವ ಮೂಲಕ ಮಾಡತಕ್ಕದ್ದು.

(2) ಪರಿವೀಕ್ಷಣಾಲಯದ ಪ್ರಭಾರಿ ಅಧಿಕಾರಿಯು,–

(i) ಯಾವುದೇ ಮಗುವನ್ನು ಅನಧಿಕೃತವಾಗಿ ಸೇರಿಸಿಕೊಳ್ಳದಿರುವಂತೆ ನೋಡಿಕೊಳ್ಳಲು ವೈಯಕ್ತಿಕವಾಗಿ ಜವಾಬ್ದಾರನಾಗಿರತಕ್ಕದ್ದು;

(ii) ರಾತ್ರಿ ವೇಳೆಯಲ್ಲಿ ಕರೆ ತಂದ ಮಗುವನ್ನು ಮಾರನೆಯ ದಿನ ಮಂಡಲಿಯ ಮುಂದೆ ಹಾಜರುಪಡಿಸಿ ಒಂದು ಆದೇಶವನ್ನು ಪಡೆಯುವವರೆಗೆ ಅವನನ್ನು ತಡೆಹಿಡಿದಿಡಲು ಅಧಿಕಾರ ಹೊಂದಿರತಕ್ಕದ್ದು;

(iii) ಬಾಲಕ ನ್ಯಾಯ ಮಂಡಲಿಯಿಂದ ಔಪಚಾರಿಕ ಸ್ಥಳ ನಿರ್ದೇಶನ ಆದೇಶ ಪಡೆಯಲು ಪೊಲೀಸರಿಂದ ಸ್ವೀಕರಿಸಲು ಕೋರಿಕೆಯ ಮೇಲೆ ಮಾಡಲಾದ ಯಾವುದೇ ಪ್ರವೇಶದ ಸಂದರ್ಭದಲ್ಲಿ ಆ ಬಗ್ಗೆ ಬಾಲಕ ನ್ಯಾಯ ಮಂಡಲಿಗೆ ವರದಿ ಸಲ್ಲಿಸತಕ್ಕದ್ದು.

(3) ಬಾಲಕರು ಮತ್ತು ಬಾಲಕಿಯರಿಗಾಗಿ ಪ್ರತ್ಯೇಕ ಪರಿವೀಕ್ಷಣಾಲಯಗಳನ್ನು ಸ್ಥಾಪಿಸತಕ್ಕದ್ದು ಮತ್ತು ಅವರನ್ನು 18ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ ಅವರ ವಯಸ್ಸು ಮತ್ತು ಮಾಡಿದ ಅಪರಾಧಗಳ ಸ್ವರೂಪಕ್ಕೆ ಅನುಸಾರವಾಗಿ ಈ ಮುಂದಿನಂತೆ ಪ್ರತ್ಯೇಕವಾಗಿರಿಸತಕ್ಕದ್ದು:–

| | | | |
|---|---|---|---|
| ಬಾಲಕಿಯರು | 8–12 ವರ್ಷಗಳು | ಬಾಲಕರು | 8–12 ವರ್ಷಗಳು |
| | 12–18 ವರ್ಷಗಳು | | 12–16 ವರ್ಷಗಳು |
| | | | 16–18 ವರ್ಷಗಳು |

(4) ಒಂದು ಪರಿವೀಕ್ಷಣಾಲಯದಲ್ಲಿ ಒಂದು ಮಗುವಿನ ತಡೆಹಿಡಿದಿಡುವಿಕೆಯ ಅವಧಿಯು ಸಾಮಾನ್ಯವಾಗಿ ಆರು ತಿಂಗಳಿಗೆ ಮೀರತಕ್ಕದ್ದಲ್ಲ. ಯಾವ ಸಂದರ್ಭಗಳಲ್ಲೂ ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕನ ಹೊರತಾಗಿ ಯಾವ ಮಗುವನ್ನೂ ಸೇರಿಸಿಕೊಳ್ಳತಕ್ಕದ್ದಲ್ಲ.

**15. ಪರಿವೀಕ್ಷಣಾಲಯಗಳ ವ್ಯವಸ್ಥಾಪನೆ.–** (1) ಒಂದು ಪರಿವೀಕ್ಷಣಾಲಯದ ವ್ಯವಸ್ಥಾಪನೆಯನ್ನು ಒಬ್ಬ ಪ್ರಭಾರಿ ಅಧಿಕಾರಿಯು ನೋಡಿಕೊಳ್ಳತಕ್ಕದ್ದು. ಆತನನ್ನು ನಿರ್ದಿಷ್ಟ ಸಂಸ್ಥೆಯ ಅಧೀಕ್ಷಕನ ಪದದಲ್ಲಿ ನೇಮಕ ಮಾಡತಕ್ಕದ್ದು ಮತ್ತು ಆತನು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿಯಂತ್ರಣದಲ್ಲಿರತಕ್ಕದ್ದು.

(2) ರಾಜ್ಯ ಸರ್ಕಾರವು, ಪರಿವೀಕ್ಷಣಾಲಯಗಳನ್ನು ನಡೆಸಲು ಸ್ವಯಂ ಸೇವಾ ಏಜೆನ್ಸಿಗಳಿಗೆ ಅನುಮತಿ ನೀಡತಕ್ಕದ್ದು.

**16. ವಿಶೇಷ ಗೃಹಗಳು.–** (1) ವಿಶೇಷ ಗೃಹಗಳು, ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಬಾಲಕರನ್ನು ಬಾಲಕ ನ್ಯಾಯ ಮಂಡಲಿಯು ನಿರ್ದಿಷ್ಟಪಡಿಸಿದ ಅವಧಿಯವರೆಗೆ ಸ್ವೀಕರಿಸಲು ಇರುವ ಗೃಹಗಳಾಗಿರುತ್ತವೆ. ಕಾನೂನಿನ ವಿರುದ್ಧದ ಚಟುವಟಿಕೆಗಳಿಗಾಗಿ ಸಾಂಸ್ಥಿಕ ತರಬೇತಿಯನ್ನು ಪಡೆಯಲು ನಿರ್ದೇಶಿಸಲಾದ ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಮಕ್ಕಳ ಸ್ವೀಕಾರ, ಪಾಲನೆ, ಆರೈಕೆ ಮತ್ತು ಪುನರ್ವಸತಿಗಾಗಿ ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಗೃಹಗಳನ್ನು ಸ್ಥಾಪಿಸತಕ್ಕದ್ದು. ಈ

ಗೃಹಗಳಿಗೆ ಸೇರಿಸಿದ ಮಕ್ಕಳನ್ನು 18ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ ವಯಸ್ಸು ಮತ್ತು ಅಪರಾಧಗಳ ಸ್ವರೂಪಕ್ಕೆ ಅನುಸಾರವಾಗಿ ಪ್ರತ್ಯೇಕವಾಗಿರಿಸತಕ್ಕದ್ದು:-

| | | | |
|---|---|---|---|
| ಬಾಲಕಿಯರು | 8-12 ವರ್ಷಗಳು | ಬಾಲಕರು | 8-12 ವರ್ಷಗಳು |
| | 12-16 ವರ್ಷಗಳು | | 12-16 ವರ್ಷಗಳು |
| | | | 16-18 ವರ್ಷಗಳು |

(2) ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಒಬ್ಬ ಬಾಲಕನನ್ನು, ಬಾಲಕ ನ್ಯಾಯ ಮಂಡಲಿಯಿಂದ ಹೊರಡಿಸಲಾದ ಮತ್ತು ವಿಧ್ಯುಕ್ತವಾಗಿ ಸಹಿ ಮಾಡಲಾದ ಲಿಖಿತ ಸ್ಥಳ ನಿರ್ದೇಶನ ಆದೇಶದ ಮೇಲೆ ಸಾಂಸ್ಥಿಕ ಜೀವನಕ್ಕೆ ಒಳಪಡಿಸುವ ಉದ್ದೇಶಕ್ಕಾಗಿ ವಿಶೇಷ ಗೃಹದಲ್ಲಿ ಸೇರಿಸತಕ್ಕದ್ದು.

(3) ಬಾಲಕ ನ್ಯಾಯ ಮಂಡಲಿಯಿಂದ ಅಥವಾ ಮಂಡಲಿಯ ಅಧಿಕಾರವನ್ನು ಚಲಾಯಿಸುತ್ತಿರುವ ಯಾವುದೇ ಸಕ್ಷಮ ಪ್ರಾಧಿಕಾರದಿಂದ ಹೊರಡಿಸಲಾದ ಯಾವುದೇ ಯುಕ್ತ ಸ್ಥಳ ನಿರ್ದೇಶನ ಆದೇಶವಿಲ್ಲದೆ ಯಾವ ಮಗುವನ್ನೂ ವಿಶೇಷ ಗೃಹದಲ್ಲಿ ಸೇರಿಸಿಕೊಳ್ಳತಕ್ಕದ್ದಲ್ಲ ಅಥವಾ ಇಟ್ಟುಕೊಳ್ಳತಕ್ಕದ್ದಲ್ಲ.

(4) ಮಂಡಲಿಯ ಆದೇಶಗಳ ಪ್ರಕಾರ ಮಗುವನ್ನು ಇಟ್ಟುಕೊಳ್ಳಬಹುದಾದ ದಿನಾಂಕವನ್ನು ಮೀರಿ ಯಾವ ಮಗುವನ್ನೂ ಇಟ್ಟುಕೊಳ್ಳತಕ್ಕದ್ದಲ್ಲ.

(5) ಒಂದು ಸಂಸ್ಥೆಯಲ್ಲಿ ಒಂದು ಮಗುವನ್ನು ಇಟ್ಟುಕೊಳ್ಳಲು ಅನುಮತಿಸಿದ ದಿನಾಂಕವನ್ನು ಮೀರಿ ಆ ಮಗುವನ್ನು ವಿಶೇಷ ಗೃಹದಲ್ಲಿ ಇಟ್ಟುಕೊಳ್ಳಬೇಕಾದರೆ, ಅವನ ಶಿಕ್ಷಣವು ಪೂರ್ಣಗೊಳ್ಳುವ ಅಥವಾ ಶೈಕ್ಷಣಿಕ ವರ್ಷವು ಮುಗಿಯುವವರೆಗೆ ಬಾಲಕ ನ್ಯಾಯ ಮಂಡಲಿಯ ಔಪಚಾರಿಕ ಆದೇಶವನ್ನು ಮುಂಚಿತವಾಗಿ ಪಡೆದಿರತಕ್ಕದ್ದು.

(6) ಸಂಸ್ಥೆಯಲ್ಲಿ ಮಗುವನ್ನು ಇಟ್ಟುಕೊಳ್ಳಲು ಅನುಮತಿಸಲಾದ ದಿನಾಂಕವನ್ನು ಮೀರಿ, ಮಗುವಿಗೆ ತಕ್ಷಣ ಗಮನ ಹರಿಸಬೇಕಾದಂಥ ಚಿಕಿತ್ಸೆಯನ್ನು ಕೊಡಿಸಬೇಕಾಗಿರುವ ಮತ್ತು ಅಪಘಾತ ಅಥವಾ ನೈಸರ್ಗಿಕ ವಿಕೋಪ ಇತ್ಯಾದಿಗಳ ಕಾರಣದಿಂದಾಗಿ ಮಗುವಿನ ಚಲನೆಯನ್ನು ವಿರೋಧಿಸುವ ಅಥವಾ ತಡೆಯುವ ಇತರ ಯಾವುದೇ ಸಂದರ್ಭಗಳಲ್ಲಿ, ಆ ಬಗ್ಗೆ ಬಾಲಕ ನ್ಯಾಯ ಮಂಡಲಿಗೆ ತಿಳಿಸತಕ್ಕದ್ದು.

**17. ವಿಶೇಷ ಗೃಹಗಳ ವ್ಯವಸ್ಥಾಪನೆ.-** (1) ವಿಶೇಷ ಗೃಹದ ವ್ಯವಸ್ಥಾಪನೆಯನ್ನು ಅದರ ಪ್ರಭಾರಿ ಅಧಿಕಾರಿಯು ನೋಡಿಕೊಳ್ಳತಕ್ಕದ್ದು, ಆತನನ್ನು ನಿರ್ದಿಷ್ಟವಾಗಿ ಸಂಸ್ಥೆಯ ಅಧೀಕ್ಷಕನ ಪದಕ್ಕೆ ನೇಮಕ ಮಾಡತಕ್ಕದ್ದು ಮತ್ತು ಆತನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿಯಂತ್ರಣದಲ್ಲಿರತಕ್ಕದ್ದು.

(2) ಸ್ವಯಂ ಸೇವಾ ಸಂಸ್ಥೆಗಳಿಂದ ನಡೆಸಲಾಗುವ ವಿಶೇಷ ಗೃಹಗಳಿಗೆ ಯೋಗ್ಯ ವ್ಯಕ್ತಿಗಳನ್ನು ಅಧೀಕ್ಷಕರಾಗಿ/ ಪರಿವೀಕ್ಷಣಾಧಿಕಾರಿಗಳಾಗಿ ನೇಮಕ ಮಾಡಲು ಅನುಮತಿಸಲಾಗಿದೆ ಮತ್ತು ರಾಜ್ಯ ಸರ್ಕಾರವು ಅಂಥ ವ್ಯಕ್ತಿಗಳ ವಿದ್ಯಾರ್ಹತೆ, ತರಬೇತಿ ಮತ್ತು ಅನುಭವವನ್ನು ಗಣನೆಗೆ ತೆಗೆದುಕೊಂಡು ಅಂಥ ನೇಮಕಾತಿಗಳಿಗೆ ಅನುಮೋದನೆ ನೀಡಿರಬೇಕು. ಅಂಥ ಏಜೆನ್ಸಿಗಳಿಗೆ ನಿಯಮಾನುಸಾರ ಸಹಾಯಾನುದಾನಗಳನ್ನು ನೀಡತಕ್ಕದ್ದು.

**18. ಬಾಲಕರ ವರ್ಗೀಕರಣ.-** (1) ಬಾಲಕರನ್ನು 14ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಅವರ ವಯಸ್ಸು, ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯದ ಪರಿಸ್ಥಿತಿಗಳನ್ನು ಪರಿಗಣಿಸಿ ವರ್ಗೀಕರಿಸತಕ್ಕದ್ದು. ಬಾಲಕರನ್ನು ಪ್ರತ್ಯೇಕಿಸಿ ಇಡದಿದ್ದರೆ ಅವರಿಂದ ಉಂಟಾಗಬಹುದಾದ ಹಿಂಸಾತ್ಮಕ ಅಪರಾಧಗಳು ಮತ್ತು ಅಪಾಯದ ಸಂದರ್ಭಗಳನ್ನು, ಗಣನೆಗೆ ತೆಗೆದುಕೊಂಡು ಅವರನ್ನು ಪ್ರತ್ಯೇಕವಾಗಿರಿಸತಕ್ಕದ್ದು.

(2) ಬಾಲಕರನ್ನು,-

(ಎ) ಕೊಲೆ ಮತ್ತು ಲೈಂಗಿಕ ಅಪರಾಧಗಳಂಥ ಭಾರಿ ಅಪರಾಧಗಳು;

(ಬಿ) ಸಣ್ಣಪುಟ್ಟ ಅಪರಾಧಗಳು

- ಮುಂತಾದ ಅಪರಾಧಗಳ ಸ್ವರೂಪಕ್ಕನುಗುಣವಾಗಿ ಪ್ರತ್ಯೇಕವಾಗಿರಿಸತಕ್ಕದ್ದು.

## ಅಧ್ಯಾಯ – IV

## ಪಾಲನೆ ಮತ್ತು ಸಂರಕ್ಷಣೆಯ ಅಗತ್ಯವಿರುವ ಮಗು

**19. ವಿಚಾರಣೆಗಳ ಅವಧಿಯಲ್ಲಿ ಮಕ್ಕಳ ಕಲ್ಯಾಣ ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನ.-** (1) ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಗುವನ್ನು ಸ್ವೀಕರಿಸುವ ಯಾರೇ ವ್ಯಕ್ತಿ / ಮಕ್ಕಳ ಸಹಾಯವಾಣಿ / ಸೂಕ್ತ ಸಂಸ್ಥೆ / ಪೊಲೀಸ್ ಅಧಿಕಾರಿಯು, ಮಗುವು ಯಾವ ಸಂದರ್ಭದಲ್ಲಿ ಅವರ ಗಮನಕ್ಕೆ ಬಂದಿತು ಎನ್ನುವುದರ ವರದಿಯೊಂದಿಗೆ ಮಗುವನ್ನು ಸಮಿತಿಯ ಮುಂದೆ ಹಾಜರುಪಡಿಸತಕ್ಕದ್ದು. ಬಾಲಕನ ಕುಟುಂಬವನ್ನು ಪತ್ತೆ ಹಚ್ಚಲು ಪ್ರಯತ್ನಗಳನ್ನು ಮಾಡತಕ್ಕದ್ದು ಮತ್ತು ಇದನ್ನು ಮಾಡಲು ಸ್ವಯಂ ಸೇವಾ ಸಂಸ್ಥೆಗಳು ಅಥವಾ ಮಕ್ಕಳ ಸಹಾಯವಾಣಿಯ ನೆರವನ್ನು ಸಹ ಪಡೆಯಬಹುದು.

(2) ಸಮಿತಿಯು ಉಪವೇಶನದಲ್ಲಿಲ್ಲದ ಸಂದರ್ಭದಲ್ಲಿ, ಮಗುವನ್ನು, ಆಶ್ರಯಧಾಮ / ಸೂಕ್ತ ಸಂಸ್ಥೆ / ಮಕ್ಕಳ ಗೃಹ ಮುಂತಾದ ಸುರಕ್ಷತೆಯ ಸ್ಥಳದಲ್ಲಿ ಇಡತಕ್ಕದ್ದು. ಎಲ್ಲ ಮೂಲಭೂತ ಸೌಲಭ್ಯಗಳನ್ನು ಮತ್ತು ಸಂಪೂರ್ಣ ರಕ್ಷಣೆಯನ್ನು ಅದಕ್ಕೆ ಒದಗಿಸತಕ್ಕದ್ದು. ವಿಚಾರಣೆಯು ಇತ್ಯರ್ಥದಲ್ಲಿರುವಾಗ ಅತಿ ಕಡಿಮೆ ಅವಧಿಯ ಬಂಧನವನ್ನು ಖಚಿತಪಡಿಸಿಕೊಳ್ಳಲು ಆದ್ಯತೆ ನೀಡಿ ತ್ವರಿತವಾಗಿ ವ್ಯವಹರಿಸತಕ್ಕದ್ದು.

(3) ಸಮಿತಿಯ ಮುಂದೆ ಮಗುವನ್ನು ಹಾಜರುಪಡಿಸಿದ ಕೂಡಲೇ, ಮಗುವಿನ ವಯಸ್ಸನ್ನು ನಿರ್ಧರಿಸತಕ್ಕದ್ದು ಮತ್ತು ಆ ಬಗ್ಗೆ ಯಾವುದೇ ಸಂದೇಹವಿದ್ದ ಸಂದರ್ಭದಲ್ಲಿ, ಸಮಿತಿಯು ವೈದ್ಯಾಧಿಕಾರಿಯ ಅಭಿಪ್ರಾಯವನ್ನು ಪಡೆದುಕೊಳ್ಳತಕ್ಕದ್ದು ಮತ್ತು ಇದನ್ನು ನಲವತ್ತೆಂಟು ಗಂಟೆಗಳ ಅವಧಿಯೊಳಗಾಗಿ ಮಾಡತಕ್ಕದ್ದು.

(4) ಎರಡು ವರ್ಷ ವಯಸ್ಸನ್ನು ಮೀರಿದ ಮಕ್ಕಳನ್ನು, ಪ್ರಯಾಣದ ಅವಧಿಯನ್ನು ಹೊರತುಪಡಿಸಿ, ಹಾಗೆ ಸ್ವೀಕರಿಸಿದ ಮೇಲೆ ಅತಿ ಕಡಿಮೆ ಅವಧಿಯಲ್ಲಿ ಸಮಿತಿಯ ಮುಂದೆ ಹಾಜರುಪಡಿಸತಕ್ಕದ್ದು. ಎರಡು ವರ್ಷ ವಯಸ್ಸಿನೊಳಗಿನ ಮಕ್ಕಳಿಗಾಗಿ,

ವ್ಯಕ್ತಿ ಅಥವಾ ಸಂಸ್ಥೆಯು, ಪ್ರಯಾಣದ ಅವಧಿಯನ್ನು ಹೊರತುಪಡಿಸಿ, ಮಗುವನ್ನು ಸ್ವೀಕರಿಸಿದ ಮೇಲೆ ನಲವತ್ತೆಂಟು ಗಂಟೆಗಳ ಅವಧಿಯೊಳಗೆ ಮಗುವಿನ ಭಾವಚಿತ್ರದೊಂದಿಗೆ ಲಿಖಿತ ವರದಿಯನ್ನು ಸಲ್ಲಿಸತಕ್ಕದ್ದು.

(5) ಸಮಿತಿಯ ಮುಂದೆ ಮಗುವನ್ನು ಹಾಜರುಪಡಿಸುವುದಕ್ಕೆ ಮುಂಚೆ, ಪೊಲೀಸ್ ಠಾಣೆಯ ಲಾಕಪ್‌ನಲ್ಲಿ ಮಗುವನ್ನು ಇಟ್ಟಿರಲಿಲ್ಲವೆಂದು ಮತ್ತು ಮಗುವನ್ನು ವಶಕ್ಕೆ ತೆಗೆದುಕೊಳ್ಳುವ ಇಪ್ಪತ್ತನಾಲ್ಕು ಗಂಟೆಗಳ ಒಳಗಾಗಿ ಸಮಿತಿಯ ಮುಂದೆ ಅಥವಾ ಸಮಿತಿಯ ಸದಸ್ಯರೊಬ್ಬರ ಮುಂದೆ ಮಗುವನ್ನು ಹಾಜರುಪಡಿಸಲಾಗಿದೆಯೆಂದು, ಪೊಲೀಸ್ ಘೋಷಣೆಯ ಮೂಲಕ ಅಥವಾ ಇತರ ರೀತಿಯಲ್ಲಿ ಸಮಿತಿಯು ಮನದಟ್ಟು ಮಾಡಿಕೊಳ್ಳತಕ್ಕದ್ದು.

(6) ಸಮಿತಿಯ ಮುಂದೆ ಮಗುವನ್ನು ಹಾಜರುಪಡಿಸುವ ಉದ್ದೇಶಕ್ಕಾಗಿ ಕರೆತರುವಾಗ ಪೊಲೀಸರಾಗಲಿ ಅಥವಾ ಮಗುವನ್ನು ವಶಕ್ಕೆ ತೆಗೆದುಕೊ ಂಡಿದ್ದ ಇತರ ಯಾರೇ ವ್ಯಕ್ತಿಯಾಗಲಿ ಮಗುವನ್ನು ಕೆಟ್ಟದಾಗಿ ನಡೆಸಿಕೊಂಡಿಲ್ಲವೆಂದು ಅಥವಾ ಹಿಂಸೆಗೆ ಒಳಪಡಿಸಿಲ್ಲವೆಂದು, ಸಮಿತಿಯು ಮನದಟ್ಟು ಮಾಡಿಕೊಳ್ಳತಕ್ಕದ್ದು.

(7) ಸಮಿತಿಯು, ಅಂತಿಮ ವ್ಯವಸ್ಥೆಯನ್ನು ಮಾಡುವಂಥ ಅವಧಿಯವರೆಗೂ ಮಗುವನ್ನು ಪಾಲನೆಗಾಗಿ ತಂದೆ ತಾಯಿ/ ಪಾಲಕರ ಬಳಿಗೆ ಕಳುಹಿಸಬಹುದು. ಮಗುವನ್ನು, ತಂದೆ ತಾಯಿ ಅಥವಾ ಪಾಲಕ ಅಥವಾ ಸೂಕ್ತ ವ್ಯಕ್ತಿಗೆ ಪಾಲನೆಗಾಗಿ ಹಿಂದಕ್ಕೆ ನೀಡುವಂತೆ ಆದೇಶಿಸಲಾಗಿದ್ದರೆ, ಸಮಿತಿಯು, ನಮೂನೆ IV ರಲ್ಲಿ ಸೂಕ್ತ ಮೇಲ್ವಿಚಾರಣೆ ಮಾಡುವಂತೆ ಮತ್ತು ಸಮಿತಿಗೆ ನಿಯತವಾಗಿ ವರದಿ ಮಾಡುವಂತೆ ಪರಿವೀಕ್ಷಣಾಧಿಕಾರಿಗೆ ನಿರ್ದೇಶನ ನೀಡತಕ್ಕದ್ದು.

(8) ಸಮಿತಿಯು, ಮಗುವನ್ನು ತಂದೆ ತಾಯಿ, ಪಾಲಕ ಅಥವಾ ಸಂದರ್ಭಾನುಸಾರ ಸೂಕ್ತ ವ್ಯಕ್ತಿಯ ಪಾಲನೆಯಲ್ಲಿ ಬಿಡುವುದಕ್ಕೆ ಆದೇಶವನ್ನು ಮಾಡುವಾಗ, ಜಾಮೀನುದಾರರೊಂದಿಗೆ ಅಥವಾ ಇಲ್ಲವೆ ಅಂಥ ತಂದೆ ತಾಯಿ, ಪಾಲಕರು ಅಥವಾ ಸೂಕ್ತ ವ್ಯಕ್ತಿಯು, ನಮೂನೆ - V ರಲ್ಲಿ ಮುಚ್ಚಳಿಕೆಯನ್ನು ಬರೆದುಕೊಡುವಂತೆ ನಿರ್ದೇಶಿಸತಕ್ಕದ್ದು.

(9) ಸಮಿತಿಯು, ಮಗುವನ್ನು ಒಂದು ಗೃಹದಲ್ಲಿ ಇಟ್ಟುಕೊಳ್ಳಲು ಆದೇಶ ಮಾಡಿದಾಗ, ಅದನ್ನು ನಮೂನೆ VI ರಲ್ಲಿ ಗೃಹದ ವಿವರಗಳೊಂದಿಗೆ ಮತ್ತು ತಂದೆ ತಾಯಿ ಮತ್ತು ಪಾಲಕರ ವಿವರಗಳೊಂದಿಗೆ ಮತ್ತು ಹಿಂದಿನ ದಾಖಲೆಗಳ ವಿವರಗಳೊಂದಿಗೆ ಅವುಗಳ ಆದೇಶದ ಒಂದು ಪ್ರತಿಯನ್ನು ಗೃಹದ ಪ್ರಭಾರಿ ಅಧಿಕಾರಿಗೆ ಕಳುಹಿಸತಕ್ಕದ್ದು.

(10) ಮಗುವನ್ನು ಸುರಕ್ಷಿತ ಸ್ಥಳಕ್ಕೆ ತೆಗೆದುಕೊಂಡು ಹೋದ ಕೂಡಲೇ, ಒಂದು ವೈದ್ಯಕೀಯ ಪರೀಕ್ಷೆಯನ್ನು ಮಾಡತಕ್ಕದ್ದು ಮತ್ತು ಯಾವುದಾದರೂ ದುರಾಚಾರ ನಡೆದಿದ್ದಲ್ಲಿ ಅದನ್ನು ಸಮಿತಿಗೆ ತಿಳಿಸತಕ್ಕದ್ದು ಮತ್ತು ನಿರ್ಣಯಗಳನ್ನು ದಾಖಲು ಮಾಡತಕ್ಕದ್ದು.

(11) ಪರಿವೀಕ್ಷಣಾಧಿಕಾರಿಯ ವರದಿಯ ಮೇರೆಗೆ ಒಂದು ಹೆಣ್ಣುಮಗು ದುರಾಚಾರಕ್ಕೊಳಗಾಗಿದೆಯೆಂದು ಸಮಿತಿಯು ನಿರ್ಣಯಿಸಿದಲ್ಲಿ, ಅದು ವಿಚಾರಣೆಯ ದಿನಾಂಕಗಳಂದು ಸಂಬಂಧಪಟ್ಟ ವ್ಯಕ್ತಿಯು ಹಾಜರಾಗುವಂತೆ ಸಮನು ಮಾಡತಕ್ಕದ್ದು.

(12) ಸಮಿತಿಯು, ದೈಹಿಕ ಅಥವಾ ಲೈಂಗಿಕ ದುರಾಚಾರಗಳ ಯಾವುವೇ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅದರ ತನಿಖೆ ನಡೆಸುವಂತೆ ಮತ್ತು ವರದಿ ಸಲ್ಲಿಸುವಂತೆ ಪೊಲೀಸರಿಗೆ ನಿರ್ದೇಶನ ನೀಡತಕ್ಕದ್ದು. ಮಗುವಿನ ಮೇಲಿನ ದುರಾಚಾರವನ್ನು ದೃಢಪಡಿಸುವ ಯಾವುದೇ ಮೇಲು ನೋಟದ ಸಾಕ್ಷ್ಯವು ಸಮಿತಿಗೆ ಕಂಡುಬಂದಲ್ಲಿ, ಅದು, ಕಾನೂನಿಗನುಸಾರವಾಗಿ ಆ ಪ್ರಕರಣವನ್ನು ತನಿಖೆ ಮಾಡುವಂತೆ ಪೊಲೀಸರಿಗೆ ನಿರ್ದೇಶನ ನೀಡತಕ್ಕದ್ದು.

(13) ಸಮಿತಿಯು, ವಿವರವಾದ ತನಿಖೆಯು ಇತ್ಯರ್ಥದಲ್ಲಿರುವಾಗ, ವಯಸ್ಸು ಮತ್ತು ಲಿಂಗಕ್ಕೆ ತಕ್ಕಂತೆ ಸೂಕ್ತವಾದ ಸೌಲಭ್ಯಗಳಿರುವ ಸುರಕ್ಷಿತ ಸ್ಥಳಕ್ಕೆ ಅಥವಾ ಮಕ್ಕಳ ಗೃಹಕ್ಕೆ ಮಗುವನ್ನು ಕಳುಹಿಸುವುದಕ್ಕೆ ವ್ಯವಸ್ಥೆಗಳನ್ನು ಮಾಡತಕ್ಕದ್ದು. ಮಗುವನ್ನು ಅದರ ಹಿತಾಸಕ್ತಿಯಲ್ಲಿ ವಿಪತ್ತು / ಘರ್ಷಣೆಯಂಥ ಸನ್ನಿವೇಶಗಳು ಉಂಟಾಗಬಹುದು ಎಂದು ಕಂಡುಬರದ ಹೊರತು, ಮಗುವನ್ನು ಅವನ / ಅವಳ ಮನೆಯ ಸಮೀಪದ ಗೃಹದಲ್ಲಿ ಇಡತಕ್ಕದ್ದು.

(14) ಸ್ವಯಂಸೇವಾ ಸಂಸ್ಥೆಯ ಒಬ್ಬ ಪ್ರತಿನಿಧಿ ಅಥವಾ ಸಮಿತಿಯು ಸೂಕ್ತವೆಂದು ಭಾವಿಸಬಹುದಾದಂಥ ಇತರ ಯಾವುದೇ ವ್ಯವಸ್ಥೆಯ ಮೂಲಕ ಮಗುವಿನ ಮೈಗಾವಲಿಗಿರಬಹುದು. ಮೈಗಾವಲನ್ನು ಇಡುವಾಗ, ಮಕ್ಕಳ ಕಲ್ಯಾಣ ಅಧಿಕಾರಿಗಳು ಮತ್ತು ಬಾಲಕರ ವಿಶೇಷ ಪೊಲೀಸ್ ಘಟಕದ ಅಧಿಕಾರಿಗಳಿಗೆ ಆದ್ಯತೆ ನೀಡತಕ್ಕದ್ದು, ಪೊಲೀಸ್ ಮೈಗಾವಲು ಕಟ್ಟ ಕಡೆಯ ಪರಿಹಾರೋಪಾಯವಾಗಿರತಕ್ಕದ್ದು.

**20. ಪೊಲೀಸ್ ಮತ್ತು ಸಮಿತಿಗೆ ವರದಿ ಮಾಡುವ ರೀತಿ.-** (1) ಮಕ್ಕಳ ಗೃಹದ ಪರಿವೀಕ್ಷಣಾಧಿಕಾರಿಯು, ತಂದೆ ತಾಯಿ ಅಥವಾ ಪಾಲಕನಿಗೆ ತಕ್ಷಣವೇ ತಿಳಿಸತಕ್ಕದ್ದು ಮತ್ತು ತನಿಖೆಯ ಸಮಯದಲ್ಲಿ ಮಗುವಿನ ತಂದೆ ತಾಯಿ / ಪಾಲಕನು ಹಾಜರಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಮಗುವಿನ ತಂದೆ ತಾಯಿ ಅಥವಾ ಪಾಲಕನನ್ನು ಸಂಪರ್ಕಿಸಲು ಸಾಧ್ಯವಾಗದಿದ್ದಲ್ಲಿ ಅಥವಾ ಮಗುವು ಅವರನ್ನು ಸಂಪರ್ಕಿಸುವುದು ಬೇಡವೆಂದು ನಿರ್ದಿಷ್ಟವಾಗಿ ಇಚ್ಛಿಸಿದಲ್ಲಿ, ಪರಿವೀಕ್ಷಣಾಧಿಕಾರಿಯು, ಮಗುವು ಒಪ್ಪಿಕೊಳ್ಳಬಹುದಾದ ಇತರ ಯಾರೇ ಸೂಕ್ತ ವ್ಯಕ್ತಿಯನ್ನು ಸಂಪರ್ಕಿಸತಕ್ಕದ್ದು.

(2) ಪರಿವೀಕ್ಷಣಾಧಿಕಾರಿಯು, ಕುಟುಂಬದವರನ್ನು ಪತ್ತೆಹಚ್ಚಿ ವಿಚಾರಣೆಯಲ್ಲಿ ಜೊತೆಗಿರುವಂತೆ ಮಾಡಲು ಎಲ್ಲ ಪ್ರಯತ್ನಗಳನ್ನು ಕೈಗೊಳ್ಳತಕ್ಕದ್ದು. ಅದಕ್ಕಾಗಿ, ಪೊಲೀಸರ, ಮಾನ್ಯತೆ ಪಡೆದ ಸ್ವಯಂ ಸೇವಾ ಸಂಸ್ಥೆಯ / ಮಕ್ಕಳ ಸಹಾಯವಾಣಿಯ ನೆರವನ್ನು ಪಡೆದುಕೊಳ್ಳಬಹುದು. ಪರಿವೀಕ್ಷಣಾಧಿಕಾರಿಯು, ಮಗುವಿನ ಗೃಹಕ್ಕೆ ಭೇಟಿ ನೀಡತಕ್ಕದ್ದು ಮತ್ತು ನಮೂನೆ VII ರಲ್ಲಿ ದಾಖಲು ಮಾಡಬೇಕಾದ ಒಂದು ಸಾಮಾಜಿಕ ತನಿಖಾ ವರದಿಯನ್ನು ಸಿದ್ಧಪಡಿಸತಕ್ಕದ್ದು.

(3) ತಂದೆ ತಾಯಿಗಳು ಮಗುವನ್ನು ಮಕ್ಕಳ ಗೃಹದಲ್ಲಿ ಇರಿಸುವುದಕ್ಕೆ ಒತ್ತಾಯಿಸಿದಲ್ಲಿ, ಅವರು ತಿಂಗಳಿಗೆ 100 ರೂ.ಗಳಿಗಿಂತ ಕಡಿಮೆ ಇಲ್ಲದ ಅಥವಾ ಪ್ರತಿ ತಿಂಗಳಿಗೆ 500 ರೂ.ಗಳವರೆಗೆ ಗರಿಷ್ಠ ನಿರ್ವಹಣಾ ವೆಚ್ಚವನ್ನು ಸಂದಾಯ ಮಾಡುವಂತೆ ನಿರ್ದೇಶಿಸತಕ್ಕದ್ದು. ನಿರ್ವಹಣಾ ವೆಚ್ಚವಿಲ್ಲದೆ ಮಕ್ಕಳಿಗೆ ಪ್ರವೇಶ ನೀಡುವುದನ್ನು ದುರಾಚಾರಕ್ಕೊಳಗಾದ ಮಕ್ಕಳು, ಅನಾಥರು, ನಿರಾಶ್ರಿತರು, ಒಂಟಿ ತಂದೆ / ತಾಯಿ ಇರುವ ಕುಟುಂಬದ ಮಕ್ಕಳು ಮತ್ತು ಅಸಾಮರ್ಥ್ಯದ ಕಾರಣದಿಂದಾಗಿ ತಮ್ಮ ಜೀವನ ನಿರ್ವಹಣೆ ಮಾಡಲು ಸಾಧ್ಯವಿಲ್ಲದ ದೀರ್ಘಕಾಲಿಕ ಕಾಯಿಲೆಯಿಂದ ನರಳುತ್ತಿರುವ ವ್ಯಕ್ತಿಗಳ ಮಕ್ಕಳಿಗೆ ಸೀಮಿತಗೊಳಿಸತಕ್ಕದ್ದು.

(4) ಸಮಿತಿಯು, 34ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಸಂಖ್ಯಾ ಬಲ, ಸೂಕ್ತ ಸೌಲಭ್ಯಗಳು ಇರುವ ಎಲ್ಲ ಮಾನ್ಯತೆ ಪಡೆದ ಮಕ್ಕಳ ಗೃಹಗಳ ಹೆಸರುಗಳು ಮತ್ತು ವಿಳಾಸಗಳ ಒಂದು ಪಟ್ಟಿಯನ್ನು ಇಟ್ಟುಕೊಳ್ಳತಕ್ಕದ್ದು.

**21. ಮಕ್ಕಳ ಗೃಹಕ್ಕೆ ಒಂದು ಮಗುವನ್ನು ಕಳಿಸುವ ವಿಧಾನ.**- (1) ಸಮಿತಿಯ ಮುಂದೆ ಒಂದು ಮಗುವನ್ನು ತಂದಾಗ, ಸಮಿತಿಯು ವಿವರವಾದ ವಿಚಾರಣೆಯನ್ನು ನಡೆಸುವುದಕ್ಕಾಗಿ ಪ್ರಕರಣವನ್ನು, ಮಕ್ಕಳ ಕಲ್ಯಾಣ ಅಧಿಕಾರಿಗೆ / ಪರಿವೀಕ್ಷಣಾಧಿಕಾರಿಗೆ ಒಪ್ಪಿಸತಕ್ಕದ್ದು. ಸಮಿತಿಯು, ಸಂಬಂಧಪಟ್ಟ ವ್ಯಕ್ತಿಗೆ / ಸಂಸ್ಥೆಗೆ ತನಿಖೆ ಮಾಡಬೇಕಾದ ವಿವರಗಳು / ವಿವರಣೆಗಳ ಬಗ್ಗೆ ನಿರ್ದೇಶನವನ್ನು ನೀಡತಕ್ಕದ್ದು. ಅಧಿನಿಯಮದ 33ನೇ ಪ್ರಕರಣದ ಅಡಿಯಲ್ಲಿನ ತನಿಖೆಯ ನಿರ್ದೇಶನವನ್ನು ನಮೂನೆ III ರಲ್ಲಿ ನೀಡತಕ್ಕದ್ದು.

(2) ಮಗುವಿನ ಹಿತಾಸಕ್ತಿಯಿಂದ ನಾಲ್ಕು ತಿಂಗಳೊಳಗಾಗಿ ತನಿಖೆ ನಡೆಸಲು ಸಾಧ್ಯವಿರದಂಥ ವಿಶೇಷ ಸನ್ನಿವೇಶಗಳನ್ನು ಹೊರತುಪಡಿಸಿ, ವಿವರವಾದ ತನಿಖೆಯನ್ನು ನಾಲ್ಕು ತಿಂಗಳ ಒಳಗಾಗಿ ಮುಗಿಸತಕ್ಕದ್ದು. ಅಂಥ ಸನ್ನಿವೇಶಗಳಲ್ಲಿ, 33ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ತನಿಖಾಧಿಕಾರಿಯಿಂದ / ಏಜೆನ್ಸಿಯಿಂದ ಲಿಖಿತದಲ್ಲಿ ಅವಧಿ ವಿಸ್ತರಣೆಯನ್ನು ಪಡೆದುಕೊಳ್ಳತಕ್ಕದ್ದು.

(3) ನಾಲ್ಕು ತಿಂಗಳ ಕೊನೆಯಲ್ಲಿ ತನಿಖೆಯು ಮುಕ್ತಾಯಗೊಂಡ ತರುವಾಯ, ಮಗುವನ್ನು ಮಕ್ಕಳ ಗೃಹದಲ್ಲೇ ಮುಂದುವರೆಸಲು ಆದೇಶಿಸಿದಲ್ಲಿ, ಸಮಿತಿಯು, ಅಂಥ ಗೃಹದಲ್ಲಿ ಮಗುವಿನ ಪ್ರಗತಿಯ ಬಗ್ಗೆ ಒಂದು ವಾರ್ಷಿಕ ಪುನರವಲೋಕನವನ್ನು ನಡೆಸತಕ್ಕದ್ದು.

**22. ಮಕ್ಕಳ ಗೃಹಗಳು.**- (1) ಪ್ರತಿ ಜಿಲ್ಲೆ ಅಥವಾ ಜಿಲ್ಲೆಗಳ ಸಮೂಹದಲ್ಲಿ, ಯಾವುದೇ ತನಿಖೆಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ, ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳನ್ನು ಸ್ವೀಕರಿಸುವುದಕ್ಕಾಗಿ ಮತ್ತು ಆ ತರುವಾಯ ಅವರ ಪಾಲನೆ, ಚಿಕಿತ್ಸೆ, ಶಿಕ್ಷಣ, ತರಬೇತಿ, ಅಭಿವೃದ್ಧಿ ಮತ್ತು ಪುನರ್ವಸತಿಗಾಗಿ ಮಕ್ಕಳ ಗೃಹಗಳನ್ನು ಸ್ಥಾಪಿಸತಕ್ಕದ್ದು ಮತ್ತು ಸಮಿತಿಯ ಆದೇಶಕ್ಕೆ ಅನುಸಾರವಾಗಿ ಅವರಿಗೆ ಅವುಗಳಲ್ಲಿ ಪ್ರವೇಶ ನೀಡತಕ್ಕದ್ದು. ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಮಕ್ಕಳಿಗೆ ಯಾವ ಸಂದರ್ಭದಲ್ಲೂ ಮಕ್ಕಳ ಗೃಹಕ್ಕೆ ಪ್ರವೇಶಾವಕಾಶ ನೀಡತಕ್ಕದ್ದಲ್ಲ.

(2) ಮಕ್ಕಳ ಗೃಹಗಳನ್ನು, ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಪ್ರಮಾಣಪತ್ರವನ್ನು ಪಡೆದುಕೊಂಡಿರುವ ಸ್ವಯಂ ಸೇವಾ ಸಂಸ್ಥೆಗಳು ನಡೆಸತಕ್ಕದ್ದು. 18ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ ಈ ಮುಂದಿನ ವಯೋಮಾನದ ಗುಂಪುಗಳು ಮತ್ತು ಅಪರಾಧಗಳ ಸ್ವರೂಪಕ್ಕೆ ಅನುಸಾರವಾಗಿ ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕವಾದ ಮಕ್ಕಳ ಗೃಹಗಳನ್ನು ತೆರೆಯತಕ್ಕದ್ದು:-

6 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗರು ಮತ್ತು ಹುಡುಗಿಯರು

| | | | |
|---|---|---|---|
| ಬಾಲಕರು | 6-12 ವರ್ಷಗಳು | ಬಾಲಕಿಯರು | 6-12 ವರ್ಷಗಳು |
| | 12-18 ವರ್ಷಗಳು | | 12-18 ವರ್ಷಗಳು |

**23. ಮಕ್ಕಳ ಗೃಹಗಳ ವ್ಯವಸ್ಥಾಪನೆ.**- (1) ಮಕ್ಕಳ ಗೃಹಗಳು ನಿರ್ವಹಿಸಬೇಕಾದ ಗುಣಮಟ್ಟಗಳು, 33ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ ಇರತಕ್ಕದ್ದು.

(2) ಮಕ್ಕಳಿಗೆ ಒದಗಿಸಬೇಕಾದ ಸೇವೆಗಳ ಸ್ವರೂಪವು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು,-

(i) ರಕ್ಷಾಪೋಷಣೆ, ದತ್ತಕ ಮತ್ತು ಜವಾಬ್ದಾರಿ ವಹಿಸಿಕೊಳ್ಳುವುದೇ ಮೊದಲಾದಂಥ ಕುಟುಂಬ ಆಧಾರಿತ ಸೇವೆಗಳು;

(ii) ಮಕ್ಕಳಿಗಾಗಿ ಮಕ್ಕಳ ಸಹಾಯವಾಣಿಯನ್ನು ಮತ್ತು ಉಚಿತ ದೂರವಾಣಿ ಸೌಲಭ್ಯವಾದ 1098ನೇ ಸಂಖ್ಯೆಯ ತುರ್ತುಕರೆಯ ಸೌಲಭ್ಯವನ್ನು ಒದಗಿಸುವುದು;

(iii) ಮಕ್ಕಳಿಗೆ ನೆರವಿನ ಸೇವೆಗಳನ್ನು ಒದಗಿಸುವ ಯಾವುವೇ ಸಂಸ್ಥೆಗಳ ಮತ್ತು ವ್ಯಕ್ತಿಗಳ ಜೊತೆ ಸಂಪರ್ಕ ಸಾಧಿಸುವುದು.

(3) (i) ಎಲ್ಲ ಮಕ್ಕಳ ಗೃಹಗಳಿಗೆ ಅಧೀಕ್ಷಕನ ಅನುಮತಿ ಪಡೆದ ಸಂದರ್ಶಕರಿಗೆ, ಅದರಲ್ಲೂ ವಿಶೇಷವಾಗಿ ಸ್ವಯಂ ಸೇವಾ ಸಂಸ್ಥೆಗಳಿಗೆ, ಸಮಾಜ ಸೇವಕರಿಗೆ, ಸಂಶೋಧಕರಿಗೆ, ವೈದ್ಯಕೀಯ ವಿದ್ಯಾರ್ಥಿಗಳಿಗೆ, ಶಿಕ್ಷಣ ತಜ್ಞರಿಗೆ, ಪ್ರಮುಖ ವ್ಯಕ್ತಿಗಳಿಗೆ ಹಾಗೂ ಮಗುವಿನ ಭದ್ರತೆ, ಕಲ್ಯಾಣ ಮತ್ತು ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಧೀಕ್ಷಕನು ತಾನು ಸೂಕ್ತವೆಂದು ಪರಿಗಣಿಸಬಹುದಾದಂಥ ಇತರ ಮತ್ತು ಯಾರೇ ವ್ಯಕ್ತಿಗಳಿಗೆ ಪ್ರವೇಶವನ್ನು ಮುಕ್ತವಾಗಿರಿಸತಕ್ಕದ್ದು.

(ii) ಅಧೀಕ್ಷಕನು ಒಂದು ಸಂದರ್ಶಕರ ಪುಸ್ತಕವನ್ನು ಇಡತಕ್ಕದ್ದು. ಅದರಲ್ಲಿ ಸಂದರ್ಶಕರು ಸೂಕ್ತವೆಂದು ಭಾವಿಸಬಹುದಾದ ಯಾವುವೇ ಷರಾಗಳು ಅಥವಾ ಸಲಹೆಗಳನ್ನು ತಮ್ಮ ಭೇಟಿಯ ದಿನಾಂಕಗಳೊಂದಿಗೆ ದಾಖಲು ಮಾಡತಕ್ಕದ್ದು.

(iii) ಸಂದರ್ಶಕರು, ಅಧೀಕ್ಷಕರ ಅಧಿಕಾರವನ್ನು ದುರ್ಬಲಗೊಳಿಸುವಂಥ ಅಥವಾ ಕಾನೂನು ಅಥವಾ ನಿಯಮಗಳನ್ನು ಉಲ್ಲಂಘಿಸುವಂಥ ಅಥವಾ ಮಗುವಿನ ಮಾನವೀಯ ಘನತೆಗೆ ಧಕ್ಕೆಯುಂಟು ಮಾಡುವಂಥ ಯಾವುದೇ ಮಾತನ್ನು ಆಡತಕ್ಕದ್ದಲ್ಲ ಅಥವಾ ಕೃತ್ಯವನ್ನು ಮಾಡತಕ್ಕದ್ದಲ್ಲ.

(iv) ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು, ಪರಿವೀಕ್ಷಣಾಲಯಗಳು ಮತ್ತು ವಿಶೇಷ ಗೃಹಗಳನ್ನು ಸಂದರ್ಶಿಸಲು ಸಂದರ್ಶಕರಿಗೆ ಅನುಮತಿಸಬಹುದು.

**24. ಆಶ್ರಯಧಾಮಗಳು.**- (1) (ಎ) ಕಷ್ಟ ಸನ್ನಿವೇಶಗಳಲ್ಲಿ ಸಿಲುಕಿದ ಮಕ್ಕಳ ಬಗ್ಗೆ ವ್ಯವಹರಿಸುವ ಸಲುವಾಗಿ ನಿರಾಶ್ರಿತರು, ಬೀದಿಮಕ್ಕಳು ಮತ್ತು ಓಡಿಬಂದ ಮಕ್ಕಳು ಮೊದಲಾದ ಪಾಲನೆ ಮತ್ತು ರಕ್ಷಣೆಯ ತುರ್ತು ಅಗತ್ಯವಿರುವ ಮಕ್ಕಳಿಗಾಗಿ ಆಶ್ರಯಧಾಮಗಳನ್ನು ನಡೆಸಲು ರಾಜ್ಯ ಸರ್ಕಾರವು ಎರಡು ವರ್ಷಗಳ ಕನಿಷ್ಠ ಅನುಭವವನ್ನು ಹೊಂದಿರುವ ಸರ್ಕಾರೇತರ ಸಂಸ್ಥೆಗಳಿಗೆ ಮಾನ್ಯತೆ ನೀಡತಕ್ಕದ್ದು;

(ಬಿ) ರಾಜ್ಯ ಸರ್ಕಾರವು, ಸ್ವಯಂಸೇವಾ ಸಂಸ್ಥೆಗಳ ಮೂಲಕ ಅವಶ್ಯವಿರುವಷ್ಟು ಸಂಖ್ಯೆಯ ಆಶ್ರಯಧಾಮಗಳನ್ನು ಸ್ಥಾಪಿಸುವುದಕ್ಕೆ ನೆರವು ನೀಡತಕ್ಕದ್ದು. ಅಂಥ ಗೃಹಗಳು, ಮೂಲಭೂತ ಅವಶ್ಯಕತೆಗಳಾದ ಬಟ್ಟೆ, ಆಹಾರ, ಆರೋಗ್ಯ ರಕ್ಷಣೆ ಮತ್ತು ಪೌಷ್ಠಿಕತೆಯನ್ನು ಒದಗಿಸುವುದರ ಜೊತೆಗೆ ಊಟ, ವಸತಿಗಳಂಥ ಕನಿಷ್ಠ ಸೌಲಭ್ಯವನ್ನು ಹೊಂದಿರತಕ್ಕದ್ದು. ವಿಷಮ ಪರಿಸ್ಥಿತಿಯಲ್ಲಿರುವ ಮಕ್ಕಳು ಶಿಕ್ಷಣ, ವೃತ್ತಿ ತರಬೇತಿ ಮತ್ತು ಮನರಂಜನೆಯ ಅಗತ್ಯ ಸೌಲಭ್ಯಗಳನ್ನು ಹೊಂದಿರುವ ಮಕ್ಕಳು ಈ ಗೃಹಗಳಲ್ಲಿ ವಾಸಿಸಬಹುದು;

(ಸಿ) ಆಶ್ರಯಧಾಮವು, ಸಂಕಷ್ಟದಲ್ಲಿರುವ ಮಕ್ಕಳು ಅಧಿಕವಾಗಿ ಇರುವಂಥ ರೈಲ್ವೆ ನಿಲ್ದಾಣಗಳು, ಮಾರುಕಟ್ಟೆ ಸ್ಥಳಗಳು ಮತ್ತು ಇತರ ವಾಣಿಜ್ಯ ಸ್ಥಳಗಳೇ ಮುಂತಾದ ಪ್ರದೇಶಗಳಲ್ಲಿ ಇರತಕ್ಕದ್ದು;

(ಡಿ) ಪ್ರತಿಯೊಂದು ಆಶ್ರಯಧಾಮವು, ಯಾವುದೇ ನಿರ್ದಿಷ್ಟ ಸಹಾಯಕ್ಕಾಗಿ ಅಧಿಕಾರವ್ಯಾಪ್ತಿ ಹೊಂದಿರುವ ಪೊಲೀಸ್ ಠಾಣೆಗೆ ಮತ್ತು ಮಕ್ಕಳ ಸಹಾಯವಾಣಿಗೆ ಸಂಯೋಜಿತವಾಗಿರತಕ್ಕದ್ದು;

(ಇ) ಮಗುವಿನ ಹಿತಾಸಕ್ತಿಯಲ್ಲಿ, ಅಧಿನಿಯಮದ ಅಥವಾ ಮಕ್ಕಳಿಗೆ ಸಂಬಂಧಿಸಿದ ಇತರ ಕಾನೂನುಗಳ ನಿಬಂಧನೆಗಳಿಗನುಸಾರವಾಗಿ ಕಾನೂನು ಕ್ರಮ ಪ್ರಾರಂಭಿಸುವುದರ ಹಾಗೂ ಕಾಣೆಯಾಗಿರುವ ಅಥವಾ ನಿರಾಶ್ರಿತ ಮಕ್ಕಳ ಬಗ್ಗೆ ಸಮಿತಿಗೆ ಮತ್ತು ಪೊಲೀಸರಿಗೆ ಮಾಹಿತಿ ನೀಡುವುದರ ಹೊರತು, ತನಿಖೆಯ ಮತ್ತು ವಿಲೇವಾರಿಯಂಥ ಕಾನೂನು ಅಗತ್ಯತೆಗಳು ಆಶ್ರಯಧಾಮದಲ್ಲಿ ವಾಸಿಸುವ ಮಕ್ಕಳ ಸಂದರ್ಭದಲ್ಲಿ ಅನ್ವಯಿಸತಕ್ಕದ್ದಲ್ಲ;

(ಎಫ್) ಯಾವುದೇ ಮಗುವನ್ನು ಸಾಮಾನ್ಯವಾಗಿ ಒಂದು ವರ್ಷಕ್ಕಿಂತ ಹೆಚ್ಚಾಗಿ ಆಶ್ರಯಧಾಮ / ಮಕ್ಕಳನ್ನು ಬಿಡುವ ಕೇಂದ್ರಗಳಲ್ಲಿ ಇಟ್ಟುಕೊಳ್ಳತಕ್ಕದ್ದಲ್ಲ.

**25. ಮಕ್ಕಳ ಗೃಹಗಳಿಗೆ ಪರಿಶೀಲನಾ ಸಮಿತಿಗಳು.–** (1) ರಾಜ್ಯ ಸರ್ಕಾರವು, ಮಕ್ಕಳ ಗೃಹಗಳಿಗಾಗಿ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಗಳನ್ನು ಅಂಥ ಗೃಹಗಳ ಪರಿಶೀಲನೆಗೆ ನೇಮಕ ಮಾಡತಕ್ಕದ್ದು. ಪರಿಶೀಲನೆಯನ್ನು ಮೂವರಿಗಿಂತ ಕಡಿಮೆಯಿಲ್ಲದ ಸದಸ್ಯರು ನಡೆಸತಕ್ಕದ್ದು.

(2) ರಾಜ್ಯ / ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯ ಪದಾವಧಿಯು ಮೂರು ವರ್ಷಗಳಾಗಿರತಕ್ಕದ್ದು.

(3) ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯು, ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು:–

(ಎ) ಜಿಲ್ಲೆಯ ಜಿಲ್ಲಾಧಿಕಾರಿಗಳು;

(ಬಿ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು;

(ಸಿ) ಬಾಲಕರ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಯ ಒಬ್ಬ ಸದಸ್ಯರು;

(ಡಿ) ಜಿಲ್ಲಾ ಆರೋಗ್ಯಾಧಿಕಾರಿ / ಜಿಲ್ಲಾ ಸರ್ಜನ್;

(ಇ) ಜಿಲ್ಲಾಧಿಕಾರಿಯು ನಿರ್ಧರಿಸಬೇಕಾದ ಸರ್ಕಾರೇತರ ಸಂಸ್ಥೆ.

(4) ಈ ಮುಂದಿನವು ಸಮಿತಿಯ ಉದ್ದೇಶಗಳಾಗಿರತಕ್ಕದ್ದು:–

(ಎ) ಕಾಲಕಾಲಕ್ಕೆ ಗೃಹಗಳಿಗೆ ಭೇಟಿ ನೀಡುವುದು ಮತ್ತು ಅನುಸರಿಸಬೇಕಾದ ಸೂಕ್ತ ನಿರ್ದೇಶನಗಳನ್ನು ನೀಡುವುದು;

(ಬಿ) ಸಂಸ್ಥೆಯ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಸಲಹೆಗಳನ್ನು ನೀಡುವುದು;

(ಸಿ) ಮುಂಚಿತವಾಗಿ ತಿಳಿಸಿ ಅಥವಾ ಅನಿರೀಕ್ಷಿತವಾಗಿ ಗೃಹಗಳಿಗೆ ಭೇಟಿ ನೀಡುವುದು;

(ಡಿ) ಸಂಸ್ಥೆಗಳಿಗೆ ಭೇಟಿ ನೀಡಿದ ಅವಧಿಯಲ್ಲಿ ಮಕ್ಕಳ ಯೋಗಕ್ಷೇಮ ನಿರ್ಧರಿಸುವುದಕ್ಕಾಗಿ ಅವರೊಂದಿಗೆ ಮಾತುಕತೆ ನಡೆಸುವುದು;

(ಇ) ಸಂಸ್ಥೆಯ ದಾಖಲೆಗಳನ್ನು ಪರಿಶೀಲಿಸುವುದು.

(5) ಪರಿಶೀಲನಾ ಸಮಿತಿಯು, ಪರಿಶೀಲನೆಯನ್ನು ನಡೆಸಿದ ದಿನದಂದು ಗೃಹದ ಅಧೀಕ್ಷಕನಿಗೆ / ಪರಿವೀಕ್ಷಣಾಧಿಕಾರಿಗೆ ಪರಿಶೀಲನಾ ವರದಿಯನ್ನು ನೀಡತಕ್ಕದ್ದು ಅದರ ಪ್ರತಿಗಳನ್ನು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಮತ್ತು ಜಿಲ್ಲೆಯ ಉಪನಿರ್ದೇಶಕರು ಇವರಿಗೆ ನೀಡತಕ್ಕದ್ದು. ಸಂಸ್ಥೆಯ ಪ್ರಭಾರಿ ಅಧಿಕಾರಿಯು, ಒಂದು ತಿಂಗಳ ಒಳಗಾಗಿ ಪರಿಶೀಲನಾ ಸಮಿತಿಗೆ ಅನುಪಾಲನಾ ವರದಿಯನ್ನು ನೀಡತಕ್ಕದ್ದು. ಅನುಪಾಲನಾ ವರದಿಯ ಒಂದು ಪ್ರತಿಯನ್ನು, ಮಕ್ಕಳ ಕಲ್ಯಾಣ ಸಮಿತಿಗೆ / ಬಾಲಕ ನ್ಯಾಯ ಮಂಡಲಿಗೆ ನೀಡತಕ್ಕದ್ದು ಮತ್ತು ಇನ್ನೊಂದು ಪ್ರತಿಯನ್ನು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಿಗೆ ನೀಡತಕ್ಕದ್ದು.

(6) ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ಕಾನೂನು ಉಪಬಂಧಗಳ ಉಲ್ಲಂಘನೆಯಾಗಿದೆಯೆಂದು ಪರಿಶೀಲನಾ ಸಮಿತಿಗೆ ಕಂಡುಬಂದ ಯಾವುವೇ ಸಂಗತಿಗಳ ಬಗ್ಗೆ ಹೆಚ್ಚಿನ ತನಿಖೆ ನಡೆಸಲು ಸಕ್ಷಮ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(7) ಪ್ರತಿಯೊಂದು ಸಂಸ್ಥೆಯು, ಅನಾಮಧೇಯ ದೂರುಗಳನ್ನು ಬರೆದುಹಾಕಲು ಮಕ್ಕಳಿಗೆ ಸುಲಭವಾಗಿ ಲಭ್ಯವಾಗುವ ಹಾಗೆ ದೂರು ಪೆಟ್ಟಿಗೆಯನ್ನು ಇಡತಕ್ಕದ್ದು. ಈ ದೂರು ಪರಿಹಾರ ವ್ಯವಸ್ಥೆಯನ್ನು ಬಳಸಿದ್ದಕ್ಕಾಗಿ ಮಕ್ಕಳನ್ನು ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ. ಅಧೀಕ್ಷಕನು/ ಪರಿವೀಕ್ಷಣಾಧಿಕಾರಿಯು, ವಾರಕ್ಕೊಮ್ಮೆ ದೂರು ಪೆಟ್ಟಿಗೆಯನ್ನು ತೆರೆಯತಕ್ಕದ್ದು ಮತ್ತು ಮೇಲ್ವಿಚಾರಣಾ ಹಾಗೂ ನಿರ್ಧರಣಾ ಸಮಿತಿಯೊಂದಿಗೆ ಸಮಾಲೋಚಿಸಿ ದೂರಿನ ಪರಿಹಾರಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**26. ಮೇಲ್ವಿಚಾರಣಾ ಮತ್ತು ನಿರ್ಧರಣಾ ಸಮಿತಿ.–** ಪ್ರತಿಯೊಂದು ಸಂಸ್ಥೆಯಲ್ಲೂ ಈ ಮುಂದಿನ ಕಾರ್ಯನಿರ್ವಾಹಕರನ್ನೊಳಗೊಂಡ ಮೇಲ್ವಿಚಾರಣಾ ಮತ್ತು ನಿರ್ಧರಣಾ ಸಮಿತಿಯನ್ನು ರಚಿಸತಕ್ಕದ್ದು:–

| | |
|---|---|
| (1) ಅಧೀಕ್ಷಕ / ಪರಿವೀಕ್ಷಣಾಧಿಕಾರಿ | ಅಧ್ಯಕ್ಷ |
| (2) ಸಂದರ್ಶಕ ವೈದ್ಯಾಧಿಕಾರಿ | ಸದಸ್ಯ |
| (3) ಶಿಕ್ಷಕ | ಸದಸ್ಯ |
| (4) ಸಲಹೆಗಾರ | ಸದಸ್ಯ |

(5) ಹೌಸ್ ಮದರ್ / ಹೌಸ್ ಫಾದರ್ ಸದಸ್ಯ

(6) ವಿಷಯ ನಿರ್ವಾಹಕ ಸದಸ್ಯ - ಕಾರ್ಯದರ್ಶಿ.

(2) ಈ ಸಮಿತಿಯು ಈ ಮುಂದಿನವುಗಳನ್ನು ಪರಿಗಣಿಸಲು ಮತ್ತು ಪುನರವಲೋಕಿಸಲು ನಿಯತಕಾಲಿಕವಾಗಿ ಸಭೆ ಸೇರತಕ್ಕದ್ದು,-

(ಎ) ಅಭಿರಕ್ಷೆಯಲ್ಲಿರುವಾಗ ತೆಗೆದುಕೊಳ್ಳಬೇಕಾದ ಎಚ್ಚರ, ವಸತಿ, ಕೆಲಸದ ಸ್ಥಳ, ಕಾರ್ಯ ಚಟುವಟಿಕೆಯ ಕ್ಷೇತ್ರ ಮತ್ತು ಅಗತ್ಯವಿರುವ ಮೇಲ್ವಿಚಾರಣೆಯ ವಿಧಾನ;

(ಬಿ) ಬಾಲಕರ ವೈಯಕ್ತಿಕ ಸಮಸ್ಯೆಗಳು, ಕುಟುಂಬ ಸಂಪರ್ಕಗಳು ಮತ್ತು ಹೊಂದಾಣಿಕೆಗಳು, ಆರ್ಥಿಕ ಸಮಸ್ಯೆಗಳು ಮತ್ತು ಸಾಂಸ್ಥಿಕ ಜೀವನಕ್ಕೆ ಸಂಬಂಧಿಸಿದ ಹೊಂದಾಣಿಕೆಗಳು, ಇತ್ಯಾದಿ;

(ಸಿ) ವೃತ್ತಿ ತರಬೇತಿ ಮತ್ತು ಉದ್ಯೋಗಾವಕಾಶಗಳು;

(ಡಿ) ಶಿಕ್ಷಣ ಎಂದರೆ, ಆರೋಗ್ಯ ಶಿಕ್ಷಣ, ಸಾಮಾಜಿಕ ಶಿಕ್ಷಣ, ಶಾಲಾ ಶಿಕ್ಷಣ, ವೃತ್ತಿ ಶಿಕ್ಷಣ ಮತ್ತು ನೈತಿಕ ಶಿಕ್ಷಣ;

(ಇ) ಸಾಮಾಜಿಕ ಹೊಂದಾಣಿಕೆ, ಮನರಂಜನೆ, ಸಮೂಹ ಕಾರ್ಯ ಚಟುವಟಿಕೆಗಳು, ಮಾರ್ಗದರ್ಶನ ಮತ್ತು ಸಲಹೆ ನೀಡಿಕೆ;

(ಎಫ್) ವಿಶೇಷ ಬೋಧನೆ, ನೈತಿಕ ಮಾಹಿತಿ ಸಂಗ್ರಹಣೆ ಮತ್ತು ತೆಗೆದುಕೊಳ್ಳಬೇಕಾದ ವಿಶೇಷ ಮುನ್ನೆಚ್ಚರಿಕೆಗಳು, ಇತ್ಯಾದಿ;

(ಜಿ) ಪ್ರಗತಿಯ ಪುನರವಲೋಕನ ಮತ್ತು ನಿವಾಸಿಗಳ ಅಗತ್ಯತೆಗಳಿಗೆ ತಕ್ಕಂತೆ ಸಾಂಸ್ಥಿಕ ಜೀವನಕ್ಕೆ ಒಗ್ಗಿಕೊಳ್ಳುವಂತೆ ಮಾಡುವುದು;

(ಹೆಚ್) ಬಿಡುಗಡೆ ತರುವಾಯದ ಪುನರ್ವಸತಿ ಕಾರ್ಯಕ್ರಮದ ಯೋಜನೆ ಮತ್ತು ಅನುಪಾಲನಾ ಸೇವೆಯ ಸಹಯೋಗದೊಂದಿಗೆ ಎರಡು ವರ್ಷಗಳ ಅವಧಿಯವರೆಗೆ ಅವರ ನಿಗಾ ವಹಿಸುವುದು;

(ಐ) ಬಿಡುಗಡೆಗೆ ಮುಂಚಿನ ತಯಾರಿ;

(ಜೆ) ಬಿಡುಗಡೆ; ಮತ್ತು

(ಕೆ) ಪ್ರಭಾರಿ ಅಧಿಕಾರಿಯು ಸಭೆಯ ಮುಂದೆ ತರಬಹುದಾದ ಯಾವುದೇ ಇತರೆ ವಿಷಯ.

27. **ಸಾಮಾಜಿಕ ಲೆಕ್ಕಪರಿಶೋಧನೆ.-** ರಾಜ್ಯ ಸರ್ಕಾರವು, ವೃತ್ತಿಪರ ಸಂಶೋಧನಾ ಆಧಾರಿತ ಸಾಮಾಜಿಕ ಸಂಸ್ಥೆಗಳು ಅಥವಾ ಮಕ್ಕಳಿಗಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳ ವಾರ್ಷಿಕ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

## ಅಧ್ಯಾಯ – V
## ಪುನರ್ವಸತಿ ಮತ್ತು ಸಾಮಾಜಿಕ ಸಾಮರಸ್ಯ

**28. ದತ್ತಕ.-** (1) (ಎ) ಸ್ವಂತ ತಂದೆ ತಾಯಿಗಳು ಪೋಷಿಸಲು ಸಾಧ್ಯವಾಗದಂಥ ಒಂದು ಮಗುವನ್ನು ಖಾಯಂ ಆಗಿ ಪರ್ಯಾಯ ಕುಟುಂಬವೊಂದಕ್ಕೆ ನೀಡುವುದು ದತ್ತಕದ ಮೂಲ ಉದ್ದೇಶವಾಗಿದೆ.

(ಬಿ) ಅನಾಥರಾದ, ಪರಿತ್ಯಕ್ತರಾದ, ನಿರ್ಲಕ್ಷ್ಯಕ್ಕೊಳಗಾದ ಅಥವಾ ದುರುಪಯೋಗಕ್ಕೊಳಗಾದ ಮಕ್ಕಳ ಪುನರ್ವಸತಿ ಮತ್ತು ಸಾಮಾಜಿಕ ಪುನರ್‌ಸಂಘಟನೆಗಾಗಿ ದತ್ತಕವು ಮೊದಲ ಪರ್ಯಾಯ ಮಾರ್ಗವಾಗಿರತಕ್ಕದ್ದು.

(ಸಿ) ಕೇಂದ್ರ ದತ್ತಕಕ್ಕೆ ಮಕ್ಕಳನ್ನು ಒದಗಿಸುವ (ಸಿಎಆರ್‌ಎ) ಹೊರಡಿಸಿದ ದತ್ತಕ ಮಾರ್ಗದರ್ಶಿ ಸೂತ್ರಗಳು ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಮತ್ತು ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಆದೇಶಗಳು ದತ್ತಕಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು.

(ಡಿ) ಮಕ್ಕಳ ಕಲ್ಯಾಣ ಸಮಿತಿಯು ತನ್ನ ತನಿಖೆಯನ್ನು ಪೂರ್ಣಗೊಳಿಸಿದಾಗ ಮತ್ತು ಮಗು ಕಾನೂನುಸಮ್ಮತವಾಗಿ ದತ್ತಕಕ್ಕೆ ಮುಕ್ತವಾಗಿದೆ ಎಂದು ಘೋಷಿಸಿದ ತರುವಾಯ ದತ್ತು ಪಡೆಯಲು ಮಗುವು ದತ್ತಕಕ್ಕೆ ಅರ್ಹವಾಗುತ್ತದೆ.

(2) (ಎ) ರಾಜ್ಯ ಸರ್ಕಾರವು, ಮಕ್ಕಳನ್ನು ದೇಶದ ಒಳಗಡೆ ದತ್ತು ಕೊಡುವುದಕ್ಕಾಗಿ ದತ್ತಕ ಸ್ಥಳ ನಿರ್ದೇಶನ ಏಜೆನ್ಸಿಗಳೆಂದು ನೋಂದಾಯಿತವಾಗಿರುವ ಸ್ವಯಂ ಸೇವಾ ಸಂಸ್ಥೆಗಳು / ಸೂಕ್ತ ಸಂಸ್ಥೆಗಳು ಅಥವಾ ಮಕ್ಕಳ ಗೃಹಗಳಿಗೆ ಮಾನ್ಯತೆ ನೀಡತಕ್ಕದ್ದು.

(ಬಿ) ದತ್ತಕಕ್ಕಾಗಿ ಮಕ್ಕಳ ಗೃಹಗಳನ್ನು ಗುರುತಿಸುವ ಮಾನದಂಡಗಳು, ಸಿಎಆರ್ ಎ (ಕೇಂದ್ರದ ದತ್ತಕಕ್ಕೆ ಮಕ್ಕಳನ್ನು ಒದಗಿಸುವ ಏಜೆನ್ಸಿ) ಮಾರ್ಗದರ್ಶೀ ಸೂತ್ರಗಳಿಗನುಸಾರವಾಗಿ ಇರತಕ್ಕದ್ದು.

(ಸಿ) ಮಾನ್ಯತೆ ಪಡೆದ ಪ್ರತಿಯೊಂದು ಮಕ್ಕಳ ಗೃಹವು, ಸ್ಥಳೀಯ ಸ್ವಯಂ ಸೇವಾ ಸಮನ್ವಯ ಏಜೆನ್ಸಿಯೊಂದಿಗೆ ನೋಂದಾಯಿತವಾಗಿರತಕ್ಕದ್ದು.

(ಡಿ) ನೋಂದಾಯಿತವಾಗಿರದ ಗೃಹದಲ್ಲಿರುವ ದತ್ತಕಕ್ಕೆ ಅರ್ಹವಾಗಿರುವ ಯಾವುದೇ ಮಗುವನ್ನು ದತ್ತಕದ ಉದ್ದೇಶಕ್ಕಾಗಿ, ಮಕ್ಕಳ ಕಲ್ಯಾಣ ಸಮಿತಿಯ ಆದೇಶದ ಮೇರೆಗೆ ಒಂದು ನೋಂದಾಯಿತ ಗೃಹಕ್ಕೆ ವರ್ಗಾಯಿಸತಕ್ಕದ್ದು.

(ಇ) ನೋಂದಾಯಿತವಾದ ಅಂಥ ಎಲ್ಲ ಏಜೆನ್ಸಿಗಳು, ಸ್ವಯಂ ಸೇವಾ ಸಮನ್ವಯ ಏಜೆನ್ಸಿಗೆ ಹಾಗೂ ಮಕ್ಕಳ ಕಲ್ಯಾಣ ಸಮಿತಿಗೆ, ಮಕ್ಕಳ ಅಂಕಿಅಂಶಗಳ ಬಗ್ಗೆ ಒಂದು ಮಾಸಿಕ ವರದಿಯನ್ನು ಸಲ್ಲಿಸತಕ್ಕದ್ದು.

(ಎಫ್) ರಾಜ್ಯ ಸರ್ಕಾರವು ಮಾಡುವ ವಾರ್ಷಿಕ ಪರಿಶೀಲನೆಯನ್ನು ಆಧರಿಸಿ ಮಾನ್ಯತೆಯನ್ನು ನವೀಕರಿಸಬೇಕು.

(3) ಒಂದು ಪರಿತ್ಯಕ್ತ ಮಗುವಿನ ಬಗ್ಗೆ ಪೊಲೀಸರು ಮಾಹಿತಿಯನ್ನು ಸ್ವೀಕರಿಸಿದಾಗಲೆಲ್ಲಾ, ಪೊಲೀಸರು, ಸರ್ಕಾರೇತರ ಸಂಸ್ಥೆಗಳ ನೆರವಿನೊಂದಿಗೆ ಮಗುವನ್ನು ವಶಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ತುರ್ತಾಗಿ ವೈದ್ಯಕೀಯ ನೆರವು ಮತ್ತು ರಕ್ಷಣೆಯನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು. ಆ ತರುವಾಯ, ಮಗುವನ್ನು, ಒಂದು ದತ್ತಕ ಏಜೆನ್ಸಿ ಅಥವಾ ಒಂದು ಸರ್ಕಾರಿ ಆಸ್ಪತ್ರೆಯ ಮಕ್ಕಳ ಘಟಕದಲ್ಲಿ ಇರಿಸತಕ್ಕದ್ದು. ಅಂಥ ಸೌಲಭ್ಯಗಳು ಇಲ್ಲದಿದ್ದಲ್ಲಿ, ಮಗುವನ್ನು ಒಬ್ಬ ಸೂಕ್ತ ವ್ಯಕ್ತಿ ಅಥವಾ ಒಂದು

ಸೂಕ್ತ ಸಂಸ್ಥೆಗೆ ಒಪ್ಪಿಸಬಹುದು. ಈ ಸಂಬಂಧದಲ್ಲಿ, ಪೊಲೀಸರು, ಮಗುವನ್ನು ಯಾರ ಸ್ವಾಧೀನದಲ್ಲಿ ಇರಿಸಲಾಗಿದೆಯೋ ಆ ಸಂಸ್ಥೆಯ ಅಥವಾ ವ್ಯಕ್ತಿಯ ವಿಳಾಸವನ್ನು ಒದಗಿಸಿ ಮಕ್ಕಳ ಕಲ್ಯಾಣ ಸಮಿತಿಗೆ ಕೂಡಲೇ ವರದಿಯನ್ನು ಕಳುಹಿಸತಕ್ಕದ್ದು.

(4) ಪರಿತ್ಯಕ್ತವಾದ / ಒಪ್ಪಿಸಲಾದ ಒಂದು ಮಗುವನ್ನು, ಮಕ್ಕಳ ಕಲ್ಯಾಣ ಸಮಿತಿಯು ಅಂಥ ಮಗುವಿನ ದತ್ತಕಕ್ಕೆ ಕಾನೂನಿನ ಯಾವುದೇ ಅಡ್ಡಿಯಿಲ್ಲದೆ ಮುಕ್ತವಾಗಿದೆ ಎಂದು ಘೋಷಿಸಿದಾಗ ಮಾತ್ರ ದತ್ತು ನೀಡಬಹುದು. ಅಂಥ ಆದೇಶಕ್ಕೆ ಮಕ್ಕಳ ಕಲ್ಯಾಣ ಸಮಿತಿಯ ಕನಿಷ್ಠ ಇಬ್ಬರು ಸದಸ್ಯರು ಸಹಿ ಮಾಡಿದಾಗ ಮಾತ್ರವೇ, ಪರಿತ್ಯಕ್ತ ಮಗುವಿನ ದತ್ತಕಕ್ಕೆ ಕಾನೂನಿನ ಯಾವುದೇ ಅಡ್ಡಿಯಿರತಕ್ಕದ್ದಲ್ಲ.

(5) (1) ಪರಿತ್ಯಕ್ತ ಮಗು ಎಂದು ಘೋಷಿಸುವುದಕ್ಕೆ ಮತ್ತು ಅದು ದತ್ತಕಕ್ಕೆ ಸಂಬಂಧಿಸಿದಂತೆ ಕಾನೂನಿನ ಯಾವುದೇ ಅಡ್ಡಿಯಿಲ್ಲದೆ ಮುಕ್ತವಾಗಿದೆ ಎಂದು ಪ್ರಮಾಣೀಕರಿಸುವುದಕ್ಕೆ ಮುಂಚೆ ಈ ಮುಂದಿನ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು:-

(ಎ) ಒಂದು ಪರಿತ್ಯಕ್ತ ಮಗುವಿನ ಸಂದರ್ಭದಲ್ಲಿ, ಮಾನ್ಯತೆ ಪಡೆದ ಏಜೆನ್ಸಿಯು ನಲವತ್ತೆಂಟು ಗಂಟೆಗಳ ಒಳಗಾಗಿ, ಪರಿತ್ಯಕ್ತ ಮಗು ಕಂಡುಬಂದ ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ಠಾಣೆಗೆ ಸಲ್ಲಿಸಿದ ವರದಿಯ ಪ್ರತಿಯೊಂದಿಗೆ ಮಕ್ಕಳ ಕಲ್ಯಾಣ ಸಮಿತಿಗೆ ಆ ಬಗ್ಗೆ ವರದಿ ಮಾಡತಕ್ಕದ್ದು.

(ಬಿ) ಮಕ್ಕಳ ಕಲ್ಯಾಣ ಸಮಿತಿಯು, ಪರಿವೀಕ್ಷಣಾಧಿಕಾರಿಯ ಅಥವಾ ಸಂದರ್ಭಾನುಸಾರ, ಪೊಲೀಸರು ನಡೆಸುವ ಒಂದು ಪೂರ್ಣ ಪ್ರಮಾಣದ ತನಿಖೆಯನ್ನು ಒಳಗೊಂಡಿರುವ ತನಿಖೆಯ ಒಂದು ಪ್ರಕ್ರಿಯೆಯನ್ನು ಪ್ರಾರಂಭಿಸತಕ್ಕದ್ದು ಮತ್ತು ಅವರು ಒಂದು ತಿಂಗಳ ಗರಿಷ್ಠ ಅವಧಿಯೊಳಗಾಗಿ ನಿರ್ಣಯಗಳನ್ನು ಒಳಗೊಂಡ ಒಂದು ವರದಿಯನ್ನು ನಮೂನೆ VII ರಲ್ಲಿ ಸಮಿತಿಗೆ ನೀಡತಕ್ಕದ್ದು.

(ಸಿ) ಪ್ರಾದೇಶಿಕ ಭಾಷೆಯ ಒಂದು ವೃತ್ತ ಪತ್ರಿಕೆಯೂ ಸೇರಿದಂತೆ, ಕಡೇ ಪಕ್ಷ ಹೆಚ್ಚು ಪ್ರಸಾರದಲ್ಲಿರುವ ಒಂದು ವೃತ್ತ ಪತ್ರಿಕೆಯಲ್ಲಿ ಅಧಿಸೂಚನೆ ನೀಡಿದ ತರುವಾಯವೂ, ದೂರದರ್ಶನ ಮತ್ತು ಆಕಾಶವಾಣಿಯಲ್ಲಿ ಪ್ರಸಾರಮಾಡಿದ ತರುವಾಯವೂ ಮತ್ತು ಈ ಉಪ ನಿಯಮದ (ಎ) ಖಂಡದ ಅಡಿಯಲ್ಲಿ ವಿಚಾರಣೆ ನಡೆಸಬೇಕಾದ ಮತ್ತು ವರದಿ ಸಲ್ಲಿಸಬೇಕಾದ ಒಂದು ತಿಂಗಳ ಅವಧಿಯವರೆಗೆ ಕಾಯ್ದ ತರುವಾಯವೂ ಮಗುವನ್ನು ಯಾರೂ ಕ್ಲೇಮು ಮಾಡಿಲ್ಲವೆಂದು ಸ್ಥಳ ನಿರ್ದೇಶನ ಏಜೆನ್ಸಿಯು ಘೋಷಿಸಿರಬೇಕು.

(ಡಿ) ಮಕ್ಕಳ ಕಲ್ಯಾಣ ಸಮಿತಿಯು, ಎರಡು ವರ್ಷ ವಯಸ್ಸಿನ ಒಳಗಿನ ಮಕ್ಕಳ ಸಂದರ್ಭದಲ್ಲಿ, ಅರ್ಜಿಯ ದಿನಾಂಕದಿಂದ ಆರು ವಾರಗಳ ಅವಧಿಯೊಳಗೆ ಮತ್ತು ಆ ವಯಸ್ಸಿಗಿಂತ ಹೆಚ್ಚು ವಯಸ್ಸಿನ ಮಕ್ಕಳ ಸಂದರ್ಭದಲ್ಲಿ, ಮೂರು ತಿಂಗಳ ಒಳಗಾಗಿ, ಮಗುವು ದತ್ತಕಕ್ಕೆ ಸಂಬಂಧಿಸಿದಂತೆ ಕಾನೂನಿನ ಯಾವುದೇ ಅಡ್ಡಿಯಿಲ್ಲದೆ ಮುಕ್ತವಾಗಿದೆಯೆಂದು ಘೋಷಿಸಿ ಮಾನ್ಯತೆ ಪಡೆದ ಏಜೆನ್ಸಿಯ ಪರವಾಗಿ ಒಂದು ಬಿಡುಗಡೆ ಆದೇಶವನ್ನು ಮಾಡತಕ್ಕದ್ದು.

(ಇ) ಅರ್ಥ ಮಾಡಿಕೊಳ್ಳಬಲ್ಲ ಮತ್ತು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬಲ್ಲ ಏಳು ವರ್ಷ ವಯಸ್ಸಿಗೆ ಮೇಲ್ಪಟ್ಟ ಯಾವುದೇ ಮಗುವನ್ನು, ಅದರ ಸಮ್ಮತಿಯಿಲ್ಲದೆ ದತ್ತು ನೀಡತಕ್ಕದ್ದಲ್ಲ.

(ಎಫ್) ಸರ್ಕಾರ ನಡೆಸುತ್ತಿರುವ ಯಾವುವೇ ಆಸ್ಪತ್ರೆಗಳು ಅಥವಾ ಖಾಸಗಿ ನರ್ಸಿಂಗ್ ಹೋಂ, ಮೊದಲಾದವುಗಳು, ತಮ್ಮ ಆವರಣದೊಳಗೆ ಪರಿತ್ಯಕ್ತವಾದ ಒಂದು ಶಿಶುವನ್ನು ಕಂಡರೆ, ಆ ಬಗ್ಗೆ ಮಕ್ಕಳ ಕಲ್ಯಾಣ ಸಮಿತಿಗೆ ವರದಿ ಮಾಡತಕ್ಕದ್ದು. ಆಗ, ಮಕ್ಕಳ ಕಲ್ಯಾಣ ಸಮಿತಿಯು, ದತ್ತಕದ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದಿಂದ ಅಧಿಕೃತಗೊ ಂಡಿರುವ ಏಜೆನ್ಸಿಗಳಿಗೆ ಅಂಥ ಶಿಶುಗಳನ್ನು ಕಳುಹಿಸತಕ್ಕದ್ದು.

(6) ತಂದೆ ತಾಯಿಗಳು ಬಿಟ್ಟುಕೊಟ್ಟ ಮಗುವಿನ ಸಂದರ್ಭದಲ್ಲಿ ಈ ಮುಂದಿನ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳತಕ್ಕದ್ದು,-

I (ಎ) ಸಂಬಂಧಪಟ್ಟ ಏಜೆನ್ಸಿಯ ಸಮಾಜ ಸೇವಕನು, ತಂದೆ ತಾಯಿಗಳಿಗೆ ಸಲಹೆ ನೀಡತಕ್ಕದ್ದು, ದತ್ತಕದ ಪರಿಣಾಮಗಳನ್ನು ವಿವರಿಸತಕ್ಕದ್ದು ಮತ್ತು ಸಂಬಂಧಪಟ್ಟ ಮಗುವಿನ ತಂದೆ ತಾಯಿಗಳು ಮಗುವನ್ನು ತಮ್ಮಲ್ಲೇ ಉಳಿಸಿಕೊಳ್ಳುವ ಸಾಧ್ಯತೆಯಿದೆಯೇ ಎಂಬ ಬಗ್ಗೆ ಪರಿಶೀಲಿಸತಕ್ಕದ್ದು.

(ಬಿ) ಬಿಟ್ಟುಕೊಡುವುದು ಅನಿವಾರ್ಯವಾಗಿದ್ದಲ್ಲಿ, ಮಕ್ಕಳ ಕಲ್ಯಾಣ ಸಮಿತಿಯ ಸಮ್ಮುಖದಲ್ಲಿ ಬಿಟ್ಟುಕೊಡುವ ಪತ್ರವನ್ನು ನ್ಯಾಯಿಕ ಸ್ಟಾಂಪು ಕಾಗದವಲ್ಲದ ಒಂದು ಸ್ಟಾಂಪು ಕಾಗದದಲ್ಲಿ ಬರೆದುಕೊಡತಕ್ಕದ್ದು.

(ಸಿ) ಮಗುವನ್ನು ಬಿಟ್ಟುಕೊಡುವ ಪತ್ರದಲ್ಲಿ ಹಾಗೆ ಬಿಟ್ಟುಕೊಡುವುದಕ್ಕೆ ಇರುವ ಕಾರಣವನ್ನು ಮತ್ತು ಮಗುವಿಗೆ ಸಂಬಂಧಪಟ್ಟ ಇತರ ಮಾಹಿತಿಯನ್ನು ವಿವರಿಸತಕ್ಕದ್ದು. ಅದನ್ನು, ಪ್ರಾದೇಶಿಕ ಭಾಷೆಯಲ್ಲಿ ಬರೆದಿರತಕ್ಕದ್ದು. ಅದರಲ್ಲಿ, ಮಗುವನ್ನು ಬಿಟ್ಟುಕೊಡುವ ಪತ್ರವು ಜಾರಿಯಲ್ಲಿ ಬಂದ ದಿನಾಂಕದಿಂದ ಎರಡು ತಿಂಗಳ ಒಳಗಾಗಿ ಸದರಿ ಪತ್ರವನ್ನು ರದ್ದುಗೊಳಿಸಲು ತಂದೆ ತಾಯಿಗಳಿಗೆ ಇರುವ ಒಂದು ಹಕ್ಕಿನ ಬಗ್ಗೆ ಮಾಹಿತಿ ಇರತಕ್ಕದ್ದು.

(ಡಿ) ತಂದೆ ತಾಯಿಯರಿಬ್ಬರೂ ಜೀವಂತವಾಗಿದ್ದಲ್ಲಿ, ಅವರಿಬ್ಬರೂ ಪತ್ರವನ್ನು ಬರೆದುಕೊಡತಕ್ಕದ್ದು.

(ಇ) ತಂದೆ ತಾಯಿಗಳ ಪೈಕಿ ಒಬ್ಬರು ಮಾತ್ರ ಪತ್ರವನ್ನು ಬರೆದುಕೊಟ್ಟರೆ, ಅಂಥ ಸಂದರ್ಭದಲ್ಲಿ ಪತ್ರವನ್ನು ಬರೆದುಕೊಟ್ಟ ವ್ಯಕ್ತಿಯು ಇನ್ನೊಬ್ಬರ ಪ್ರಸ್ತುತ ಸ್ಥಿತಿಗತಿಯ ಬಗ್ಗೆ ಘೋಷಣೆಯನ್ನು ನೀಡತಕ್ಕದ್ದು. ತಂದೆ ತಾಯಿಗಳ ಪೈಕಿ ಯಾರಾದರೂ ಮೃತರಾದಲ್ಲಿ, ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು. ಮಕ್ಕಳ ಕಲ್ಯಾಣ ಸಮಿತಿಯು ಅಂಥ ಪ್ರಕರಣಗಳಲ್ಲಿ ಪರಿವೀಕ್ಷಣಾಧಿಕಾರಿಯು ವರದಿ ನೀಡುವಂತೆ ಕೇಳತಕ್ಕದ್ದು ಮತ್ತು ಪರಿತ್ಯಕ್ತ ಮಕ್ಕಳಿಗೆ ಸಂಬಂಧಿಸಿದಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

**II.** ಮಕ್ಕಳ ಕಲ್ಯಾಣ ಸಮಿತಿಯು, ಮಗುವನ್ನು ಬಿಟ್ಟುಕೊಡುವ ಬಗೆಗಿನ ಪತ್ರವನ್ನು ಬರೆದುಕೊಟ್ಟ ದಿನಾಂಕದಿಂದ ಜನ್ಮ ನೀಡಿದ ತಂದೆ ತಾಯಿಗಳ ಮರು ಪರಿಶೀಲನೆಗಾಗಿ ನೀಡಲಾದ ಎರಡು ತಿಂಗಳ ಅವಧಿ ತುಂಬುವವರೆಗೂ ಕಾಯತಕ್ಕದ್ದು. ಆ ತರುವಾಯ, ಮಕ್ಕಳ ಕಲ್ಯಾಣ ಸಮಿತಿಯು, ಮಗುವಿನ ದತ್ತಕಕ್ಕೆ ಕಾನೂನಿನ ಯಾವುದೇ ಅಡ್ಡಿಯಿಲ್ಲವೆಂದು ಘೋಷಿಸತಕ್ಕದ್ದು.

III. ದತ್ತಕಕ್ಕೆ ಕಾನೂನಿನ ಯಾವುದೇ ಅಡ್ಡಿಯಿಲ್ಲವೆಂದು ಸಮಿತಿಯು ಘೋಷಿಸಿದ ಒಂದು ಬಿಟ್ಟುಕೊಟ್ಟ/ ಪರಿತ್ಯಕ್ತ ಮಗುವಿನ ಸಂದರ್ಭದಲ್ಲಿ, ಲೈಸೆನ್ಸ್ ಹೊಂದಿರುವ ಏಜೆನ್ಸಿಯು, ಅಂತಿಮ ಆದೇಶವು ಇತ್ಯರ್ಥದಲ್ಲಿರುವಾಗ ಬಾಲಕ ನ್ಯಾಯ ಮಂಡಲಿಗೆ ತಿಳಿಸಿ, ಮಗುವನ್ನು ದತ್ತಕ ಪೂರ್ವ ರಕ್ಷಾ ಪಾಲನೆಯಲ್ಲಿ ಇಡುವ ಬಗ್ಗೆ ವಿವೇಚನೆಯನ್ನು ಹೊಂದಿರತಕ್ಕದ್ದು.

(6) (ಎ) ದತ್ತಕಕ್ಕೆ ಸಂಬಂಧಿಸಿದಂತೆ ಮಂಡಲಿಗೆ ಸಲ್ಲಿಸಲಾದ ಎಲ್ಲಾ ಅರ್ಜಿಗಳನ್ನು ಈ ಉದ್ದೇಶಕ್ಕಾಗಿ ಉಚ್ಚ ನ್ಯಾಯಾಲಯದಿಂದ ಮಾನ್ಯತೆ ಪಡೆದ ಒಂದು ಸ್ವತಂತ್ರ ಏಜೆನ್ಸಿಯು ಪರಿಶೀಲಿಸತಕ್ಕದ್ದು. ಪರಿಶೀಲನಾ ಏಜೆನ್ಸಿಯು, ಮಗುವನ್ನು ದತ್ತು ನೀಡಲು ಮಂಡಲಿಗೆ ಶಿಫಾರಸುಗಳನ್ನು ಮಾಡುವುದಕ್ಕೆ ಮುಂಚೆ ಮಗುವಿನ ಹಾಗೂ ಭಾವೀ ತಂದೆ ತಾಯಿಗಳ ಹಿನ್ನೆಲೆಯ ಬಗ್ಗೆ ಲಭ್ಯವಿರುವ ಎಲ್ಲ ಮಾಹಿತಿಗಳನ್ನು ಎರಡು ವಾರಗಳ ಅವಧಿಯೊಳಗೆ ಪರೀಕ್ಷಿಸಬೇಕು ಮತ್ತು ಆ ಬಗ್ಗೆ ದೃಢಪಡಿಸುವುದು.

(ಬಿ) ಪರಿಶೀಲನಾ ಸಮಿತಿಯು, ರಾಜ್ಯ ಸರ್ಕಾರದಿಂದ ದೃಢೀಕರಿಸಲಾದ ಮತ್ತು ಉಚ್ಚ ನ್ಯಾಯಾಲಯದಿಂದ ನೇಮಕಗೊಂಡ ಮಕ್ಕಳ ಕಲ್ಯಾಣ ಏಜೆನ್ಸಿಯಾಗಿರತಕ್ಕದ್ದು.

(ಸಿ) ಮಂಡಲಿಯು, ಭಾವೀ ತಂದೆ ತಾಯಿಗಳನ್ನು ಸಂದರ್ಶಿಸುವುದು, ದಾಖಲೆಗಳನ್ನು ಪರಿಶೀಲಿಸುವುದು ಸೇರಿದಂತೆ, ತನಿಖೆಯ ಪ್ರಕ್ರಿಯೆಯನ್ನು ಪ್ರಾರಂಭಿಸತಕ್ಕದ್ದು ಮತ್ತು ಪರಿಶೀಲನಾ ವರದಿಗಳನ್ನು ಪರಿಶೀಲಿಸುವುದೂ ಸೇರಿದಂತೆ ಮಗುವಿನ ಉತ್ತಮ ಹಿತಾಸಕ್ತಿಯಲ್ಲಿ ಮಗುವನ್ನು ದತ್ತು ನೀಡಬಹುದೆಂದು ಮಂಡಲಿಯು ಅಭಿಪ್ರಾಯಪಟ್ಟರೆ, ಅದು, ದತ್ತು ಪಡೆಯುವ ತಂದೆ ತಾಯಿಯರ ಅಭಿರಕ್ಷೆಗೆ ಮಗುವನ್ನು ಶಾಶ್ವತವಾಗಿ ನೀಡುವ ಅಂತಿಮ ಆದೇಶವನ್ನು ಹೊರಡಿಸತಕ್ಕದ್ದು. ದತ್ತಕದ ಆದೇಶಕ್ಕೆ ಪ್ರಧಾನ ಮ್ಯಾಜಿಸ್ಟ್ರೇಟ್‌ನ ಸಹಿಯ ಜೊತೆಗೆ ಮಂಡಲಿಯ ಇಬ್ಬರು ಸದಸ್ಯರ ಪೈಕಿ ಕನಿಷ್ಠ ಒಬ್ಬನಾದರೂ ಸಹಿ ಮಾಡಿರತಕ್ಕದ್ದು.

(ಡಿ) ಮಂಡಲಿಯು, ಮಗುವಿನ ವಯಸ್ಸು ಅಥವಾ ಜನನದ ದಿನಾಂಕವನ್ನು ನಿರ್ಧರಿಸತಕ್ಕದ್ದು ಮತ್ತು ಸ್ವಂತ ಮಗುವಿನ ಸಂದರ್ಭದಲ್ಲಿದ್ದಂತೆ ದತ್ತು ಪಡೆದ ತಂದೆ ತಾಯಿಗಳ ಹೆಸರಿನಲ್ಲಿ ಮಗುವಿಗೆ ನಿಯತವಾದ ಒಂದು ಜನನ ಪ್ರಮಾಣ ಪತ್ರ ನೀಡುವಂತೆ ಸೂಕ್ತ ಪ್ರಾಧಿಕಾರಕ್ಕೆ ಆದೇಶಗಳನ್ನು ಹೊರಡಿಸತಕ್ಕದ್ದು.

(ಇ) ಸಾಧ್ಯವಾದಷ್ಟು ಮಟ್ಟಿಗೆ, ದತ್ತಕ ಆದೇಶವನ್ನು ಹೊರಡಿಸುವುದಕ್ಕಾಗಿ ತೆಗೆದುಕೊಳ್ಳುವ ಅವಧಿಯು, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಎರಡು ತಿಂಗಳನ್ನು ಮೀರತಕ್ಕದ್ದಲ್ಲ. ಆದೇಶವು, ಮಗುವಿನ ಯೋಗಕ್ಷೇಮವನ್ನು ಖಚಿತ ಪಡಿಸಿಕೊಳ್ಳುವುದಕ್ಕಾಗಿ ಪರಿವೀಕ್ಷಣಾಧಿಕಾರಿ / ದತ್ತಕ ಏಜೆನ್ಸಿಯ ವಿಷಯ ನಿರ್ವಾಹಕರು ಒಂದು ನಿಯತಕಾಲಿಕ ಅನುಸರಣಾ ವರದಿಯನ್ನು ಒದಗಿಸುವ ಉಪಬಂಧವನ್ನು ಸಹ ಒಳಗೊಂಡಿರತಕ್ಕದ್ದು ಮತ್ತು ಅಂಥ ಅನುಸರಣಾ ಅವಧಿಯು, ಮೂರು ವರ್ಷಗಳಾಗಿರತಕ್ಕದ್ದು. ಮೊದಲ ವರ್ಷದಲ್ಲಿ ಆರು ತಿಂಗಳಿಗೊಮ್ಮೆ ಮತ್ತು ತರುವಾಯದ ಎರಡು ವರ್ಷಗಳಲ್ಲಿ ವರ್ಷಕ್ಕೊಮ್ಮೆ ಆಗಿರತಕ್ಕದ್ದು.

(ಎಫ್) ತೀರಾ ಚಿಕ್ಕವರಲ್ಲದ ಮಕ್ಕಳನ್ನು ದತ್ತು ನೀಡುವ ಸಂದರ್ಭದಲ್ಲಿ ಅನುಸರಣಾ ಕ್ರಿಯೆಯನ್ನು ಆಗಿಂದಾಗ್ಗೆ ಮಾಡತಕ್ಕದ್ದು. ಅದನ್ನು ಸಂಬಂಧಪಟ್ಟ ಪರಿವೀಕ್ಷಣಾಧಿಕಾರಿ / ಮಕ್ಕಳ ಕಲ್ಯಾಣ ಅಧಿಕಾರಿಯೊಂದಿಗೆ ಸಮಾಲೋಚಿಸಿ ಮಂಡಲಿಯು ನಿರ್ಧರಿಸತಕ್ಕದ್ದು.

**29. ರಕ್ಷಾಪಾಲನೆ.-** (1) ಒಂದು ಕುಟುಂಬದ ಪರಿಸರವು ಮಗುವಿನ ಸರ್ವಾಂಗೀಣ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಉತ್ತೇಜನ ನೀಡುವುದರಿಂದ ಸಾಂಸ್ಥಿಕ ಪಾಲನೆಗೆ ಪರ್ಯಾಯವಾಗಿರುವ ರಕ್ಷಾಪಾಲನೆಯನ್ನು ಆರಿಸಿಕೊಳ್ಳಬಹುದು. ಇದು ಕಡಿಮೆ ಅವಧಿಯದ್ದಾಗಿರಬಹುದು, ದೀರ್ಘ ಅವಧಿಯದ್ದಾಗಿರಬಹುದು ಅಥವಾ ಸಮೂಹ ರಕ್ಷಾ ಪಾಲನೆಯೂ ಆಗಿರಬಹುದು.

(ಎ) ಒಂದು ಮಗುವನ್ನು ಪಾಲನೆ ಮಾಡುವುದಕ್ಕೆ ಮಗುವಿನ ವಾಸ್ತವಿಕ ಪಾಲಕರಿಗೆ ಅಸಾಧ್ಯವಾದಾಗ, ಮಗುವನ್ನು ಕಡಿಮೆ ಅವಧಿಯ ರಕ್ಷಾಪಾಲನೆಯಲ್ಲಿ ಇಡತಕ್ಕದ್ದು ಮತ್ತು ತದನುಸಾರವಾಗಿ ಮಾನ್ಯತೆ ಪಡೆದ ದತ್ತಕ ಏಜೆನ್ಸಿಗೆ ಅರ್ಜಿಯನ್ನು ನೀಡತಕ್ಕದ್ದು.

(ಬಿ) ತಾತ್ಕಾಲಿಕ ರಕ್ಷಾಪಾಲನೆಯು, ಕುಟುಂಬದ ಸನ್ನಿವೇಶಗಳು ಸುಧಾರಿಸಿದ ಕೂಡಲೇ ಮಗುವು ತನ್ನ ವಾಸ್ತವಿಕ ಕುಟುಂಬಕ್ಕೆ ಹಿಂತಿರುಗಲು ಸಾಧ್ಯವಾಗುವವರೆಗೂ ಅದರ ದೈಹಿಕ ಅಭಿರಕ್ಷೆ/ ಪಾಲನೆಗೆ ಸಂಬಂಧಿಸಿದ್ದಾಗಿದೆ ಮತ್ತು ಅದು ನಾಲ್ಕು ತಿಂಗಳನ್ನು ಮೀರತಕ್ಕದ್ದಲ್ಲ.

(ಸಿ) ತಾತ್ಕಾಲಿಕ ರಕ್ಷಾಪಾಲನೆಯನ್ನು, 42ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನೀಡಲಾದಂತೆ ನಮೂನೆ II ರಲ್ಲಿ ಸಂದರ್ಭಾನುಸಾರ, ಪರಿವೀಕ್ಷಣಾಧಿಕಾರಿಯ ಮೇಲ್ವಿಚಾರಣೆಯಲ್ಲಿ ಸಕ್ಷಮ ಪ್ರಾಧಿಕಾರವು ನಿರ್ವಹಿಸತಕ್ಕದ್ದು.

(ಡಿ) ತಾತ್ಕಾಲಿಕ ರಕ್ಷಾಪಾಲನೆ ಅವಧಿಯನ್ನು ವಿಸ್ತರಿಸಬಹುದು ಮತ್ತು ಒಟ್ಟು ಅವಧಿಯು ಐದು ವರ್ಷಗಳನ್ನು ಮೀರತಕ್ಕದ್ದಲ್ಲ. ಐದು ವರ್ಷಗಳ ತರುವಾಯ, ಮಗುವು ವಾಸ್ತವಿಕ ತಂದೆ ತಾಯಿಗಳ ಬಳಿಗೆ ಹಿಂದಿರುಗದಿದ್ದಲ್ಲಿ, ಮಗುವನ್ನು ಸಾಕು ಕುಟುಂಬಕ್ಕೆ ದತ್ತು ನೀಡತಕ್ಕದ್ದು. ದತ್ತು ನೀಡುವ ಕಾರ್ಯವಿಧಾನವು ಕೇಂದ್ರದ ದತ್ತಕಕ್ಕೆ ಮಕ್ಕಳನ್ನು ಒದಗಿಸುವ ಏಜೆನ್ಸಿ (ಸಿ.ಎ.ಆರ್.ಎ) ಮಾರ್ಗದರ್ಶನ ಸೂತ್ರಗಳಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

(2) ಸಾಕು ತಂದೆತಾಯಿಗಳಾಗಲು ಈ ಮುಂದಿನ ವ್ಯಕ್ತಿಗಳು ಸಕ್ಷಮವಾಗಿರತಕ್ಕದ್ದು,

(ಎ) ಒಂದು ವಿವಾಹಿತ ದಂಪತಿ;

(ಬಿ) ಒಬ್ಬ ಒಂಟಿ ತಂದೆ/ ತಾಯಿ;

(ಸಿ) ಮಗುವಿನ ವಿಸ್ತೃತ ಕುಟುಂಬದ ಸದಸ್ಯರು;

(ಡಿ) ಮಗುವಿನ / ಮಕ್ಕಳ ವೈಯಕ್ತಿಕ ಅಥವಾ ಸಾಮೂಹಿಕ ರಕ್ಷಾಪಾಲನೆ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಇಚ್ಛಿಸುವ ಸರ್ಕಾರೇತರ ಸಂಸ್ಥೆಗಳು ಅಥವಾ ಮಾನ್ಯತೆ ಪಡೆದ ಇತರ ವ್ಯಕ್ತಿ / ವ್ಯಕ್ತಿಗಳು ಅಥವಾ ಏಜೆನ್ಸಿಗಳು.

**(3) ನಿರ್ವಹಣಾ ಅನುದಾನ.-** ಸಮೂಹ ಪಾಲನೆ ಗೃಹಗಳ ಸಂದರ್ಭದಲ್ಲಿ, ಸಾಕು ತಂದೆ ತಾಯಿಗಳಿಗೆ, ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದ ನಿರ್ವಹಣಾ ನೆರವು ಮೊತ್ತವನ್ನು ಸಂದಾಯ ಮಾಡಲಾಗುವುದು. ಇದನ್ನು, ಮಗುವನ್ನು

ರಕ್ಷಾಪಾಲನೆ ನೀಡಲಾಗಿರುವ ಅನುಮೋದಿತ ಏಜೆನ್ಸಿಯ ಮೂಲಕ ಸಂದಾಯ ಮಾಡಲಾಗುವುದು. ಒಂದು ಸಮೂಹ ಪಾಲನೆ ಗೃಹದಲ್ಲಿ ಇರಬೇಕಾದ ಮಕ್ಕಳ ಸಂಖ್ಯೆ ಆರನ್ನು ಮೀರತಕ್ಕದ್ದಲ್ಲ.

**(4) ಪಾಲನಾ ಕುಟುಂಬದ ಆಯ್ಕೆಯ ಮಾನದಂಡಗಳು.–** (ಎ) ಸಾಕು ತಂದೆ ತಾಯಿ (ಗಳು) ಕುಟುಂಬದೊಳಗೆ ಒಂದು ದೃಢ ಭಾವನಾತ್ಮಕ ಪರಿಸರವನ್ನು ಹೊಂದಿರತಕ್ಕದ್ದು;

(ಬಿ) ಸಾಕು ತಂದೆ ತಾಯಿ (ಗಳು) ತಮ್ಮ ಅಗತ್ಯತೆಗಳನ್ನು ಪೂರೈಸುವ ಒಂದು ಆದಾಯವನ್ನು ಹೊಂದಿರತಕ್ಕದ್ದು ಮತ್ತು ರಕ್ಷಾಪಾಲನೆಯ ನಿರ್ವಹಣೆ ಮೊತ್ತದ ಮೇಲೆ ಅವಲಂಬಿತವಾಗಿರತಕ್ಕದ್ದಲ್ಲ;

(ಸಿ) ಪಾಲನಾ ಕುಟುಂಬವು, ಮಕ್ಕಳ ತಜ್ಞರಲ್ಲಿಗೆ ನಿಯತ ಭೇಟಿಗಳು, ಮಗುವಿನ ಆರೋಗ್ಯ ದಾಖಲೆಯ ನಿರ್ವಹಣೆ, ಇತ್ಯಾದಿಗಳೂ ಸೇರಿದಂತೆ ವಿಧಿಸಲಾದ ನಿಯಮಗಳನ್ನು ಅನುಸರಿಸಲು ಬದ್ಧವಾಗಿರತಕ್ಕದ್ದು;

(ಡಿ) ಕುಟುಂಬವು, ಮಗುವಿನ ದುರಾಚಾರ ಮತ್ತು ನಿರ್ಲಕ್ಷ್ಯದ ಸನ್ನಿವೇಶಗಳಲ್ಲಿ ಒಂದು ಒಪ್ಪಂದಕ್ಕೆ ಸಹಿ ಮಾಡಲು ಮಗುವನ್ನು ಏಜೆನ್ಸಿಗೆ ಹಿಂತಿರುಗಿಸಲು ಬದ್ಧರಾಗಿರತಕ್ಕದ್ದು;

(ಇ) ಸಾಕು ತಂದೆ ತಾಯಿಯರು, ದತ್ತು ಪಡೆಯುವುದಕ್ಕೆ ಮುಂಚೆ ಮತ್ತು ಆನಂತರ ಅಗತ್ಯವೆಂದು ಕಂಡುಬಂದಾಗ ತರಬೇತಿ ಮತ್ತು ಪುನಶ್ಚೇತನ ತರಬೇತಿ ಕಾರ್ಯಕ್ರಮಗಳಿಗೆ ಹಾಜರಾಗಲು ಬದ್ಧರಾಗಿರತಕ್ಕದ್ದು;

(ಎಫ್) ಉದ್ಯೋಗದಲ್ಲಿರುವ ಸಾಕು ತಂದೆ ತಾಯಿಗಳ ಸಂದರ್ಭದಲ್ಲಿ, ಶಾಲಾ ಸಮಯದ ನಂತರ ಮಗುವಿನ ಪಾಲನೆಗೆ ಸಾಕಷ್ಟು ವ್ಯವಸ್ಥೆಗಳನ್ನು ಮಾಡತಕ್ಕದ್ದು;

(ಜಿ) ಸಾಕು ಮಗುವನ್ನು ದತ್ತು ಪಡೆಯಲು ಅವರ ಕುಟುಂಬದ ಸದಸ್ಯರು ಸಮ್ಮತಿ ನೀಡಿದ್ದಾರೆಯೇ ಎಂದು ಖಚಿತಪಡಿಸಿಕೊಳ್ಳತಕ್ಕದ್ದು;

(ಹೆಚ್) ಸಾಕು ತಂದೆ ತಾಯಿ, ಮಗುವಿಗೆ ಉತ್ತಮ ಶಿಕ್ಷಣ ನೀಡುವುದೂ ಸೇರಿದಂತೆ, ಉತ್ತಮ ಪಾಲನೆಯನ್ನು ನೀಡುವ ಸಾಮರ್ಥ್ಯವನ್ನು ಹೊಂದಿರತಕ್ಕದ್ದು;

(ಐ) ಗೃಹವು ಸಾಕಷ್ಟು ಸ್ಥಳ ಮತ್ತು ವಾಸ್ತವಿಕ ಸೌಲಭ್ಯಗಳನ್ನು ಹೊಂದಿರತಕ್ಕದ್ದು.

(5) ಆರು ತಿಂಗಳಿಗೊಮ್ಮೆ, ಪರಿವೀಕ್ಷಣಾಧಿಕಾರಿ ಅಥವಾ ಸಂದರ್ಭಾನುಸಾರ, ಮಕ್ಕಳ ಕಲ್ಯಾಣ ಅಧಿಕಾರಿಯು ನಿಯತವಾದ ಮೇಲ್ವಿಚಾರಣೆ ನಡೆಸತಕ್ಕದ್ದು ಮತ್ತು ಉಸ್ತುವಾರಿ ನೋಡಿಕೊಳ್ಳಬೇಕು.

**30. ಪ್ರಾಯೋಜಕತೆ.–** (1) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು, ಮಕ್ಕಳ ಜೀವನ ಮಟ್ಟವನ್ನು ಸುಧಾರಿಸುವ ದೃಷ್ಟಿಯಿಂದ ಮಕ್ಕಳ ವೈದ್ಯಕೀಯ, ಪೌಷ್ಟಿಕ ಆಹಾರ, ಶಿಕ್ಷಣಕ್ಕೆ ಸಂಬಂಧಿಸಿದ ಮತ್ತು ಇತರ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ಮಕ್ಕಳ ಗೃಹಗಳು ಮತ್ತು ವಿಶೇಷ ಗೃಹಗಳಿಗೆ ಬೆಂಬಲ ನೀಡುವ ಮೂಲಕ ಮಕ್ಕಳ ಮತ್ತು ಕುಟುಂಬಗಳ ಸಂಬಂಧದಲ್ಲಿ 43ನೇ ಪ್ರಕರಣದಲ್ಲಿ ನಿರೂಪಿಸಲಾದಂಥ ಪ್ರಾಯೋಜಕತಾ ಯೋಜನೆಗೆ ಉತ್ತೇಜನ ನೀಡತಕ್ಕದ್ದು. ಇಲಾಖೆಯು, ಈ ಮುಂದಿನ ಬೆಂಬಲ ಅಥವಾ ಪ್ರಾಯೋಜಕತೆಗಾಗಿ ವ್ಯಕ್ತಿಗಳು, ಸರ್ಕಾರೇತರ ಸಂಸ್ಥೆಗಳು, ಹಣಕಾಸು ಸಂಸ್ಥೆಗಳು, ನಿಗಮಿತ ವಲಯ ಮತ್ತು ಸಾರ್ವಜನಿಕರಿಗೆ ಉತ್ತೇಜನ ನೀಡತಕ್ಕದ್ದು:–

(ಎ) **ವೈಯಕ್ತಿಕ ಪ್ರಾಯೋಜಕತೆಯನ್ನು** ಈ ಮುಂದಿನವುಗಳಿಗಾಗಿ ಪರಿಗಣಿಸಬಹುದು,–

(i) ಒಂದು ಮಗುವು ತನ್ನ ಉನ್ನತ ಶಿಕ್ಷಣ ಮುಂದುವರಿಸುವುದು ಅಥವಾ ಬಾಲ ಕಾರ್ಮಿಕ/ ಜೀತ ಕಾರ್ಮಿಕ ವ್ಯವಸ್ಥೆಯಿಂದ ಮಕ್ಕಳನ್ನು ಬಿಡಿಸುವುದು;

(ii) ವೃತ್ತಿಪರ ತರಬೇತಿ ಕಾರ್ಯಕ್ರಮಗಳನ್ನು ಉದ್ಯೋಗ ಆಧಾರಿತ ತರಬೇತಿಯನ್ನು ಕೈಗೊಳ್ಳುವುದಕ್ಕಾಗಿ;

(iii) ವೈದ್ಯಕೀಯ ನೆರವಿಗಾಗಿ;

(ಬಿ) ಮಗುವನ್ನು ಪಾಲನೆ ಮಾಡಲು ಬಯಸುವ ಮತ್ತು ಸಮರ್ಥರಿರುವ, ಆದರೆ ಅಂಗವಿಕಲರಾಗಿರುವ ಅಥವಾ ದೀರ್ಘಕಾಲದ ಕಾಯಿಲೆಯಿಂದ ಬಳಲುತ್ತಿರುವ ಕುಟುಂಬದಲ್ಲಿನ ಒಂದು ಅಥವಾ ಹೆಚ್ಚು ಮಕ್ಕಳ ನೆರವಿಗಾಗಿ ಕೌಟುಂಬಿಕ ನೆರವನ್ನು ಪರಿಗಣಿಸಬಹುದು;

(ಸಿ) **ತಂಡ ಪ್ರಾಯೋಜಕತೆಯನ್ನು,** ತಮ್ಮ ಕುಟುಂಬಗಳೊಂದಿಗೆ ವಾಸಿಸುತ್ತಿರುವ ಆದರೆ ಒಂದು ತಂಡವಾಗಿ, ಕ್ರೀಡಾ ಚಟುವಟಿಕೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಪರ್ಧೆಗಳು ಅಥವಾ ಯಾವುವೇ ಇತರ ಅಭಿವೃದ್ಧಿಪರ ಕಾರ್ಯಕ್ರಮಗಳನ್ನು, ಅವರ ಕಲ್ಯಾಣ ಮತ್ತು ಅಭಿವೃದ್ಧಿಗಾಗಿ ವ್ಯವಸ್ಥೆಗೊಳಿಸಲಾದ ಒಂದು ಸಾಮಾನ್ಯ ಸೇವೆಯಲ್ಲಿ ಹಾಜರಾಗುವ ಮಕ್ಕಳ ಒಂದು ತಂಡಕ್ಕಾಗಿ ಪರಿಗಣಿಸಬಹುದಾಗಿದೆ;

(ಡಿ) **ಸಮುದಾಯ ಪ್ರಾಯೋಜಕತೆಯನ್ನು** ತಮ್ಮ ಕುಟುಂಬದೊಂದಿಗೆ ವಾಸಿಸುತ್ತಿರುವ ಮಕ್ಕಳಿಗೆ ಅನುಕೂಲ ಒದಗಿಸುವ ಸೌಲಭ್ಯಗಳ ಸುಧಾರಣೆ, ಹಗಲು ಹೊತ್ತಿನ ಪಾಲನಾ ಸೌಲಭ್ಯಗಳು, ಕಟ್ಟಡದ, ಶೌಚಾಲಯಗಳ ನಿರ್ಮಾಣ ಅಥವಾ ದುರಸ್ತಿಯಂಥ ಸಮುದಾಯದಲ್ಲಿನ ಸೇವೆಗಳನ್ನು ಉತ್ತಮಗೊಳಿಸುವುದನ್ನು ಪರಿಗಣಿಸಬಹುದಾಗಿದೆ.

(2) **ಪ್ರಾಯೋಜಕತೆಗಾಗಿ ಮಕ್ಕಳನ್ನು ಆಯ್ಕೆ ಮಾಡುವ ಮಾನದಂಡಗಳು.–** (ಎ) ವಾರ್ಷಿಕ ರೂ. 24,000 ವನ್ನು ಮೀರದ ಆದಾಯವಿರುವ ಒಂಟಿ ತಂದೆ ತಾಯಿಯೊಂದಿಗೆ / ಜನ್ಮ ನೀಡಿದ ಕುಟುಂಬಗಳೊಂದಿಗೆ ಇರಿಸಲಾದ ಮಕ್ಕಳು;

(ಬಿ) ತಜ್ಞ ಮಧ್ಯಸ್ಥಿಕೆ / ಚಿಕಿತ್ಸೆಯ ಅಗತ್ಯವಿರುವ ಮತ್ತು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಸಂಸ್ಥೆಯಿಂದ ಅಥವಾ ಕಾರ್ಯಕ್ರಮದಿಂದ ಕಳಿಸಿರುವ ಅಂಗವಿಕಲ ಮತ್ತು ಇತರ ವಿಶೇಷ ಅಗತ್ಯತೆಗಳಿರುವ ಮಕ್ಕಳು.

(3) **ಪ್ರಾಯೋಜಕತೆಯ ಪ್ರಮಾಣ ಮತ್ತು ಅವಧಿ –** ಇವುಗಳನ್ನು ಒಂದಾದಮೇಲೊಂದು ಬರುವ ಪ್ರಕರಣಗಳ ಸರದಿಯನ್ನು ಆಧರಿಸಿ ಮಕ್ಕಳ ಕಲ್ಯಾಣ ಸಮಿತಿಯು ನಿರ್ಧರಿಸತಕ್ಕದ್ದು.

(4) ಪ್ರಾಯೋಜಕತಾ ನಿಧಿಯನ್ನು, ಮಕ್ಕಳ ಕಲ್ಯಾಣ ಸಮಿತಿಯ ಮೇಲ್ವಿಚಾರಣೆಯಲ್ಲಿ ಜಿಲ್ಲೆ/ ರಾಜ್ಯ ಮಟ್ಟದಲ್ಲಿರುವ ಗೊತ್ತುಪಡಿಸಿದ, ಮಾನ್ಯತೆ ಪಡೆದ ಪ್ರಾಯೋಜಕತಾ ಏಜೆನ್ಸಿ / ಗುರುತಿಸಲಾದ ಸರ್ಕಾರೇತರ ಸಂಸ್ಥೆಗಳು ನಿರ್ವಹಿಸತಕ್ಕದ್ದು.

(5) ಪ್ರಾಯೋಜಕತ್ವದ ನೆರವನ್ನು, ಮಗುವನ್ನು ಬಿಡುಗಡೆ ಮಾಡಿದ ಸಂಸ್ಥೆಯ ಮೂಲಕ ನೀಡತಕ್ಕದ್ದು ಮತ್ತು ಇದನ್ನು, ಚೆಕ್‌ಗಳ / ಡಿಡಿಗಳ ಮೂಲಕ ಮಾಡತಕ್ಕದ್ದು.

(6) ಪ್ರಾಯೋಜಕತೆಯ ನೆರವನ್ನು ಸ್ವೀಕರಿಸುವ ಸಂಸ್ಥೆಯು, ಕಾರ್ಯಕ್ರಮಗಳಿಗೆ ಸಂಬಂಧಿಸಿದ ಎಲ್ಲ ಸ್ವೀಕೃತಿಗಳು ಮತ್ತು ಸಂದಾಯಗಳ ಸರಿಯಾದ ಮತ್ತು ಪ್ರತ್ಯೇಕವಾದ ಲೆಕ್ಕವನ್ನು ಇಡತಕ್ಕದ್ದು.

(7) ರಾಜ್ಯ ಸರ್ಕಾರಕ್ಕೆ ಮೂರು ತಿಂಗಳಿಗೊಮ್ಮೆ ವರದಿಯನ್ನು ಕಳುಹಿಸತಕ್ಕದ್ದು.

(8) ಕಾರ್ಯಚಟುವಟಿಕೆಗಳನ್ನು ಪರಿಶೀಲಿಸುವ ಜಿಲ್ಲಾ ಸಲಹಾ ಸಮಿತಿ ಅಥವಾ ಸಕ್ಷಮ ಪ್ರಾಧಿಕಾರವು, ಪರಿಶೀಲನೆಯ ಅವಧಿಯಲ್ಲಿ ಪ್ರಾಯೋಜಕತೆಗೆ ಸಂಬಂಧಿಸಿದ ದಾಖಲೆಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಅನುಸರಣೆಗಾಗಿ ಆ ವರದಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಿಗೆ ಕಳುಹಿಸತಕ್ಕದ್ದು.

**31. ಅನುಪಾಲನಾ ಸಂಸ್ಥೆಗಳು.-** (1) (ಎ) ರಾಜ್ಯ ಸರ್ಕಾರವು, ವಿಶೇಷ ಗೃಹಗಳಿಂದ ಅಥವಾ ಮಕ್ಕಳ ಗೃಹಗಳಿಂದ ವಿಮೋಚನೆಗೊಳಿಸಿದ ಬಾಲಕರು ಅಥವಾ ಮಕ್ಕಳನ್ನು ಸ್ವೀಕರಿಸುವುದಕ್ಕಾಗಿ ಸರ್ಕಾರವು ಸ್ವತಃ ಅಥವಾ ಸರ್ಕಾರೇತರ ಸಂಸ್ಥೆಗಳ ಮೂಲಕ ಅನುಪಾಲನಾ ಗೃಹಗಳನ್ನು ಸ್ಥಾಪಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು. ಹದಿನೆಂಟು ಮತ್ತು ಇಪ್ಪತ್ತು ವರ್ಷಗಳ ವಯಸ್ಸಿನ ಬಾಲಕರಿಗೆ ಮತ್ತು ಬಾಲಕಿಯರಿಗೆ ಪ್ರತ್ಯೇಕವಾದ ಅನುಪಾಲನಾ ಗೃಹಗಳನ್ನು ತೆರೆಯತಕ್ಕದ್ದು.

(ಬಿ) ತಂದೆ ತಾಯಿ / ಪಾಲಕರಿಲ್ಲದ ಯುವ ವ್ಯಕ್ತಿಗಳು, ಅನುಪಾಲನಾ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಅರ್ಹರಾಗಿರುತ್ತಾರೆ.

(ಸಿ) ಸಂಸ್ಥೆಯಿಂದ ವಿಮೋಚನೆಗೊಳಿಸಲಾದ ಮಗುವಿಗೆ ಪುನಃ ಪ್ರವೇಶಾವಕಾಶವಿರುವುದಿಲ್ಲ.

(ಡಿ) ಉದ್ಯೋಗದಲ್ಲಿರುವ ಮಗು, ಸಂಸ್ಥೆಯಲ್ಲಿ ಮುಂದುವರೆಯಲು ಅನರ್ಹವಾಗಿರತಕ್ಕದ್ದು.

(ಇ) ಇಪ್ಪತ್ತೊಂದು ಮತ್ತು ಅದಕ್ಕೂ ಹೆಚ್ಚು ವಯಸ್ಸಿನ ಯಾವುದೇ ಮಗುವನ್ನು, ಅನುಪಾಲನಾ ಗೃಹದಲ್ಲಿ ಮುಂದುವರೆಯಲು ಅನುಮತಿಸತಕ್ಕದ್ದಲ್ಲ.

(2) ಸಂಘಗಳು ಮತ್ತು ಸಂಘಟನೆಗಳು ನಡೆಸುತ್ತಿರುವ ಯಾವುದೇ ಸಂಸ್ಥೆಯು ವಿಶೇಷ ಗೃಹ ಅಥವಾ ಮಕ್ಕಳ ಗೃಹದಿಂದ ಕಳುಹಿಸಲಾದ ಬಾಲಕರನ್ನು ಸ್ವೀಕರಿಸುವುದಕ್ಕೆ ಸೂಕ್ತವಾಗಿದೆಯೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, ಅದು, ಅಂಥ ಸಂಘಟನೆಗಳಿಗೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಅನುಪಾಲನಾ ಸಂಘಟನೆಗಳೆಂದು ಮಾನ್ಯತೆ ನೀಡಬಹುದು.

(3) ಒಂದು ಅನುಪಾಲನಾ ಸಂಸ್ಥೆಯು,-

(ಎ) ಅವನ / ಅವಳ ಚಾರಿತ್ರ್ಯ ಮತ್ತು ಸಾಮರ್ಥ್ಯಗಳ ಅಭಿವೃದ್ಧಿಗಾಗಿ, ಅವನ / ಅವಳ ವ್ಯಕ್ತಿತ್ವದ ಸರ್ವಾಂಗೀಣ ವಿಕಾಸಕ್ಕಾಗಿ ಹಾಗೂ ಕಾನೂನನ್ನು ಪಾಲಿಸುವ ಒಬ್ಬ ನಾಗರಿಕನಾಗಿ ಸಮುದಾಯದಲ್ಲಿ ಪುನಃ ಒಂದಾಗಿ ಮಾಡುವುದಕ್ಕಾಗಿ ಸ್ಥಳಾವಕಾಶ ಕಲ್ಪಿಸತಕ್ಕದ್ದು, ನಿರ್ವಹಣೆಯನ್ನು ಮಾಡತಕ್ಕದ್ದು . ಶೈಕ್ಷಣಿಕ ಮತ್ತು ವೃತ್ತಿಪರ ಮಾರ್ಗದರ್ಶನ ಮತ್ತು ಸೌಲಭ್ಯಗಳನ್ನು ಒದಗಿಸತಕ್ಕದ್ದು.

(ಬಿ) ನೈತಿಕ ಅಪಾಯಗಳು ಮತ್ತು ಶೋಷಣೆಯಿಂದ ಮಗುವನ್ನು ರಕ್ಷಿಸತಕ್ಕದ್ದು.

(ಸಿ) ಮಕ್ಕಳು ಅನಪೇಕ್ಷಿತ ಶಕ್ತಿಗಳೊಂದಿಗೆ ಬೆರೆಯುವುದನ್ನು ತಡೆಯತಕ್ಕದ್ದು.

(ಡಿ) ಮಕ್ಕಳಿಗೆ ಪುನರ್ವಸತಿ ಕಲ್ಪಿಸಲು ಮಾರ್ಗೋಪಾಯಗಳನ್ನು ಕಂಡು ಹಿಡಿಯತಕ್ಕದ್ದು.

(ಇ) ಒಂದು ಅನುಪಾಲನಾ ಗೃಹದಲ್ಲಿನ ಮಕ್ಕಳಿಗೆ ಸಂಸ್ಥೆಯಲ್ಲಿರುವಾಗಿನ ವರ್ತನೆ ಮತ್ತು ಸಮಾಜದಲ್ಲಿ ಒಂದಾಗಿಸುವ ಪ್ರಕ್ರಿಯೆ ಇವುಗಳ ನಡುವಿನ ಅಂತರದ ನಡುವೆ ಸಂಪರ್ಕ ಕಲ್ಪಿಸುವ ಒಂದು ವ್ಯವಸ್ಥಿತ ಮಾರ್ಗವಿರುವಂತೆ ಪರಿಣಾಮಕಾರಿಯಾಗಿರುವಂತೆ ನೋಡಿಕೊಳ್ಳತಕ್ಕದ್ದು.

(4) ರಕ್ಷಾಪಾಲನೆ ಕಾರ್ಯಕ್ರಮದ ಯೋಜನೆಯು ಈ ಮುಂದಿನದನ್ನು ಒಳಗೊಂಡಿರಬೇಕು,-

(ಎ) ಉದ್ಯೋಗಾವಕಾಶ ಕಲ್ಪಿಸುವುದು;

(ಬಿ) ಅವನು / ಅವಳು ಸಾಕಷ್ಟು ಹಣವನ್ನು ಗಳಿಸಿದ ತರುವಾಯ ಅವನ / ಅವಳ ಸ್ವಂತ ಸ್ಥಳದಲ್ಲಿ ನೆಲೆಯೂರಲು ಪ್ರೋತ್ಸಾಹಿಸುವುದು;

(ಸಿ) ವೃತ್ತಿಪರ ಉದ್ಯೋಗವನ್ನು ಕಲಿಯುವ ಯುವಕರಿಗೆ ವೃತ್ತಿವೇತನ ನೀಡುವುದು. ಅದನ್ನು, ಅವನು / ಅವಳು ಉದ್ಯೋಗ ಪಡೆದ ಕೂಡಲೇ ನಿಲ್ಲಿಸಲಾಗುವುದು;

(ಡಿ) ಉದ್ಯಮಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಈ ಯುವ ಜನರಿಗೆ ಸಾಲಗಳನ್ನು ಕೊಡುವ ವ್ಯವಸ್ಥೆಯನ್ನು ಸಹ ಮಾಡಲಾಗುವುದು;

(ಇ) ಒಬ್ಬ ಕಳಕಳಿಯುಳ್ಳ ಸಂಧಾನಕಾರನನ್ನು ನೇಮಿಸುವುದು. ಆತನು, ಈ ಮಕ್ಕಳು ಜೀವನದ ಬಿಕ್ಕಟ್ಟನ್ನು ನಿಭಾಯಿಸುವಲ್ಲಿ ಅವರಲ್ಲಿ ತುಂಬಿರುವ ಜೀವನೋತ್ಸಾಹಕ್ಕೆ ಸೃಜನಾತ್ಮಕ ಮಾರ್ಗಗಳನ್ನು ಕಲ್ಪಿಸುವ ಸಲುವಾಗಿ ಮತ್ತು ಪುನರ್ವಸತಿ ಯೋಜನೆಗಳ ಬಗ್ಗೆ ಚರ್ಚಿಸುವ ಸಲುವಾಗಿ ಅವರೊಂದಿಗೆ ಯುಕ್ತ ಸಂಪರ್ಕವನ್ನು ಹೊಂದಿರುವನು;

(ಎಫ್) ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಅಥವಾ ವಿಶೇಷ ಗೃಹಗಳನ್ನು ಬಿಟ್ಟಿರುವ ಬಾಲಕರು ತಮ್ಮ ಸಹಜ ಜೀವನಕ್ಕೆ ಮರಳಿ ಬರಲು ಹಾಗೂ ತಮ್ಮ ಪರಿಸರಕ್ಕೆ ಹೊಂದಿಕೊಳ್ಳಲು ಮತ್ತು ಅದನ್ನು ಅಳವಡಿಸಿಕೊಳ್ಳಲು ನೆರವಾಗುವಂತೆ ಮಾಡುವುದು ಇಲ್ಲಿಯ ಕಾರ್ಯತಂತ್ರವಾಗಿದೆ;

(ಜಿ) ಈ ಮಕ್ಕಳು ತಮ್ಮ ಸ್ವಂತ ಪರಿಶ್ರಮದ ಮೂಲಕ ಸಮರ್ಥರಾಗುವಂತೆ ಮಾಡಲು ವೃತ್ತಿಪರ ತರಬೇತಿಯ ಅವಕಾಶವಿರತಕ್ಕದ್ದು;

(ಎಚ್) ರಕ್ಷಾಪಾಲನೆ ಗೃಹದ ಪ್ರತಿಯೊಂದು ಮಗುವಿಗೆ ಸಂಬಂಧಿಸಿದ ಪ್ರಕರಣ ಕಡತಗಳನ್ನು ನಿರ್ವಹಿಸತಕ್ಕದ್ದು.

(5) ರಕ್ಷಾಪಾಲನೆ ಸಂಸ್ಥೆಯ ಅಧೀಕ್ಷಕ / ಪರಿವೀಕ್ಷಣಾಧಿಕಾರಿಯು, ಮಗುವು ಸಮುದಾಯಕ್ಕೆ ಮರಳಿ ಹೋಗುವವರೆಗೂ ಪ್ರತಿಯೊಂದು ಮಗುವಿಗೆ ಸಂಬಂಧಿಸಿದ ಪ್ರಗತಿಯ ಬಗ್ಗೆ ವಿವರವಾದ ವರದಿಯನ್ನು ಮಕ್ಕಳ ಕಲ್ಯಾಣ ಸಮಿತಿಗೆ ನಿಯತವಾಗಿ ಸಲ್ಲಿಸತಕ್ಕದ್ದು.

**32. ವಿವಿಧ ಏಜೆನ್ಸಿಗಳ ನಡುವೆ ಸಂಪರ್ಕಗಳು.–** (1) ಮಕ್ಕಳ ಗೃಹಗಳ ಮತ್ತು ಆಶ್ರಯಧಾಮಗಳ ಅಧೀಕ್ಷಕನು,–

(i) ಗೃಹಗಳ ವಿವಿಧ ಕಾರ್ಯಕ್ರಮಗಳು ಮತ್ತು ಕಾರ್ಯ ಚಟುವಟಿಕೆಗಳಲ್ಲಿ ಸರ್ಕಾರೇತರ ಸಂಸ್ಥೆಗಳು, ಸಮಾಜ ಸೇವಕರು ಭಾಗವಹಿಸುವಂತೆ ಮಾಡಲು ಉತ್ತೇಜನ ನೀಡತಕ್ಕದ್ದು;

(ii) ವ್ಯಕ್ತಿಗಳು / ಸಂಘ ಸಂಸ್ಥೆಗಳು / ಸರ್ಕಾರೇತರ ಸಂಸ್ಥೆಗಳು ವಂತಿಗೆಯಾಗಿ ನೀಡುವ ಯಾವುವೇ ವಸ್ತುಗಳನ್ನು ಸ್ವೀಕರಿಸತಕ್ಕದ್ದು. ಪ್ರತಿಯೊಂದು ಗೃಹದಲ್ಲಿ ವಂತಿಗೆ ರಿಜಿಸ್ಟರನ್ನು ಇಡತಕ್ಕದ್ದು ಮತ್ತು ಅದರಲ್ಲಿ ಎಲ್ಲ ವಸ್ತುಗಳ ನಮೂದುಗಳನ್ನು ಮಾಡತಕ್ಕದ್ದು.

(2) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕನು, ವಿಶ್ವವಿದ್ಯಾನಿಲಯಗಳಿಗೆ, ಶಿಕ್ಷಣ ಸಂಸ್ಥೆಗಳಿಗೆ, ವ್ಯಕ್ತಿಗಳಿಗೆ, ಸಂಶೋಧನಾ ವಿದ್ವಾಂಸರಿಗೆ ಈ ಬಗ್ಗೆ ಕ್ಷೇತ್ರಕಾರ್ಯವನ್ನು ಕೈಗೊಳ್ಳಲು, ಸಂಶೋಧನಾ ಕಾರ್ಯ ನಡೆಸಲು ಮತ್ತು ಇತರ ಸಂಬಂಧಿತ ಚಟುವಟಿಕೆಗಳನ್ನು ಕೈಗೊಳ್ಳಲು ಅನುಮತಿ ನೀಡತಕ್ಕದ್ದು.

## ಅಧ್ಯಾಯ – VI
## ಸಂಕೀರ್ಣ

**33. ಪರಿವೀಕ್ಷಣ ಗೃಹ / ವಿಶೇಷ ಗೃಹ / ಮಕ್ಕಳ ಗೃಹವು ಕಾಪಾಡಿಕೊಂಡು ಬರಬೇಕಾದ ಗುಣಮಟ್ಟಗಳು.–** (1) ಮಕ್ಕಳು ವಾಸಿಸುವ ವಾಸ್ತವಿಕ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳತಕ್ಕದ್ದು. ಸಂಸ್ಥೆಯ ಗೋಡೆಗಳು ಮತ್ತು ಅದರ ಸುತ್ತಮುತ್ತಲಿನ ಪ್ರದೇಶವನ್ನು ಅಲಂಕರಿಸುವ ಮೂಲಕ ಮನೆಯ ವಾತಾವರಣವನ್ನು ಸೃಷ್ಟಿಸುವ ಪ್ರಯತ್ನಗಳನ್ನು ಮಾಡತಕ್ಕದ್ದು.

(2) ಗೃಹದ ವಿನ್ಯಾಸ ಮತ್ತು ನಿರ್ಮಾಣವು, ಅಗ್ನಿ ದುರಂತ ಮತ್ತು ಇತರ ಯಾವುವೇ ಅಪಾಯ ಸಂದರ್ಭಗಳಿಗೆ ಅತ್ಯಂತ ಕಡಿಮೆ ಅವಕಾಶವಿರುವಂತೆ ನೋಡಿಕೊಳ್ಳತಕ್ಕದ್ದು.

(3) ಸಾಲು ಹಾಸಿಗೆಗಳುಳ್ಳ ಪಡಸಾಲೆ ಮತ್ತು ತರಗತಿ ಕೊಠಡಿಗಳಲ್ಲಿ ಸಾಕಷ್ಟು ಗಾಳಿ ಬೆಳಕು ಬರುವಂತಿರತಕ್ಕದ್ದು. ವಿದ್ಯುತ್ ಉಪಕರಣಗಳನ್ನು ಅಳವಡಿಸಿರತಕ್ಕದ್ದು ಮತ್ತು ಮಕ್ಕಳು ಯಾವುದೇ ತೊಂದರೆಯಿಲ್ಲದೆ ಓದಲು ಮತ್ತು ಬರೆಯಲು ಸಾಧ್ಯವಾಗುವಂತೆ ಸಂಸ್ಥೆಯು ರಾತ್ರಿ ವೇಳೆ ಉಜ್ವಲ ಬೆಳಕಿನ ವ್ಯವಸ್ಥೆಯನ್ನು ಮಾಡತಕ್ಕದ್ದು.

(4) ಮಕ್ಕಳು ತಮ್ಮ ದೈಹಿಕ ಅಗತ್ಯತೆಗಳನ್ನು ಏಕಾಂತವಾಗಿ ಮತ್ತು ಸ್ವಚ್ಛವಾಗಿ ಮತ್ತು ಸಭ್ಯ ರೀತಿಯಲ್ಲಿ ಪೂರೈಸಿಕೊಳ್ಳಲು ಅನುಕೂಲವಾಗುವಂತೆ ಸೂಕ್ತ ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸತಕ್ಕದ್ದು.

(5) ಮಲಗುವ ಸ್ಥಳಾವಕಾಶವು ಎಲ್ಲರೂ ಗುಂಪಿನಲ್ಲಿ ಮಲಗುವ ಸ್ಥಳವಾಗಿರತಕ್ಕದ್ದು. ಪ್ರತಿಯೊಬ್ಬ ಬಾಲಕನ ರಕ್ಷಣೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಎಲ್ಲ ಮಲಗುವ ಪ್ರದೇಶಗಳಲ್ಲಿ ನಿಯತ ಮೇಲ್ವಿಚಾರಣೆ ಇರತಕ್ಕದ್ದು. ಸಿಬ್ಬಂದಿ ಶಾಖೆಯ ಒಬ್ಬ ಜವಾಬ್ದಾರಿಯುತ ಸದಸ್ಯನು, ಪ್ರತಿರಾತ್ರಿ ಆ ಕಟ್ಟಡದಲ್ಲಿ ಮಲಗತಕ್ಕದ್ದು. ಇದನ್ನು ಸಿಬ್ಬಂದಿಯವರು ಸರದಿ ಪ್ರಕಾರ ಮಾಡಬಹುದು. ಪ್ರತಿಯೊಂದು ಮಗುವಿಗೂ ಪ್ರತ್ಯೇಕ ಮತ್ತು ಸಾಕಷ್ಟು ದಪ್ಪದ ಹಾಸಿಗೆಯ ವ್ಯವಸ್ಥೆಯನ್ನು ಮಾಡತಕ್ಕದ್ದು.

(6) ಸಾಲು ಹಾಸಿಗೆಗಳುಳ್ಳ ಕೊಠಡಿಗಳು, ಶಿಶುಗಳಿಗೆ ಸರಿಯಾದ ಸೌಲಭ್ಯ ಒದಗಿಸುವ ಜೊತೆಗೆ 0–5 ವರ್ಷ ವಯಸ್ಸಿನ ಮಕ್ಕಳಿಗಾಗಿ ಪ್ರತ್ಯೇಕ ಸೌಲಭ್ಯಗಳನ್ನು ಹೊಂದಿರತಕ್ಕದ್ದು.

(7) ಸಂಸ್ಥೆಯ ಎಲ್ಲ ಭಾಗಗಳಲ್ಲಿ ಅಗ್ನಿಶಾಮಕ ಸಲಕರಣೆಗಳನ್ನು (ಮರಳು ಮತ್ತು ನೀರಿನ ಬಕೆಟುಗಳು, ಮುಂತಾದವು) ಇಟ್ಟಿರತಕ್ಕದ್ದು.

(8) ಗೃಹಗಳಲ್ಲಿ ಈ ಮುಂದಿನ ಗುಣಮಟ್ಟಗಳನ್ನು ಕಾಪಾಡಿಕೊಂಡು ಬರಬೇಕು,–

(i) ಸ್ಥಳಾವಕಾಶ

(ii) ನೀರಿನ ಸೌಕರ್ಯ

(iii) ನೈರ್ಮಲ್ಯ ಮತ್ತು ಆರೋಗ್ಯ

(iv) ಆಹಾರ ಮತ್ತು ಪೌಷ್ಠಿಕತೆ

(v) ಉಡುಪು ಮತ್ತು ಹಾಸಿಗೆ

(vi) ವೈದ್ಯಕೀಯ ರಕ್ಷಣೆ.

(9) ಸ್ಥಳಾವಕಾಶದ ಕನಿಷ್ಠ ಗುಣಮಟ್ಟಗಳು ಈ ಮುಂದಿನಂತೆ ಇರತಕ್ಕದ್ದು:–

| | | |
|---|---|---|
| (ಎ) ವಾಸಿಸುವ ಸ್ಥಳ | – | ಮಗುವೊಂದಕ್ಕೆ 40 ಚದರಡಿ |
| (ಬಿ) ತರಗತಿ ಕೊಠಡಿ | – | ಸಾಕಷ್ಟು ಬೆಳಕು, ಗಾಳಿ ಮತ್ತು ಸ್ಥಳಾವಕಾಶ |
| (ಸಿ) ಆಟದ ಮೈದಾನ | – | ಸಂಸ್ಥೆಯಲ್ಲಿರುವ ಮಕ್ಕಳ ಸಂಖ್ಯೆಗನುಗುಣವಾಗಿ ಸಾಕಷ್ಟು ವಿಶಾಲವಾದ ಆಟದ ಮೈದಾನವನ್ನು ಒದಗಿಸತಕ್ಕದ್ದು |
| (ಡಿ) ಕಾರ್ಯಾಗಾರ | – | ಕೆಲಸ ಮಾಡಲು ಅನುಕೂಲವಿರುವಷ್ಟು ಸ್ಥಳ. |

(10) ಸುರಕ್ಷಿತ ಕುಡಿಯುವ ನೀರು ಮತ್ತು ನೈರ್ಮಲ್ಯ ವ್ಯವಸ್ಥೆ ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸತಕ್ಕದ್ದು, ಎಂದರೆ:–

ಪ್ರತಿಯೊಂದು ಸಂಸ್ಥೆಯು ಈ ಮುಂದಿನವುಗಳನ್ನು ಹೊಂದಿರತಕ್ಕದ್ದು:–

(ಎ) ಸಾಕಷ್ಟು ಪ್ರಮಾಣದ ಮತ್ತು ಸಂಸ್ಕರಿಸಿದ ಕುಡಿಯುವ ನೀರು;

(ಬಿ) ಸ್ನಾನಕ್ಕೆ, ಬಟ್ಟೆ ತೊಳೆಯುವುದಕ್ಕೆ, ಆವರಣದ ನಿರ್ವಹಣೆಗೆ ಮತ್ತು ಸ್ವಚ್ಛತೆಗೆ ಸಾಕಷ್ಟು ನೀರು;

(ಸಿ) ಸೂಕ್ತ ಒಳಚರಂಡಿ ವ್ಯವಸ್ಥೆ;

(ಡಿ) ಕಸ ಕಡ್ಡಿಗಳ ವಿಲೇವಾರಿಯ ವ್ಯವಸ್ಥೆ;

(ಇ) ಏಳು ಮಕ್ಕಳಿಗೆ ಕಡೇಪಕ್ಷ ಒಂದು ಶೌಚಾಲಯದಂತೆ ಸಾಕಷ್ಟು ಸಂಖ್ಯೆಯ ಶೌಚಾಲಯಗಳು;

(ಎಫ್) ಹತ್ತು ಮಕ್ಕಳಿಗೆ ಕಡೇ ಪಕ್ಷ ಒಂದು ಸ್ನಾನದ ಕೊಠಡಿಯಂತೆ ಸಾಕಷ್ಟು ಸಂಖ್ಯೆಯ ಸ್ನಾನದ ಕೊಠಡಿಗಳು;

(ಜಿ) ತೊಳೆಯುವುದಕ್ಕಾಗಿ ಸಾಕಷ್ಟು ಸ್ಥಳಾವಕಾಶ;

(ಎಚ್) ಅಡುಗೆ ಕೋಣೆಯ ಸ್ವಚ್ಛತೆ;

(ಐ) ಹಾಸಿಗೆ ಮತ್ತು ಉಡುಪುಗಳನ್ನು ಬಿಸಿಲಿಗೆ ಹಾಕುವ ವ್ಯವಸ್ಥೆ.

(11) ಆಹಾರದಲ್ಲಿ ಸಮತೋಲನ, ಪೌಷ್ಠಿಕಾಂಶ ಮತ್ತು ವೈವಿಧ್ಯತೆ ಇರುವಂತೆ ನೋಡಿಕೊಳ್ಳಲು ಪೌಷ್ಠಿಕಾಂಶ ತಜ್ಞರು / ಆಹಾರ ತಜ್ಞರ ಶಿಫಾರಸ್ಸಿನಂತೆ ಮಕ್ಕಳಿಗೆ ಸಾಕಷ್ಟು ಮತ್ತು ಸೂಕ್ತ ಪೌಷ್ಠಿಕ ಆಹಾರವನ್ನು ಒದಗಿಸತಕ್ಕದ್ದು. ರಜಾ ದಿನಗಳಲ್ಲಿ ಅವರಿಗೆ ವಿಶೇಷ ಊಟವನ್ನು ಒದಗಿಸತಕ್ಕದ್ದು. ನಿಯಮಿಸಲಾದ ಆಹಾರದ ಪ್ರಮಾಣಕ್ಕನುಸಾರವಾಗಿ ಊಟ-ತಿಂಡಿಯ ಪಟ್ಟಿಯನ್ನು ಬದಲಾಯಿಸತಕ್ಕದ್ದು. ಕಾಯಿಲೆ ಇರುವ ಮಕ್ಕಳಿಗೆ ಅಗತ್ಯಪಡಿಸಲಾದ ವಿಶೇಷ ಆಹಾರವನ್ನು ಒದಗಿಸತಕ್ಕದ್ದು. ಎಲ್ಲ ವೇಳೆಯಲ್ಲೂ ಎಲ್ಲ ಮಕ್ಕಳಿಗೂ ಸ್ವಚ್ಛವಾದ ಕುಡಿಯುವ ನೀರು ಲಭ್ಯವಿರುವಂತೆ ಮಾಡತಕ್ಕದ್ದು.

(12) ಬಾಲಕರು ತಮ್ಮ ಸ್ವಂತ ಉಡುಪನ್ನು ಧರಿಸಲು ಹಕ್ಕುಳ್ಳವರಾಗಿರತಕ್ಕದ್ದು. ಹವಾಮಾನಕ್ಕನುಗುಣವಾದ ಮತ್ತು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಯಥೋಚಿತವಾದ ಬಗ್ಗೆ ಮತ್ತು ಅವು, ಯಾವ ವಿಧದಲ್ಲೂ ಅವರನ್ನು ಕೀಳಾಗಿಸದ ಮತ್ತು ಅಪಮಾನಕರವಲ್ಲದ ವೈಯಕ್ತಿಕ ಉಡುಪನ್ನು ಪ್ರತಿ ಮಗುವೂ ಹೊಂದಿರುವ ಬಗ್ಗೆ ಸಂಸ್ಥೆಗಳು ಖಚಿತ ಪಡಿಸಿಕೊಳ್ಳತಕ್ಕದ್ದು. ಮಕ್ಕಳನ್ನು ಒಂದು ಸಂಸ್ಥೆಯಿಂದ ಹೊರಗೆ ಕಳುಹಿಸಿದಾಗ ಅಥವಾ ಯಾವುದೇ ಉದ್ದೇಶಕ್ಕಾಗಿ ಬಿಡುವಾಗ ಅವರು ತಮ್ಮ ಉಡುಪನ್ನು ಧರಿಸಲು ಅವರಿಗೆ ಅನುಮತಿಸತಕ್ಕದ್ದು. ಸಮವಸ್ತ್ರಗಳನ್ನು ಧರಿಸುವಂಥ ಪದ್ಧತಿಯು ಮಕ್ಕಳನ್ನು ಬಾಲಾಪರಾಧಿಗಳೆಂದು ಮತ್ತು ಆ ಗುಂಪಿಗೆ ಸೇರಿದವರೆಂದು ಗುರುತಿಸಲು ಕಾರಣವಾಗುವುದರಿಂದ ಅವರು ಸಮವಸ್ತ್ರವನ್ನು ಧರಿಸತಕ್ಕದ್ದಲ್ಲ.

(13) ಪ್ರತಿಯೊಂದು ಮಗುವಿಗೂ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿದ ಪ್ರಮಾಣಕ್ಕನುಸಾರವಾಗಿ ರೂಢಿಯಲ್ಲಿರುವ ಒಳ ಉಡುಪುಗಳು, ಟವೆಲ್‌ಗಳು, ಉಣ್ಣೆಯ ಸ್ವೆಟರ್, ಸಂಸ್ಥೆಯ ಹೊರಗಿನ ಶಾಲೆಗಳಿಗೆ ಹೋಗುವ ಮಕ್ಕಳಿಗೆ ಶಾಲಾ ಸಮವಸ್ತ್ರ, ಕಾರ್‌ಪೆಟ್, ಬೆಡ್‌ಶೀಟ್‌ಗಳು, ಬ್ಲಾಂಕೆಟ್, ತಲೆದಿಂಬು, ಚಪ್ಪಲಿ ಅಥವಾ ಶೂಗಳೂ ಸೇರಿದಂತೆ ಉಡುಪು ಮತ್ತು ಹಾಸಿಗೆಗಳನ್ನು, ಅಗತ್ಯವಿರುವಷ್ಟು ಪಾತ್ರೆಗಳನ್ನು ಮತ್ತು ಟೂತ್ ಪೇಸ್ಟ್, ಟೂತ್ ಬ್ರೆಷ್, ಸೋಪು, ಎಣ್ಣೆ, ಬಾಚಣಿಗೆ, ಮುಂತಾದವುಗಳನ್ನು ಒದಗಿಸತಕ್ಕದ್ದು.

(14) ವಿಶೇಷ ಗೃಹಗಳಲ್ಲಿ / ಮಕ್ಕಳ ಗೃಹದಲ್ಲಿ ಸಂಸ್ಥೆಯಾಗಲಿ ಅಥವಾ ಸಂಸ್ಥೆಯ ಮಕ್ಕಳನ್ನು ಸಂಸ್ಥೆಯ ಹೊರಗೆ ಇರುವ ಶಾಲೆಗೆ ಕಳುಹಿಸುವ ಮೂಲಕವಾಗಿಯಾಗಲಿ ಮಕ್ಕಳಿಗೆ ಔಪಚಾರಿಕ ಶಿಕ್ಷಣವನ್ನು ನೀಡಬೇಕು. ಅಗತ್ಯವಿರುವಾಗಲೆಲ್ಲಾ ಮಕ್ಕಳ ಅಧ್ಯಯನಕ್ಕೆ ನೆರವಾಗುವಂತೆ ಮಾಡಲು ಸಂಜೆ ವೇಳೆಯಲ್ಲಿ ಬೋಧನಾ ತರಗತಿಗಳ ವ್ಯವಸ್ಥೆ ಮಾಡಬೇಕು. ಎಲ್ಲ ಮಕ್ಕಳೂ ಕಡೇ ಪಕ್ಷ ಎಸ್.ಎಸ್.ಎಲ್.ಸಿ. ಯನ್ನು ಯಶಸ್ವಿಯಾಗಿ ಪೂರ್ಣಗೊಳಿಸುವುದಕ್ಕಾಗಿ ಎಲ್ಲ ಪ್ರಯತ್ನ ಮಾಡತಕ್ಕದ್ದು.

(15) ಪ್ರತಿಯೊಂದು ಮಗುವಿಗೂ, ವೈದ್ಯಕೀಯವಾಗಿ ಸೂಚಿಸಲಾದಂತೆ, ದಂತ ಚಿಕಿತ್ಸೆ, ನೇತ್ರ ಚಿಕಿತ್ಸೆ ಮತ್ತು ಮಾನಸಿಕ ಚಿಕಿತ್ಸೆಯೂ ಸೇರಿದಂತೆ ನಿರೋಧಾತ್ಮಕ ಮತ್ತು ಪರಿಹಾರಾತ್ಮಕ ವೈದ್ಯಕೀಯ ಉಪಚಾರವನ್ನು ಸಾಕಷ್ಟು ನೀಡತಕ್ಕದ್ದು. ಮಗುವು ಬಾಲಾಪರಾಧಿಯೆಂದು ಗುರುತಿಸುವುದನ್ನು ನಿವಾರಿಸುವ ಸಲುವಾಗಿ ಮತ್ತು ಆತ್ಮ ಗೌರವವನ್ನು ಹೆಚ್ಚಿಸಲು ಮತ್ತು ಸಮುದಾಯದಲ್ಲಿ ಸುಲಭವಾಗಿ ಒಂದಾಗುವಂತೆ ಮಾಡಲು ಅಂಥ ಎಲ್ಲ ವೈದ್ಯಕೀಯ ಉಪಚಾರವನ್ನು ಸಂಸ್ಥೆಯು ಇರುವೆಡೆಯಲ್ಲಿ ಸೂಕ್ತ ಆರೋಗ್ಯ ಸೌಲಭ್ಯಗಳ ಮತ್ತು ಸಮುದಾಯ ಸೇವೆಗಳ ಮೂಲಕ ಸ್ಥಾನಬದ್ಧತೆಯಲ್ಲಿರುವ ಮಕ್ಕಳಿಗೆ ನೀಡತಕ್ಕದ್ದು.

(16) ಪ್ರತಿಯೊಂದು ಸಂಸ್ಥೆಯು,-

(ಎ) ವೈದ್ಯಕೀಯ ಚಿಕಿತ್ಸೆಗಾಗಿ ನಿಯತ ಸೌಲಭ್ಯಗಳು ಲಭ್ಯವಿರುವಂತೆ ಮಾಡಲು;

(ಬಿ) ಸೋಂಕು ಪ್ರತಿರಕ್ಷೆಯ ವ್ಯವಸ್ಥೆಗಳನ್ನು ಮಾಡಲು;

(ಸಿ) ತೀವ್ರ ಸ್ವರೂಪದ ರೋಗ ಪ್ರಕರಣಗಳನ್ನು ಹತ್ತಿರದ ಸಿವಿಲ್ ಆಸ್ಪತ್ರೆಗೆ ಕಳುಹಿಸುವ ಒಂದು ವ್ಯವಸ್ಥೆಯನ್ನು ರೂಪಿಸಲು;

(ಡಿ) ಕಾಯಿಲೆ ಇರುವ ಮಕ್ಕಳು ನಿರಂತರ ವೈದ್ಯಕೀಯ ಮೇಲ್ವಿಚಾರಣೆಯಲ್ಲಿರುವಂತೆ ಮಾಡಲು;

(ಇ) ಸಾಂಕ್ರಾಮಿಕ/ ಸೋಂಕು ರೋಗಗಳು ತಗುಲಿದಾಗ ರೋಗಿಗಳನ್ನು ಪ್ರತ್ಯೇಕಿಸಲು

- ಅಗತ್ಯ ವೈದ್ಯಕೀಯ ಸಿಬ್ಬಂದಿಯನ್ನು ಒದಗಿಸತಕ್ಕದ್ದು.

(17) ಗೃಹವು, ಒಬ್ಬ ಸಂದರ್ಶಕ ವೈದ್ಯಾಧಿಕಾರಿಯನ್ನು ಹೊಂದಿರತಕ್ಕದ್ದು ಮತ್ತು ಆತನು ಕಡೇ ಪಕ್ಷ ತಿಂಗಳಿಗೊಮ್ಮೆಯಾದರೂ ಬಂದು ಪ್ರತಿಯೊಂದು ಮಗುವನ್ನು ಪರೀಕ್ಷಿಸತಕ್ಕದ್ದು. ಆತನು, ಮಕ್ಕಳ ಆರೋಗ್ಯ ಮತ್ತು ಸ್ವಚ್ಛತೆಯ ಬಗ್ಗೆ, ಕಾಯಿಲೆಯಾದವರಿಗೆ ಚಿಕಿತ್ಸೆ ನೀಡುವ ಬಗ್ಗೆ, ಆವರಣದ ನೈರ್ಮಲ್ಯದ ಬಗ್ಗೆ ಮತ್ತು ಮಕ್ಕಳ ಆರೋಗ್ಯಕ್ಕೆ ನೇರವಾಗಿ ಅಥವಾ ಪರೋಕ್ಷವಾಗಿ ಸಂಬಂಧಪಡುವಂಥ ಎಲ್ಲ ವಿಷಯಗಳ ಬಗ್ಗೆ ನೋಡಿಕೊಳ್ಳತಕ್ಕದ್ದು. ತೀವ್ರ ಸ್ವರೂಪದ ಕಾಯಿಲೆ ಇರುವ ರೋಗಿಗಳನ್ನು ಚಿಕಿತ್ಸೆಗಾಗಿ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಕಳುಹಿಸತಕ್ಕದ್ದು.

(18) ಒಂದು ಪರಿವೀಕ್ಷಣಾಲಯ ಅಥವಾ ಮಕ್ಕಳ ಗೃಹದಲ್ಲಿ ಪ್ರವೇಶ ಪಡೆದ ಪ್ರತಿಯೊಂದು ಮಗುವಿನ ಸಂದರ್ಭದಲ್ಲಿ ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ವೈದ್ಯಾಧಿಕಾರಿಯು ವೈದ್ಯಕೀಯ ಪರೀಕ್ಷೆ ನಡೆಸತಕ್ಕದ್ದು ಮತ್ತು ಇತರ ಪ್ರಕರಣಗಳಲ್ಲಿ ಕಾರಣಗಳನ್ನು ಸೂಚಿಸಿ, ನಲವತ್ತೆಂಟು ಗಂಟೆಗಳೊಳಗೆ ಪರೀಕ್ಷಿಸತಕ್ಕದ್ದು ಮತ್ತು ಮಗುವನ್ನು ವಿಶೇಷ ಗೃಹಕ್ಕೆ ವರ್ಗಾವಣೆ ಮಾಡುವ ಸಮಯದಲ್ಲಿ ಸಹ ವರ್ಗಾವಣೆಗೆ ಮುಂಚೆ ಅಂಥದೇ ಅವಧಿಯೊಳಗಾಗಿ ಮತ್ತು ತರುವಾಯ, ವೈದ್ಯಾಧಿಕಾರಿ ಅಥವಾ ಪ್ರಭಾರಿ ಅಧಿಕಾರಿಯು ಅಗತ್ಯವೆಂದು ಪರಿಗಣಿಸಬಹುದಾದ ಇತರ ಯಾವುದೇ ಸಮಯದಲ್ಲಿ ಪರೀಕ್ಷಿಸತಕ್ಕದ್ದು. ಯಾವುದೇ ಕುಟುಂಬ / ಸಮುದಾಯದ ನಿರ್ದೇಶಿತ ಸ್ಥಳಕ್ಕೆ ಮಕ್ಕಳನ್ನು ಬಿಡುವ ಮುನ್ನ ಪಾಲನೆ ಮತ್ತು

ರಕ್ಷಣೆಯ ಅಗತ್ಯವಿರುವ ಮಕ್ಕಳಿಗೂ ಸಹ ಒಂದು ವೈದ್ಯಕೀಯ ಪರೀಕ್ಷೆಯನ್ನು ನಡೆಸತಕ್ಕದ್ದು. ವೈದ್ಯಾಧಿಕಾರಿಯು, ಮಗುವಿನ ದೇಹದ ಮೇಲೆ ಯಾವುದೇ ಗಾಯದ ಗುರುತುಗಳಿವೆಯೇ ಎಂಬುದನ್ನು ಮತ್ತು ಗಾಯದ ಸ್ವರೂಪವನ್ನು ತನ್ನ ವರದಿಯಲ್ಲಿ ವಿಶೇಷವಾಗಿ ತಿಳಿಸತಕ್ಕದ್ದು.

(19) ತಂದೆ ತಾಯಿ ಅಥವಾ ಪಾಲಕರು ಪತ್ತೆಯಾಗದಿದ್ದಾಗ ಹೊರತು ಮತ್ತು ಯಾವುದೇ ವಿಳಂಬವು ಮಗುವನ್ನು ಅನಗತ್ಯವಾಗಿ ಬಳಲಿಸುವುದೆಂದು ಅಥವಾ ಬಾಲಕನಿಗೆ ಹಾನಿ ಉಂಟುಮಾಡುವುದೆಂದು ವೈದ್ಯಾಧಿಕಾರಿಯು ಅಭಿಪ್ರಾಯಪಟ್ಟ ಹೊರತು, ಯಾವುದೇ ಮಗುವಿನ ತಂದೆ ತಾಯಿ ಅಥವಾ ಪಾಲಕರ ಸಮ್ಮತಿ ಇಲ್ಲದೆ ಯಾವುದೇ ಶಸ್ತ್ರಕ್ರಿಯೆಯನ್ನು ಮಾಡತಕ್ಕದ್ದಲ್ಲ. ಈ ಬಗ್ಗೆ ಬಾಲಾಪರಾಧಿ ನ್ಯಾಯ ಮಂಡಲಿಯ ಸೂಕ್ತ ನಿರ್ದೇಶನವನ್ನು ಪಡೆಯತಕ್ಕದ್ದು.

(20) ಸಂಸ್ಥೆಯಲ್ಲಿರುವ ಪ್ರತಿಯೊಂದು ಮಗುವಿನ ಆರೋಗ್ಯದ ವರದಿಯನ್ನು ಮಗುವಿಗೆ ಸಂಬಂಧಿಸಿದಂತೆ ಇರುವ ದಾಖಲೆಯಲ್ಲಿ ತ್ರೈಮಾಸಿಕ ವೈದ್ಯಕೀಯ ತಪಾಸಣೆಯನ್ನು ಆಧರಿಸಿ ಇಟ್ಟುಕೊಂಡು ಬರತಕ್ಕದ್ದು. ಆ ದಾಖಲೆಯು, ಅವನ ತೂಕ ಮತ್ತು ಎತ್ತರದ ದಾಖಲೆಯನ್ನು, ಯಾವುದೇ ಕಾಯಿಲೆ ಮತ್ತು ನೀಡಲಾದ ಚಿಕಿತ್ಸೆಯನ್ನು ಮತ್ತು ಇತರ ದೈಹಿಕ / ಮಾನಸಿಕ ಸಮಸ್ಯೆ ಯಾವುದಾದರೂ ಇದ್ದರೆ, ಅದನ್ನೂ ಸಹ ಒಳಗೊಂಡಿರತಕ್ಕದ್ದು.

(21) ಬಾಲಕನ/ ಮಗುವಿನ ದೈಹಿಕ ಅಥವಾ ಮಾನಸಿಕ ಆರೋಗ್ಯವು, ಅವನ ಸ್ಥಾನಬದ್ಧತೆಯನ್ನು ಮುಂದುವರಿಸುವುದರಿಂದ, ಉಪವಾಸ ಮುಷ್ಕರದಿಂದ ಅಥವಾ ಸ್ಥಾನಬದ್ಧತೆಯ ಯಾವುದೇ ಸ್ಥಿತಿಯಿಂದ ಹಾನಿಗೊಳಗಾಗಿದೆಯೆಂದು ಅಥವಾ ಹಾನಿಗೊಳಗಾಗುವುದೆಂದು ಯಾರೇ ವೈದ್ಯಾಧಿಕಾರಿಗೆ ನಂಬಲು ಕಾರಣವಿದ್ದರೆ, ಆ ಬಗ್ಗೆ ಅಧೀಕ್ಷಕನಿಗೆ ಕೂಡಲೇ ವರದಿ ಮಾಡತಕ್ಕದ್ದು.

(22) ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವ ಒಂದು ಮಗುವಿಗೆ, ಸ್ವತಂತ್ರ ವೈದ್ಯಕೀಯ ವ್ಯವಸ್ಥಾಪನೆಯ ಅಡಿಯಲ್ಲಿರುವ ಒಂದು ತಜ್ಞ ಸಂಸ್ಥೆಯಲ್ಲಿ ಚಿಕಿತ್ಸೆ ನೀಡತಕ್ಕದ್ದು.

(23) ಪರಿವೀಕ್ಷಣಾಲಯಗಳು / ವಿಶೇಷ ಗೃಹಗಳು / ಮಕ್ಕಳ ಗೃಹಗಳು, ಔಷಧ ದುರುಪಯೋಗಕ್ಕೆ ಸಂಬಂಧಿಸಿದ ವಿಶೇಷ ನಿವಾರಣೆ ಮತ್ತು ಪುನರ್ವಸತಿ ಕಾರ್ಯಕ್ರಮಗಳ ಅಗತ್ಯವಿರುವಂಥ ಮಕ್ಕಳನ್ನು ಅರ್ಹತೆಯುಳ್ಳ ನೌಕರರು ನಿರ್ವಹಿಸುವ ಅನುಮೋದಿತ ಸ್ಥಳಕ್ಕೆ ಕಳುಹಿಸತಕ್ಕದ್ದು. ಈ ಕಾರ್ಯಕ್ರಮಗಳನ್ನು ಸಂಬಂಧಪಟ್ಟ ಮಕ್ಕಳ ವಯಸ್ಸು, ಲಿಂಗ ಅಥವಾ ಇತರ ಅಗತ್ಯತೆಗಳನ್ನು ಪರಿಗಣಿಸಿ ಅಳವಡಿಸಿಕೊಳ್ಳತಕ್ಕದ್ದು.

(24) ಔಷಧಿಗಳನ್ನು, ವೈದ್ಯಕೀಯ ಕಾರಣಗಳ ಮೇಲೆ ಅಗತ್ಯ ಚಿಕಿತ್ಸೆಗಾಗಿ ಮತ್ತು ಸಾಧ್ಯವಿದ್ದಾಗ, ಸಂಬಂಧಪಟ್ಟ ಮಗುವಿನ ಸಮ್ಮತಿ ಪಡೆದ ತರುವಾಯ ಮಾತ್ರ ನೀಡತಕ್ಕದ್ದು. ವಿಶೇಷವಾಗಿ, ವಿಷಯವನ್ನು ಹೊರಗೆಡುವ ಅಥವಾ ತಪ್ಪೊಪ್ಪಿಗೆ ನೀಡುವ ದೃಷ್ಟಿಯಿಂದ ಒಂದು ಶಿಕ್ಷೆಯೆಂಬಂತೆ ಅಥವಾ ನಿಗ್ರಹಿಸುವ ಒಂದು ಸಾಧನವಾಗಿ ಔಷಧವನ್ನು ಮಗುವಿಗೆ ನೀಡತಕ್ಕದ್ದಲ್ಲ. ಯಾವುದೇ ಔಷಧಿಯನ್ನು ಪ್ರಯೋಗಾತ್ಮಕ ಬಳಕೆಗಾಗಿ ಮತ್ತು ಚಿಕಿತ್ಸೆಗಾಗಿ ಮಕ್ಕಳ ಮೇಲೆ ಪ್ರಯೋಗಿಸತಕ್ಕದ್ದಲ್ಲ. ಯಾವಾಗಲೂ ಯಾವುದೇ ಔಷಧವನ್ನು ಅರ್ಹ ವೈದ್ಯಕೀಯ ಸಿಬ್ಬಂದಿಯು ನೀಡತಕ್ಕದ್ದು.

(25) ಮಗುವಿನ ತಂದೆ ತಾಯಿ ಅಥವಾ ಪಾಲಕರ ಕೋರಿಕೆಯ ಮೇರೆಗೆ ಮತ್ತು ಮಗುವಿನ ಆರೋಗ್ಯದಲ್ಲಿ ಯಾವುದೇ ಪ್ರಮುಖ ಬದಲಾವಣೆ ಉಂಟಾದ ಸಂದರ್ಭದಲ್ಲಿ ಮಗುವಿನ ಆರೋಗ್ಯದ ಸ್ಥಿತಿಯ ಬಗ್ಗೆ ಅರಿಯಲು ಮಗುವಿನ ತಂದೆ ತಾಯಿ ಅಥವಾ ಪಾಲಕರಿಗೆ ಹಕ್ಕು ಇರತಕ್ಕದ್ದು.

(26) ಮಗು ಮೃತಪಟ್ಟ ಸಂದರ್ಭದಲ್ಲಿ, ಹೊರಗಿನ ಒಂದು ವೈದ್ಯಕೀಯ ಸಂಸ್ಥೆಗೆ ಚಿಕಿತ್ಸೆಗಾಗಿ ಮಗುವನ್ನು ವರ್ಗಾಯಿಸಬೇಕಾದ ಸಂದರ್ಭದಲ್ಲಿ ಅಥವಾ ನಲವತ್ತೆಂಟು ಘಂಟೆಗಳಿಗೂ ಹೆಚ್ಚಿನ ಅವಧಿಯವರೆಗೆ ಗೃಹದೊಳಗೆ ವೈದ್ಯಕೀಯ ಪಾಲನೆಯ ಅಗತ್ಯವಿರುವ ಸಂದರ್ಭದಲ್ಲಿ, ಗೃಹದ ಪರಿವೀಕ್ಷಣಾಧಿಕಾರಿಯು, ಆ ಬಗ್ಗೆ ಕೂಡಲೇ ಸಂಬಂಧಪಟ್ಟ ಮಗುವಿನ ತಂದೆ ತಾಯಿ ಅಥವಾ ಪಾಲಕರಿಗೆ ತಿಳಿಸತಕ್ಕದ್ದು.

(27) ಈ ಮುಂದಿನ ಸೌಲಭ್ಯಗಳನ್ನು ಸಹ ಸಾಧ್ಯವಾದಷ್ಟು ಮಟ್ಟಿಗೆ ಒದಗಿಸತಕ್ಕದ್ದು,-

(i) ಪ್ರತಿಯೊಂದು ಗೃಹವು, ಒಳಾಂಗಣ ಮತ್ತು ಹೊರಾಂಗಣ ಆಟಗಳು, ಕ್ರೀಡೆಗಳು, ಸಂಗೀತ, ದೂರದರ್ಶನ, ಪ್ರವಾಸಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಮುಂತಾದವುಗಳನ್ನೊಳಗೊಂಡ ಮನರಂಜನಾ ಸೌಲಭ್ಯಗಳನ್ನು ಹೊಂದಿರತಕ್ಕದ್ದು;

(ii) ಪ್ರತಿಯೊಂದು ಗೃಹದಲ್ಲಿ ಉಪಯುಕ್ತ ವೃತ್ತಿಪರ ತರಬೇತಿಯ ಸೌಲಭ್ಯವಿರತಕ್ಕದ್ದು. ಪ್ರತಿಯೊಂದು ಗೃಹದಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆ (ಐಟಿಐ), ಸರ್ಕಾರೀ ಅಥವಾ ಖಾಸಗೀ ಏಜೆನ್ಸಿಗಳು ಅಥವಾ ಸ್ಥಳ ನಿಯೋಜನಾ ಏಜೆನ್ಸಿಗಳೊಂದಿಗೆ ಅಂತರ್ ಜಾಲ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸತಕ್ಕದ್ದು;

(iii) ಪ್ರತಿಯೊಂದು ಗೃಹವು ನುರಿತ ಸಲಹೆಗಾರರ ಸೇವೆಗಳನ್ನು ಹೊಂದಿರತಕ್ಕದ್ದು.

**34. ಪರಿವೀಕ್ಷಣಾಲಯಗಳ ಅಥವಾ ವಿಶೇಷ ಗೃಹಗಳ ಅಥವಾ ಮಕ್ಕಳ ಗೃಹಗಳ ಪ್ರಮಾಣೀಕರಣ.-** (1) ಪರಿವೀಕ್ಷಣಾಲಯಗಳಿಗೆ ಅಥವಾ ವಿಶೇಷ ಗೃಹಗಳಿಗೆ ಅಥವಾ ಮಕ್ಕಳ ಗೃಹಗಳಿಗೆ ಯಾವ ಸಂದರ್ಭಗಳಲ್ಲಿ ಮತ್ತು ಯಾವ ವಿಧಾನದಲ್ಲಿ ಪ್ರಮಾಣಪತ್ರವನ್ನು ನೀಡಬಹುದು ಎಂಬುದು ನಮೂನೆ VIII ರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

(2) ಯಾವುದೇ ಸಂಸ್ಥೆಯ ಆಡಳಿತ ವರ್ಗವು, ತನ್ನ ಸಂಸ್ಥೆಯನ್ನು ಅಧಿನಿಯಮದ ಅಡಿಯಲ್ಲಿ ಪ್ರಮಾಣೀಕರಿಸಬೇಕೆಂದು ಇಚ್ಛಿಸಿದರೆ, ಅದು, ತನ್ನ ನಿಯಮಗಳು, ಉಪವಿಧಿಗಳು, ಅಂತರ್ ನಿಯಮಾವಳಿ, ಸಂಘ ಅಥವಾ ಸಂಸ್ಥೆಯನ್ನು ನಡೆಸುತ್ತಿರುವ ಸಂಘದ ಅಥವಾ ಸಂಸ್ಥೆಯ ಸದಸ್ಯರ, ಪದಾಧಿಕಾರಿಗಳ ಪಟ್ಟಿ ಮತ್ತು ಸಂಸ್ಥೆಯ ಹಾಗೂ ಸಂಸ್ಥೆಯನ್ನು ನಡೆಸುತ್ತಿರುವ ಸಂಘ- ಇವೆಲ್ಲವುಗಳ ಸ್ಥಾನಮಾನ ಮತ್ತು ಸಾಮಾಜಿಕ ಅಥವಾ ಸಾರ್ವಜನಿಕ ಸೇವೆಯ ಹಿಂದಿನ ದಾಖಲೆಯನ್ನು ತೋರಿಸುವ ಒಂದು ವಿವರಣಾ ಪತ್ರದ ಒಂದೊಂದು ಪ್ರತಿಯೊಂದಿಗೆ ನಿರ್ದೇಶಕರ ವಿಳಾಸಕ್ಕೆ ಒಂದು ಲಿಖಿತ ಅರ್ಜಿಯನ್ನು ಸಲ್ಲಿಸತಕ್ಕದ್ದು.

(3) ನಿರ್ದೇಶಕರು, ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಊಟ, ವಸತಿ, ಮಕ್ಕಳ ಸಾಮಾನ್ಯ ಆರೋಗ್ಯ, ಶಿಕ್ಷಣ ಸೌಲಭ್ಯಗಳು, ಲಭ್ಯವಿರುವ ವೃತ್ತಿಪರ ತರಬೇತಿ ಮತ್ತು ಚಿಕಿತ್ಸಾ ಸೇವೆಗಳು ಮತ್ತು ಆದಾಯದ ಮೂಲ -ಇವುಗಳಿಗೆ

ಸಂಬಂಧಿಸಿದಂತೆ ಸಂಸ್ಥೆಯಲ್ಲಿ ಮಾಡಲಾದ ವ್ಯವಸ್ಥೆಗಳನ್ನು ಕುರಿತು ಜಿಲ್ಲೆಯ ಉಪನಿರ್ದೇಶಕರು ಸಂಸ್ಥೆಯ ತಪಾಸಣೆ ಕೈಗೊಳ್ಳುವಂತೆ ಮಾಡತಕ್ಕದ್ದು ಮತ್ತು ಸಂದರ್ಭಾನುಸಾರ 8, 9, 34, 37 ಮತ್ತು 44ನೇ ಪ್ರಕರಣಗಳ ಅಡಿಯಲ್ಲಿ ಪ್ರಮಾಣಪತ್ರ ಅಥವಾ ಮಾನ್ಯತೆ ನೀಡಲು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು.

(4) ರಾಜ್ಯ ಸರ್ಕಾರವು, ನಿರ್ದೇಶಕರ ವರದಿಯನ್ನು ಸ್ವೀಕರಿಸಿದ ಮೇಲೆ, ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಸಂದರ್ಭಾನುಸಾರ 8, 9, 34, 37 ಮತ್ತು 44ನೇ ಪ್ರಕರಣಗಳ ಉದ್ದೇಶಗಳಿಗಾಗಿ ಅಂಥ ಸಂಸ್ಥೆಗೆ ಮಾನ್ಯತೆ ನೀಡಬಹುದು:-

(ಎ) ತನ್ನ ಪ್ರಭಾರದಲ್ಲಿ ಇಡಲಾದ ಬಾಲಕರ ಅಥವಾ ಮಕ್ಕಳ ಸರ್ವಾಂಗೀಣ ಬೆಳವಣಿಗೆಯನ್ನು ಮತ್ತು ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಕಾಲಕಾಲಕ್ಕೆ ರೂಪಿಸಲಾದ ಸೇವೆಗಳ ಗುಣಮಟ್ಟಗಳನ್ನು ಪಾಲಿಸತಕ್ಕದ್ದು.

(ಬಿ) ಈ ನಿಯಮಗಳನ್ನು ಮತ್ತು ನಿರ್ದೇಶಕರು ಅಥವಾ ಸಕ್ಷಮ ಪ್ರಾಧಿಕಾರಿಯು ನೀಡುವ ಯಾವುವೇ ಸೂಚನೆಗಳನ್ನು ಪಾಲಿಸತಕ್ಕದ್ದು ಮತ್ತು ಇವುಗಳನ್ನು ಸಂಸ್ಥೆಯ ಸಿಬ್ಬಂದಿಯು ಅನುಸರಿಸುವಂತೆ ನೋಡಿಕೊಳ್ಳತಕ್ಕದ್ದು.

(ಸಿ) ಕಾಲಕಾಲಕ್ಕೆ ನಿರ್ದೇಶಕರು ಅಥವಾ ಸಕ್ಷಮ ಪ್ರಾಧಿಕಾರವು ಅಗತ್ಯಪಡಿಸಬಹುದಾದಂಥ ಸಿಬ್ಬಂದಿಯನ್ನು ಒದಗಿಸತಕ್ಕದ್ದು.

(ಡಿ) ಅಗತ್ಯಪಡಿಸಿದಾಗಲೆಲ್ಲಾ ಜಮಾ ಖರ್ಚು ಪಟ್ಟಿ ಮತ್ತು ಲೆಕ್ಕ ಪರಿಶೋಧನಾ ವರದಿಯೂ ಸೇರಿದಂತೆ ಆರ್ಥಿಕ ಸ್ಥಿತಿಗತಿಯ ಬಗ್ಗೆ ಒಂದು ವಿವರಣ ಪಟ್ಟಿಯನ್ನು ನಿರ್ದೇಶಕರಿಗೆ ಒದಗಿಸತಕ್ಕದ್ದು.

(ಇ) ಸಂಸ್ಥೆಯನ್ನು ಪ್ರಮಾಣೀಕರಿಸಬೇಕಾದ ಅಥವಾ ಮಾನ್ಯತೆ ನೀಡಬೇಕಾದ ಕಾಲಕ್ಕೆ ಸಂಸ್ಥೆಯಲ್ಲಿ ಇರುವ ಬಾಲಕರ ಅಥವಾ ಮಕ್ಕಳ ವಯಸ್ಸು ಮತ್ತು ಲಿಂಗ ಕುರಿತಾದ ಒಂದು ವರದಿಯನ್ನು ನೀಡತಕ್ಕದ್ದು.

(5) ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ಪ್ರಮಾಣೀಕರಿಸಿದ ಅಥವಾ ಮಾನ್ಯತೆ ಪಡೆದ ಸಂಘದ ಷರತ್ತುಗಳು, ನಿಯಮಗಳು ಅಥವಾ ಆಡಳಿತದ ಬಗ್ಗೆ ಅತೃಪ್ತಿ ಹೊಂದಿದ್ದರೆ, ಯಾವುದೇ ಕಾಲದಲ್ಲಿ ಸಂಸ್ಥೆಯ ವ್ಯವಸ್ಥಾಪಕನಿಗೆ ಎರಡು ತಿಂಗಳ ನೋಟೀಸನ್ನು ಜಾರಿಮಾಡಿ, ಸಂಘದ ಪ್ರಮಾಣಪತ್ರ ಅಥವಾ ಸಂದರ್ಭಾನುಸಾರ ಮಾನ್ಯತೆಯನ್ನು ನೋಟೀಸಿನಲ್ಲಿ ನಿರ್ದಿಷ್ಟಪಡಿಸಲಾದ ದಿನಾಂಕದಿಂದ ಹಿಂದಕ್ಕೆ ಪಡೆಯಲಾಗಿದೆಯೆಂದು ಮತ್ತು ಸದರಿ ದಿನಾಂಕದಿಂದ ಸಂದರ್ಭಾನುಸಾರ 8, 9, 34, 37 ಅಥವಾ 44ನೇ ಪ್ರಕರಣಗಳ ಅಡಿಯಲ್ಲಿ ಸಂಘದ ಪ್ರಮಾಣೀಕರಣವು ಅಥವಾ ಮಾನ್ಯತೆಯು ನಿಂತುಹೋದ ಒಂದು ಸಂಸ್ಥೆಯಾಗಿರತಕ್ಕದ್ದೆಂದು ಘೋಷಿಸಬಹುದು. ಆದರೆ, ಸಂಬಂಧಪಟ್ಟ ಸಂಸ್ಥೆಗೆ, ಆ ಸಂಸ್ಥೆಯ ಪ್ರಮಾಣೀಕರಣವನ್ನು ಅಥವಾ ಮಾನ್ಯತೆಯನ್ನು ಹಿಂದಕ್ಕೆ ಪಡೆದ ಬಗೆಗಿನ ಕಾರಣಗಳ ವಿರುದ್ಧ ಮೂವತ್ತು ದಿವಸಗಳ ಒಳಗಾಗಿ ಲಿಖಿತದಲ್ಲಿ ಮನವಿ ಸಲ್ಲಿಸಲು ಒಂದು ಸೂಕ್ತ ಅವಕಾಶವನ್ನು ಕೊಡತಕ್ಕದ್ದು.

(6) ಒಂದು ಸಂಸ್ಥೆಯು 8, 9, 34, 37 ಅಥವಾ 44ನೇ ಪ್ರಕರಣಗಳ ಅಡಿಯಲ್ಲಿ ಪ್ರಮಾಣೀಕೃತ ಅಥವಾ ಮಾನ್ಯತೆ ಪಡೆದ ಸಂಸ್ಥೆಯಾಗಿರುವುದು ನಿಂತುಹೋದ, ಅದರಲ್ಲಿರುವ ಬಾಲಕರು ಅಥವಾ ಮಕ್ಕಳನ್ನು ರಾಜ್ಯ ಸರ್ಕಾರದಿಂದ ಈ ಸಂಬಂಧವಾಗಿ ಪ್ರಾಧಿಕೃತನಾದ ಅಧಿಕಾರಿಯು ನೀಡಿದ ಆದೇಶದ ಅಡಿಯಲ್ಲಿ,-

(i) ಪೂರ್ಣವಾಗಿಯಾಗಲಿ ಅಥವಾ ಅಧಿಕಾರಿಯು ವಿಧಿಸಬಹುದಾದ ಷರತ್ತುಗಳ ಮೇಲಾಗಲಿ ಬಿಡುಗಡೆಗೊಳಿಸತಕ್ಕದ್ದು; ಅಥವಾ

(ii) 8, 9, 34, 37 ಅಥವಾ 44ನೇ ಪ್ರಕರಣಗಳ ಅಡಿಯಲ್ಲಿ ಪ್ರಮಾಣೀಕರಿಸಲಾದ ಅಥವಾ ಮಾನ್ಯತೆ ಪಡೆದ ಇತರ ಸಂಸ್ಥೆಗೆ ಅಧಿನಿಯಮ ಅಥವಾ ನಿಯಮಗಳಲ್ಲಿ ಅವರ ವರ್ಗಾವಣೆ ಅಥವಾ ಬಿಡುಗಡೆಗೆ ಸಂಬಂಧಿಸಿದ ಉಪಬಂಧಗಳಿಗನುಸಾರವಾಗಿ ವರ್ಗಾಯಿಸತಕ್ಕದ್ದು.

(7) ಅಂಥ ಬಿಡುಗಡೆ ಅಥವಾ ವರ್ಗಾವಣೆಯ ಮಾಹಿತಿಯನ್ನು ಮಂಡಲಿಗೆ ಅಥವಾ ಸಂದರ್ಭಾನುಸಾರ ಸಮಿತಿಗೆ ತಿಳಿಸತಕ್ಕದ್ದು.

(8) ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ರಾಜ್ಯವು ನಡೆಸುವ ಯಾವುದೇ ಸಂಸ್ಥೆಯ ವ್ಯವಸ್ಥಾಪನೆಯನ್ನು, ಅಂಥ ಸಂಸ್ಥೆಯನ್ನು ನಡೆಸಲು ಸಮರ್ಥವಾದ ಒಂದು ಹೆಸರಾಂತ ಸ್ವಯಂಸೇವಾ ಸಂಸ್ಥೆಗೆ ವರ್ಗಾಯಿಸಬಹುದು ಮತ್ತು ಸದರಿ ಸ್ವಯಂ ಸೇವಾ ಸಂಸ್ಥೆಯು ಅವಶ್ಯಕತೆ ಇರುವ ಜವಾಬ್ದಾರಿಗಳನ್ನು ವಹಿಸಲು ಒಂದು ಸೂಕ್ತ ಸಂಸ್ಥೆಯೆಂದು ಪ್ರಮಾಣೀಕರಿಸಬಹುದು.

**35. ಪ್ರಮಾಣೀಕರಿಸಲಾದ ಅಥವಾ ಮಾನ್ಯತೆ ಪಡೆದ ಸಂಸ್ಥೆಗೆ ಸಹಾಯಾನುದಾನ.-** 8, 9, 34, 37 ಅಥವಾ 44ನೇ ಪ್ರಕರಣಗಳ ಅಡಿಯಲ್ಲಿ ಪ್ರಮಾಣೀಕರಿಸಲಾದ ಅಥವಾ ಮಾನ್ಯತೆ ಪಡೆದ ಒಂದು ಸಂಸ್ಥೆಯು, ಪ್ರಮಾಣೀಕರಣ ಅಥವಾ ಮಾನ್ಯತೆಯು ಜಾರಿಯಲ್ಲಿರುವ ಅವಧಿಯಲ್ಲಿ, ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅದು ಸ್ವೀಕರಿಸುವ ಬಾಲಕನ / ಮಗುವಿನ ನಿರ್ವಹಣೆಗಾಗಿ ಮತ್ತು ಅವರ ಶಿಕ್ಷಣ, ಚಿಕಿತ್ಸೆ, ವೃತ್ತಿಪರ ತರಬೇತಿ, ಅಭಿವೃದ್ಧಿ ಮತ್ತು ಪುನರ್ವಸತಿಗಾಗಿ ತಗಲುವ ಖರ್ಚುಗಳಿಗಾಗಿ ರಾಜ್ಯ ಸರ್ಕಾರದ ಸಹಾಯಾನುದಾನ ಪಡೆಯಲು ಅರ್ಜಿ ಸಲ್ಲಿಸಬಹುದು. ಹಿಂದಿನ ವರ್ಷದ ಬಳಿಕೆ ಪ್ರಮಾಣಪತ್ರವನ್ನು ಪಡೆದ ತರುವಾಯ ಮಾತ್ರವೇ ಆಯಾ ವರ್ಷದ ಸಹಾಯಾನುದಾನವನ್ನು ಬಿಡುಗಡೆ ಮಾಡತಕ್ಕದ್ದು.

**36. ಸೂಕ್ತ ವ್ಯಕ್ತಿ ಅಥವಾ ಸೂಕ್ತ ಸಂಸ್ಥೆಯ ಮಾನ್ಯತೆ.-** (1) ಪಾಲನೆ, ರಕ್ಷಣೆ ಅಥವಾ ಚಿಕಿತ್ಸೆಯ ಅಗತ್ಯವಿರುವ ಬಾಲಕನನ್ನು / ಮಗುವನ್ನು ಅಗತ್ಯವೆನಿಸಬಹುದಾದಷ್ಟು ದೀರ್ಘ ಅವಧಿಯವರೆಗೆ ತಾತ್ಕಾಲಿಕವಾಗಿ ಸ್ವೀಕರಿಸಲು ಸಿದ್ಧವಿರುವ ಯಾರೇ ವ್ಯಕ್ತಿ ಅಥವಾ ಸೂಕ್ತ ಸ್ಥಳ ಅಥವಾ ಸಂಸ್ಥೆ, ಅದರ ಅನುಭೋಗದಾರ ಅಥವಾ ವ್ಯವಸ್ಥಾಪಕನನ್ನು, ಸಕ್ಷಮ ಪ್ರಾಧಿಕಾರವು, ಒಬ್ಬ ಸೂಕ್ತ ವ್ಯಕ್ತಿ ಅಥವಾ ಒಂದು ಸೂಕ್ತ ಸಂಸ್ಥೆ ಎಂದು ಮಾನ್ಯತೆ ನೀಡಬಹುದು.

(2) ತನ್ನ ರಕ್ಷಣೆಯಲ್ಲಿ ಇಡಲಾದ ಯಾರೇ ಬಾಲಕನನ್ನು / ಮಗುವನ್ನು, ಅವನು ಹುಟ್ಟಿದ ಧರ್ಮಕ್ಕನುಸಾರವಾಗಿ ಬೆಳೆಸುವ ಅಥವಾ ಬೆಳೆಸಲು ಬೇಕಾದ ಸೌಲಭ್ಯ ನೀಡುವ ಜವಾಬ್ದಾರಿ ವಹಿಸಿಕೊಂಡು, ಬಾಲಕರನ್ನು / ಮಕ್ಕಳನ್ನು ಸ್ವೀಕರಿಸಲು

ಅಥವಾ ರಕ್ಷಿಸಲು ಸ್ಥಾಪಿತವಾದ ಅಥವಾ ಆ ಉದ್ದೇಶವನ್ನು ಹೊಂದಿರುವ ಯಾವುದೇ ಸಂಸ್ಥೆ ಅಥವಾ ವ್ಯಕ್ತಿಗಳ ನಿಕಾಯವನ್ನು, ಅದು ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ, ಅದನ್ನು ಯೋಗ್ಯ ಸಂಸ್ಥೆಯ ಅರ್ಥವ್ಯಾಪ್ತಿಯಲ್ಲಿ ಸೇರಿಸಬಹುದು.

(3) ಸಕ್ಷಮ ಪ್ರಾಧಿಕಾರವು ಅನುಮೋದಿಸಿದ ಸೂಕ್ತ ವ್ಯಕ್ತಿಗಳ ಮತ್ತು ಸೂಕ್ತ ಸಂಸ್ಥೆಗಳ ಹೆಸರುಗಳು ಮತ್ತು ವಿಳಾಸಗಳ ಒಂದು ಪಟ್ಟಿಯನ್ನು ಮಂಡಲಿ / ಸಮಿತಿಯ ಕಚೇರಿಯಲ್ಲಿ ಇಡತಕ್ಕದ್ದು ಮತ್ತು ಅಗತ್ಯವಿದ್ದಾಗ ಅದನ್ನು ಉಪಯೋಗಿಸತಕ್ಕದ್ದು. ತಜ್ಞರ ಸಹಕಾರ ಮತ್ತು ಸೇವೆಗಳ ಅಗತ್ಯವಿರುವ ಮಕ್ಕಳ ಅವಶ್ಯಕತೆಗಳನ್ನು ಪೂರೈಸುವ ಸಂಸ್ಥೆಗಳನ್ನು ಗುರುತಿಸುವ ಮತ್ತು ಅವುಗಳಿಗೆ ಮಾನ್ಯತೆ ನೀಡುವ ಪ್ರಯತ್ನಗಳನ್ನು ಮಾಡತಕ್ಕದ್ದು.

(4) ಯಾರೇ ವ್ಯಕ್ತಿ ಅಥವಾ ಸಂಸ್ಥೆಯನ್ನು, ಸೂಕ್ತ ವ್ಯಕ್ತಿ / ಸೂಕ್ತ ಸಂಸ್ಥೆ ಎಂದು ಘೋಷಿಸುವುದಕ್ಕೆ ಮುಂಚೆ, ಸಕ್ಷಮ ಪ್ರಾಧಿಕಾರವು, ಸೂಕ್ತ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ತನಗೆ ಸಮಾಧಾನವಾದ ತರುವಾಯ ಮಾತ್ರವೇ ಮಾನ್ಯತೆ ನೀಡತಕ್ಕದ್ದು.

(5) ಮಗುವಿನ ಅವಶ್ಯಕತೆಗಳನ್ನು ಮತ್ತು ಮಗುವಿನ ಅವಶ್ಯಕತೆಗಳನ್ನು ಪೂರೈಸುವಲ್ಲಿ ಮಾನ್ಯತೆ ಪಡೆದ ಸೂಕ್ತ ಉದ್ದೇಶಗಳನ್ನು ಅಂಗೀಕೃತ ಸ ಂಸ್ಥೆಯ/ ವ್ಯಕ್ತಿಯ ನಿರೂಪಿತ ಸಕ್ಷಮತೆಯನ್ನು ಅಥವಾ ದಕ್ಷತೆಯನ್ನು ಆಧರಿಸಿ, ಮಕ್ಕಳನ್ನು ಈ ಸಂಸ್ಥೆಗಳಿಗೆ, ವ್ಯಕ್ತಿಗಳ ಬಳಿಗೆ ಕಳುಹಿಸತಕ್ಕದ್ದು. ಹೀಗೆ ಸ್ಥಳ ನಿರ್ದೇಶನ ಮಾಡುವ ಮುನ್ನ, ಸಕ್ಷಮ ಪ್ರಾಧಿಕಾರವು, ಸಂಸ್ಥೆಯ ಮುಖ್ಯಸ್ಥರೊಂದಿಗೆ ಸಮಾಲೋಚಿಸತಕ್ಕದ್ದು ಮತ್ತು ಮಗುವಿನ ಸಮ್ಮತಿಯನ್ನು ಪಡೆದ ತರುವಾಯ ಸದರಿ ಸೌಲಭ್ಯವಿರುವ ಸಂಸ್ಥೆಗೆ ಅದನ್ನು ವರ್ಗಾಯಿಸತಕ್ಕದ್ದು.

**37. ಸಾಂಸ್ಥಿಕ ವ್ಯವಸ್ಥಾಪನೆ (ಪರಿವೀಕ್ಷಣಾ ಗೃಹಗಳು, ವಿಶೇಷ ಗೃಹಗಳು, ಆಶ್ರಯಧಾಮಗಳು ಮತ್ತು ಮಕ್ಕಳ ಗೃಹಗಳು).–** (1) (ಎ) ತರಬೇತು ಪಡೆದ ಸಿಬ್ಬಂದಿಯು ಮಗುವನ್ನು ಕಾಳಜಿಪೂರ್ವಕವಾಗಿ ಸ್ವೀಕರಿಸತಕ್ಕದ್ದು;

(ಬಿ) ಮಗುವಿಗೆ ತನ್ನ ಸ್ವಂತದ ವಸ್ತುಗಳು ಮತ್ತು ಇತರ ಬೆಲೆಬಾಳುವ ವಸ್ತುಗಳನ್ನು ಇರಿಸಲು ಒಂದು ಲಾಕರನ್ನು ನೀಡತಕ್ಕದ್ದು;

(ಸಿ) ತುರ್ತು ವೈದ್ಯಕೀಯ ಚಿಕಿತ್ಸೆ ಮತ್ತು ತಂದೆ ತಾಯಿಯನ್ನು ಸಂಪರ್ಕಿಸುವ ಅಗತ್ಯವಿರುವ, ಮುಂತಾದ ಮಗುವಿನ ತಕ್ಷಣದ ಅವಶ್ಯಕತೆಗಳ ಮತ್ತು ಮನಸ್ಸಿನ ಅಳುಕನ್ನು ತ್ವರಿತವಾಗಿ, ಸಮರ್ಥವಾಗಿ ಮತ್ತು ಮಗುವಿನ ಮೇಲೆ ಪ್ರಭಾವ ಬೀರುವ ರೀತಿಯಲ್ಲಿ ಪೂರೈಸತಕ್ಕದ್ದು ಮತ್ತು ನಿವಾರಿಸತಕ್ಕದ್ದು;

(ಡಿ) ಗೃಹದ ಪ್ರಭಾರಿ ಅಧಿಕಾರಿಯು, ಬಾಲಕನನ್ನು ಸ್ವೀಕರಿಸುವುದಕ್ಕೆ ಮುಂಚೆ, ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಯ ಆದೇಶಗಳನ್ನು ಪರಿಶೀಲಿಸತಕ್ಕದ್ದು ;

(ಇ) ಮಗುವನ್ನು ಸ್ವೀಕರಿಸುವ ಸಂದರ್ಭದಲ್ಲಿ, ಪರಿವೀಕ್ಷಣ ಗೃಹ / ವಿಶೇಷ ಗೃಹ / ಮಕ್ಕಳ ಗೃಹಗಳಿಗೆ ಸಂಬಂಧಿಸಿದ ನಿಯಮಗಳ ಒಂದು ಪ್ರತಿಯನ್ನು ಮತ್ತು ದೂರುಗಳನ್ನು ಸ್ವೀಕರಿಸಲು ಸಕ್ಷಮವಾದ ಮಕ್ಕಳ ಸಹಾಯವಾಣಿ, ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲಕ ನ್ಯಾಯ ಮಂಡಲಿಯಂಥ ಪ್ರಾಧಿಕಾರಗಳ ವಿಳಾಸಗಳೊಂದಿಗೆ ಮಕ್ಕಳ ಹಕ್ಕುಗಳು ಮತ್ತು ಹೊಣೆಗಾರಿಕೆಗೆ ಒಂದು ಲಿಖಿತ ವಿವರಣೆಯನ್ನು ಅವರಿಗೆ ತಿಳಿದಿರುವ ಭಾಷೆಯಲ್ಲಿ ಮಗುವಿಗೆ ನೀಡತಕ್ಕದ್ದು. ಅನಕ್ಷರಸ್ಥ ಅಥವಾ ಭಾಷೆಯನ್ನು ಅರ್ಥ ಮಾಡಿಕೊಳ್ಳಲಾಗದ ಮಕ್ಕಳಿಗಾಗಿ, ವಿಷಯವನ್ನು ಸಂಪೂರ್ಣವಾಗಿ ಅರ್ಥವಾಗುವ ರೀತಿಯಲ್ಲಿ ತಿಳಿಸತಕ್ಕದ್ದು.

**ಪ್ರವೇಶದ ಕಾರ್ಯವಿಧಾನ**

(2) (ಎ) ಸಂಸ್ಥೆಯ ಅಧೀಕ್ಷಕನು ದಾಖಲಾತಿ ಪುಸ್ತಕದಲ್ಲಿ ಮಗುವಿನ ಹೆಸರನ್ನು ನಮೂದಿಸತಕ್ಕದ್ದು ಮತ್ತು ಸೂಕ್ತ ಸ್ಥಳಾವಕಾಶ ಸೌಲಭ್ಯವನ್ನು ಒದಗಿಸತಕ್ಕದ್ದು;

(ಬಿ) ಮಗುವಿಗೆ ಕೂಡಲೇ ಸ್ನಾನ, ಆಹಾರ, ಉಡುಪು, ಇತ್ಯಾದಿಗಳನ್ನು ನೀಡತಕ್ಕದ್ದು ಮತ್ತು ವೈದ್ಯಕೀಯ ಪರೀಕ್ಷೆಯನ್ನು ಮಾಡಿಸತಕ್ಕದ್ದು;

(ಸಿ) ಬಾಲಕನ / ಮಗುವಿನ ಭಾವಚಿತ್ರವನ್ನು ತೆಗೆಸತಕ್ಕದ್ದು ಮತ್ತು ಭಾವಚಿತ್ರದ ಮೂರು ಪ್ರತಿಗಳನ್ನು ಪಡೆಯತಕ್ಕದ್ದು;

(ಡಿ) ಮಹಿಳಾ ಸಿಬ್ಬಂದಿಯು, ಹೆಣ್ಣು ಮಗುವನ್ನು ಸಭ್ಯತೆಗೆ ಸೂಕ್ತ ಗಮನ ನೀಡಿ ಶೋಧಿಸತಕ್ಕದ್ದು;

(ಇ) ಅಧೀಕ್ಷಕನು ಪ್ರತಿಯೊಂದು ಮಗುವಿನ ಹಣ, ಬೆಲೆ ಬಾಳುವ ಸಾಮಾನುಗಳು ಮತ್ತು ವೈಯಕ್ತಿಕ ವಸ್ತುಗಳಿಗಾಗಿ ಒಂದು ವೈಯಕ್ತಿಕ ರಿಜಿಸ್ಟರ್ ಇಟ್ಟುಕೊಂಡು ಬರತಕ್ಕದ್ದು. ಪ್ರತಿಯೊಂದು ಮಗುವಿಗೆ ಸಂಬಂಧಿಸಿದ ನಮೂದುಗಳನ್ನು ಒಬ್ಬ ಸಾಕ್ಷಿದಾರನ ಸಮ್ಮುಖದಲ್ಲಿ ಮಗುವಿನ ಮುಂದೆ ಓದಿ ಹೇಳತಕ್ಕದ್ದು ಮತ್ತು ಅಂಥ ನಮೂದುಗಳ ಯಥಾರ್ಥತೆಯ ಸಂಕೇತವಾಗಿ ಅವನ ಸಹಿಯನ್ನು ಪಡೆದುಕೊಳ್ಳತಕ್ಕದ್ದು. ಅಂಥ ಎಲ್ಲ ನಮೂದುಗಳಿಗೆ ಅಧೀಕ್ಷಕನು ಮೇಲುರುಜು ಮಾಡತಕ್ಕದ್ದು;

(ಎಫ್) ಹಣ, ಬೆಲೆಬಾಳುವ ಸಾಮಾನುಗಳು ಮತ್ತು ಇತರ ವಸ್ತುಗಳನ್ನು ಅಧೀಕ್ಷಕನ ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟಿರತಕ್ಕದ್ದು;

(ಜಿ) ಅಂಥ ಮಗುವನ್ನು ಒಂದು ಸಂಸ್ಥೆಯಿಂದ ಇನ್ನೊಂದು ಸಂಸ್ಥೆಗೆ ವರ್ಗಾವಣೆ ಮಾಡಿದಾಗ, ಅವನ ಎಲ್ಲ ಸ್ವತ್ತು, ಬೆಲೆಬಾಳುವ ಸಾಮಾನುಗಳನ್ನು, ಅದರ ಸಂಪೂರ್ಣ ಮತ್ತು ಯಥಾರ್ಥ ತಃಖ್ತೆಯನ್ನು ಮತ್ತು ಅದರ ಅಂದಾಜು ಮೌಲ್ಯದೊಂದಿಗೆ ಬಾಲಕನ / ಮಗುವಿನ ಜೊತೆಯಲ್ಲಿ, ಅವನನ್ನು ಯಾವ ಸಂಸ್ಥೆಗೆ ವರ್ಗಾಯಿಸಲಾಗಿದೆಯೋ ಆ ಸಂಸ್ಥೆಯ ಅಧೀಕ್ಷಕನಿಗೆ ಕಳುಹಿಸತಕ್ಕದ್ದು;

(ಹೆಚ್) ಅಂಥ ಬಾಲಕನನ್ನು / ಮಗುವನ್ನು ಬಿಡುಗಡೆಮಾಡುವ ಸಂದರ್ಭದಲ್ಲಿ, ಸುರಕ್ಷಿತ ಅಭಿರಕ್ಷೆಯಲ್ಲಿಟ್ಟಿದ್ದ ಸ್ವತ್ತು ಮತ್ತು ಬೆಲೆ ಬಾಳುವ ವಸ್ತುಗಳನ್ನು ಮತ್ತು ಬಾಲಕನ / ಮಗುವಿನ ಹೆಸರಿನಲ್ಲಿ ಠೇವಣಿಯಾಗಿಟ್ಟ ಹಣವನ್ನು ಬಾಲಕನಿಗೆ/ ಮಗುವಿಗೆ ಒಪ್ಪಿಸತಕ್ಕದ್ದು ಮತ್ತು ಈ ಬಗ್ಗೆ ರಿಜಿಸ್ಟರ್‌ನಲ್ಲಿ ನಮೂದಿಸತಕ್ಕದ್ದು. ಅಂಥ ನಮೂದಿಗೆ ಅಧೀಕ್ಷಕನು ಸಹಿ ಮಾಡತಕ್ಕದ್ದು;

(ಐ) ಒಂದು ಸಂಸ್ಥೆಯಲ್ಲಿರುವ ಒಂದು ಮಗುವು ಮೃತಪಟ್ಟರೆ, ಮೃತ ಮಗುವು ಬಿಟ್ಟುಹೋದ ಸ್ವತ್ತನ್ನು ಮತ್ತು ಅದರ ಹೆಸರಿನಲ್ಲಿ ಠೇವಣಿಯಾಗಿಟ್ಟ ಹಣವನ್ನು, ಆ ಬಗ್ಗೆ ಕ್ಲೇಮನ್ನು ಮಾಡುವ ಮತ್ತು ನಷ್ಟಭರ್ತಿ ಬಂಧಪತ್ರವನ್ನು ಬರೆದುಕೊಡುವ ಯಾರೇ ವ್ಯಕ್ತಿಗೆ ಅಧೀಕ್ಷಕನು ಅದನ್ನು ಒಪ್ಪಿಸತಕ್ಕದ್ದು. ಅಂಥ ಸ್ವತ್ತು ಮತ್ತು ಮೊಬಲಗನ್ನು ಸ್ವೀಕರಿಸಿದ ಬಗ್ಗೆ ಅಂಥ ವ್ಯಕ್ತಿಯಿಂದ ಒಂದು ಸ್ವೀಕೃತಿಯನ್ನು ಪಡೆದುಕೊಳ್ಳತಕ್ಕದ್ದು. ಅಂಥ ಬಾಲಕನ ಮರಣ/ ತಪ್ಪಿಸಿಕೊಂಡ ದಿನಾಂಕದಿಂದ ಆರು ತಿಂಗಳ

ಅವಧಿಯೊಳಗಾಗಿ ಯಾರೇ ಕ್ಲೇಮುದಾರರು ಬರದಿದ್ದರೆ, ಸ್ವತ್ತು ಮತ್ತು ಮೊಬಲಗನ್ನು ಮೇಲ್ವಿಚಾರಣಾ ಮತ್ತು ಮೌಲ್ಯ ನಿರ್ಣಯ ಸಮಿತಿಯು ನೀಡಿರುವ ನಿರ್ದೇಶನಗಳ ಪ್ರಕಾರ ವಿಲೇ ಮಾಡತಕ್ಕದ್ದು.

(3) ಪ್ರಭಾರಿ ಅಧಿಕಾರಿಯು, ನಿರ್ದೇಶಕರು ಅಗತ್ಯಪಡಿಸಬಹುದಾದಂಥ ಮತ್ತು ನಿಯಮಗಳ ಅಡಿಯಲ್ಲಿ ಗೊತ್ತುಪಡಿಸಬಹುದಾದಂಥ ರಿಜಿಸ್ಟರ್‌ಗಳು ಮತ್ತು ನಮೂನೆಗಳನ್ನು ತನ್ನ ಕಚೇರಿಯಲ್ಲಿ ಇಟ್ಟುಕೊಂಡು ಬರತಕ್ಕದ್ದು.

(4) (ಎ) ಸಾಮಾಜಿಕ ತನಿಖಾ ವರದಿಗಳು, ನ್ಯಾಯ ಸಂಬಂಧಿ ದಾಖಲೆಗಳು, ವೈದ್ಯಕೀಯ ದಾಖಲೆಗಳು ಹಾಗೂ ಚಿಕಿತ್ಸೆಯ ವಿಧಾನ, ಪ್ರಮಾಣ ಮತ್ತು ವಿವರಗಳಿಗೆ ಸಂಬಂಧಿಸಿದ ಇತರ ಎಲ್ಲ ದಸ್ತಾವೇಜುಗಳನ್ನು ಒಳಗೊಂಡ ಎಲ್ಲ ವರದಿಗಳನ್ನು ವೈಯಕ್ತಿಕ ವಿಷಯ ಕಡತಗಳಲ್ಲಿ ಇಟ್ಟುಕೊಂಡು ಬರತಕ್ಕದ್ದು;

(ಬಿ) ಮಕ್ಕಳಿಗೆ ಸಂಬಂಧಿಸಿದ ವಿಷಯ ಕಡತಗಳು ಮತ್ತು ವೈದ್ಯಕೀಯ ವಿವರದ ದಾಖಲೆಗಳಿಗೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನು ಗೌಪ್ಯವಾಗಿ ಇಡತಕ್ಕದ್ದು. ಈ ಎಲ್ಲ ಕಡತಗಳನ್ನು, ಇಂದಿನವರೆಗೆ ನಿರ್ವಹಿಸತಕ್ಕದ್ದು. ಪ್ರಾಧಿಕೃತ ವ್ಯಕ್ತಿಗಳಿಗೆ ಮಾತ್ರ ಇದನ್ನು ನೋಡಲು ಅವಕಾಶವಿರತಕ್ಕದ್ದು ಮತ್ತು ಸುಲಭವಾಗಿ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ವರ್ಗೀಕರಿಸತಕ್ಕದ್ದು;

(ಸಿ) ಗೃಹದ ಅಧೀಕ್ಷಕರು, ಮಕ್ಕಳ ವರದಿಗಳು ಮತ್ತು ವಿಷಯ ಕಡತಗಳ ನಿರ್ವಹಣೆಯ ಬಗ್ಗೆ ಖಚಿತ ಪಡಿಸಿಕೊಳ್ಳತಕ್ಕದ್ದು. ಸಂಸ್ಥೆಯಲ್ಲಿ, ಅನ್ವಯವಾಗುವಂಥ ಈ ಮುಂದಿನ ಮಾಹಿತಿಯನ್ನು ಒಳಗೊಂಡಿರುವ ಪ್ರತಿಯೊಂದು ಮಗುವಿನ ವಿಷಯ ಕಡತವನ್ನು ನಿರ್ವಹಿಸತಕ್ಕದ್ದು:-

(i) ಆ ವರ್ಷದ ಭಾವಚಿತ್ರ;

(ii) ಸಕ್ಷಮ ಪ್ರಾಧಿಕಾರದ ಮುಂದೆ ಮಗುವನ್ನು ಹಾಜರುಪಡಿಸಿದಂಥ ವ್ಯಕ್ತಿಯ / ಏಜೆನ್ಸಿಯ ವರದಿ (ನಮೂನೆ IX);

(iii) ಪರಿವೀಕ್ಷಣಾಧಿಕಾರಿಯ ವರದಿ;

(iv) ಹಿಂದಿನ ಸಂಸ್ಥೆಯಿಂದ ಪಡೆದ ಮಾಹಿತಿ;

(v) ಶಿಕ್ಷಣ, ಆರೋಗ್ಯ ಇವುಗಳಲ್ಲಿ ಮಗುವಿನ ಪ್ರಗತಿಗೆ ಸಂಬಂಧಪಟ್ಟಂತೆ ಸಿಬ್ಬಂದಿಯು ನಡೆಸಿದ ಪರಿವೀಕ್ಷಣಾ ವರದಿಗಳು, ಋತುಚಕ್ರ (ಬಾಲಕಿಯರ ಸಂದರ್ಭದಲ್ಲಿ), ಭಾವನಾತ್ಮಕ ಸ್ಥಿತಿ - ಇವುಗಳ ವರದಿ;

(vi) ಸಾಮಾಜಿಕ ಹಿನ್ನೆಲೆ;

(vii) ಪ್ರಭಾರಿ ಅಧಿಕಾರಿಯ ಸಂಕ್ಷಿಪ್ತ ವರದಿ;

(viii) ವೈದ್ಯಾಧಿಕಾರಿಯ ವರದಿಗಳು, ಬುದ್ಧಿಮತ್ತೆ ಪರೀಕ್ಷೆ, ಅಭಿರುಚಿ ಪರೀಕ್ಷೆ, ಶೈಕ್ಷಣಿಕ / ವೃತ್ತಿ ಪರೀಕ್ಷೆಗಳು;

(ix) ಮಗುವಿನ ವ್ಯಕ್ತಿ ಚಿತ್ರಣ ಮತ್ತು ಪಾಲನಾ ಯೋಜನೆ;

(x) ಆಹಾರ, ಅಲರ್ಜಿಗಳು, ಯಾವುದೇ ಔಷಧಕ್ಕೆ ಅಲರ್ಜಿ ಉಂಟಾಗುವ ಸಂದರ್ಭಗಳೂ ಸೇರಿದಂತೆ ಕೈಗೊಳ್ಳಬೇಕಾದ ವಿಶೇಷ ಮುನ್ನೆಚ್ಚರಿಕೆಗಳು, ಮಗುವನ್ನು ಭೇಟಿ ಮಾಡಲು ಅವಕಾಶ ನಿರಾಕರಿಸಬಹುದಾಗಿರುವಂಥ ವ್ಯಕ್ತಿಗಳ ವಿವರಗಳು, ಇತ್ಯಾದಿ;

(xi) ಮಂಜೂರು ಮಾಡಲಾಗಿರುವ ರಜೆ ಮತ್ತು ಇತರ ವಿಶೇಷ ಸೌಲಭ್ಯಗಳು;

(xii) ಶಾಲೆಯಿಂದ ತ್ರೈಮಾಸಿಕ ಪ್ರಗತಿ ವರದಿ;

(xiii) ನಿಯಮಗಳನ್ನೇನಾದರೂ ಉಲ್ಲಂಘಿಸಿದ್ದಲ್ಲಿ, ಅದನ್ನೂ ಮತ್ತು ವಿಶೇಷ ಸಾಧನೆಗಳನ್ನು ಒಳಗೊಂಡ ಪರಿಶೀಲನಾ ಪತ್ರ;

(xiv) ಬಿಡುಗಡೆ ಮುಂಚಿನ ಕಾರ್ಯಕ್ರಮ ವರದಿ (ನಮೂನೆ X);

(xv) ಅಂತಿಮ ಪ್ರಗತಿ ವರದಿ (ಶಿಕ್ಷಣ / ವೃತ್ತಿ ತರಬೇತಿ, ಆರೋಗ್ಯ - ಇವುಗಳ ದಾಖಲೆ ಪತ್ರಗಳು ಮತ್ತು ಇತರ ಪ್ರಗತಿ ವರದಿಗಳು);

(xvi) ಗೈರು ಹಾಜರಿ;

(xvii) ಅಂತಿಮ ವಿಮೋಚನೆ (ಬಿಡುಗಡೆ ಮುಂಚಿನ ವರದಿ ಮತ್ತು ಆ ವರದಿಯ ಶಿಫಾರಸುಗಳ ಮೇಲೆ ಮಾಡಲಾಗಿರುವಂಥ ಅಂತಿಮ ನಿರ್ಣಯವನ್ನು ಒಳಗೊಂಡಿರತಕ್ಕದ್ದು);

(xviii) ಷರಾ.

(5) (ಎ) ಪ್ರಭಾರಿ ಅಧಿಕಾರಿಯು, ಸಲಹಾಕಾರನು ಪರಿವೀಕ್ಷಣಾಧಿಕಾರಿ / ವಿಷಯ ನಿರ್ವಾಹಕನ ಜೊತೆಗೂಡಿ ಗೃಹದಲ್ಲಿರುವ ಪ್ರತಿಯೊಂದು ಮಗುವಿನ ಬಗ್ಗೆ ಪಾಲನಾ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು. ಪಾಲನಾ ಯೋಜನೆಯು ಒಂದು ಸಂಸ್ಥೆಗೆ ಪ್ರವೇಶ ಪಡೆದಿರುವ ಮಗುವಿನ ಇತಿವೃತ್ತದ ಮೇಲೆ ಆಧಾರಿತವಾಗಿರತಕ್ಕದ್ದು ಮತ್ತು ಅದನ್ನು ನಿಯತವಾಗಿ ಇಂದಿನವರೆಗೆ ಇಡತಕ್ಕದ್ದು.

(ಬಿ) ಕುಟುಂಬಕ್ಕೆ ವಾಪಸ್ಸು ಕಳುಹಿಸಿಕೊಡುವುದಕ್ಕೆ/ ರಕ್ಷಾ ಪಾಲನೆಗೆ/ ದತ್ತಕಕ್ಕೆ ಆಯ್ಕೆ ಅವಕಾಶಗಳನ್ನೂ ಒಳಗೊಂಡಂತೆ ಸೂಕ್ತ ಅಭಿವೃದ್ಧಿ ಮತ್ತು ಪುನರ್ವಸತಿಗಾಗಿ ಪಾಲನಾ ಯೋಜನೆಯನ್ನು ಕಾಲಕಾಲಕ್ಕೆ ಪರಿಶೀಲಿಸತಕ್ಕದ್ದು ಮತ್ತು ಪರಿಶೀಲನೆಗೆ ಸಂಬಂಧಿಸಿದಂತೆ ಒಂದು ವರ್ಷವನ್ನು ಮೀರಿ ವಿಳಂಬವಾಗತಕ್ಕದ್ದಲ್ಲ. ಕುಟುಂಬ ಮತ್ತು ಸಮುದಾಯ ಆಧಾರಿತ ಪುನರ್ ಸಂಯೋಜನಾ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುವ ಬಗ್ಗೆ ಗಮನ ನೀಡತಕ್ಕದ್ದು. ಮಕ್ಕಳ ಪಾಲನಾ ಯೋಜನೆಯನ್ನು ನಿರ್ಧರಿಸುವಾಗ ಅವರೊಂದಿಗೆ ಸಮಾಲೋಚಿಸತಕ್ಕದ್ದು.

(ಸಿ) ಪಾಲನಾ ಯೋಜನೆಯನ್ನು ಆಧರಿಸಿ, ಪ್ರತಿಯೊಂದು ಮಗುವಿಗೆ ಅತಿ ಸಮರ್ಪಕವಾದ ಪಾಲನೆ ದೊರೆಯುವಂತೆ ಮಾಡಲು ತಜ್ಞರು ಮತ್ತು ಸಮುದಾಯ ಆಧಾರಿತ ಕಲ್ಯಾಣ ಏಜೆನ್ಸಿಗಳು, ಮನೋವಿಜ್ಞಾನಿಗಳು, ಮನೋರೋಗ ಚಿಕಿತ್ಸಕರು, ಸ್ಥಳೀಯ ವೈದ್ಯರು – ಇವರುಗಳೊಂದಿಗೆ ಯುಕ್ತ ಸಂಪರ್ಕಗಳನ್ನು ಸ್ಥಾಪಿಸಿಕೊಳ್ಳಬಹುದು.

(ಡಿ) ಪ್ರವೇಶ ನೀಡಿದ ಮೇಲೆ ಮಗುವನ್ನು ಪರೀಕ್ಷಿಸಿದಂಥ ವೈದ್ಯಾಧಿಕಾರಿಯು ಸಿದ್ಧಪಡಿಸಿದ ವರದಿಯೊಂದಿಗೆ ಈ ವರದಿಯನ್ನು, ಸಂಸ್ಥೆಯೊಳಗೆ ಮಗುವಿಗೆ ಅತ್ಯಂತ ಸೂಕ್ತ ನೆಲೆಯನ್ನು ಮತ್ತು ಪಾಲನೆಯ ನಿರ್ದಿಷ್ಟ ರೀತಿ ಮತ್ತು ಮಟ್ಟವನ್ನು ಮತ್ತು ಅನುಸರಿಸಬೇಕಾದ ಕಾರ್ಯಕ್ರಮವನ್ನು ನಿರ್ಧರಿಸುವ ಉದ್ದೇಶಗಳಿಗಾಗಿ, ಮೇಲ್ವಿಚಾರಣಾ ಮತ್ತು ಮೌಲ್ಯನಿರ್ಣಯ ಸಮಿತಿಗೆ ಕಳುಹಿಸಿಕೊಡತಕ್ಕದ್ದು.

(6) ಮೇಲ್ವಿಚಾರಣಾ ಮತ್ತು ಮೌಲ್ಯ ನಿರ್ಣಯ ಸಮಿತಿಯು ದೈನಂದಿನ ಚಟುವಟಿಕೆಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(7) ಪ್ರತಿಯೊಂದು ಸಂಸ್ಥೆಯು, ಬಾಲಕರಿಗಾಗಿ ಉತ್ತಮ ರೀತಿಯ ಒಂದು ದೈನಂದಿನ ಕಾರ್ಯಕ್ರಮವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಪ್ರದರ್ಶಿಸತಕ್ಕದ್ದು. ಆ ಸಂಸ್ಥೆಯು ಇತರ ಅಂಶಗಳ ಜೊತೆಗೆ, ನಿಯಂತ್ರಿತ ಶಿಸ್ತು ಬದ್ಧ ಜೀವನದ ಸಲುವಾಗಿ ವೈಯಕ್ತಿಕ ಆರೋಗ್ಯ ಮತ್ತು ಸ್ವಚ್ಛತೆ, ಶಾರೀರಿಕ ವ್ಯಾಯಾಮ, ಶಿಕ್ಷಣ ತರಗತಿಗಳು, ವೃತ್ತಿ ತರಬೇತಿ, ಸಂಘಟಿತ ಮನರಂಜನೆ ಮತ್ತು ಪಂದ್ಯಗಳು, ನೀತಿ ಶಿಕ್ಷಣ, ತಂಡ ಚಟುವಟಿಕೆಗಳು, ಪ್ರಾರ್ಥನೆ, ಸಮೂಹ ಗಾಯನ ಹಾಗೂ ಭಾನುವಾರಗಳು ಮತ್ತು ರಜಾ ದಿನಗಳಂದು ವಿಶೇಷ ಕಾರ್ಯಕ್ರಮಗಳಿಗೆ ವ್ಯವಸ್ಥೆ ಮಾಡತಕ್ಕದ್ದು.

(8) ಭಾನುವಾರಗಳ ಮತ್ತು ರಜಾ ದಿನಗಳ ದೈನಂದಿನ ಕಾರ್ಯಕ್ರಮಗಳು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು:–

(ಎ) ಉಡುಪುಗಳು ಮತ್ತು ಹಾಸಿಗೆ ಬಟ್ಟೆಗಳನ್ನು ಒಗೆಯುವುದು;

(ಬಿ) ಓದುವುದು;

(ಸಿ) ಮನರಂಜನಾ ಕಾರ್ಯಕ್ರಮಗಳು, ಪಂದ್ಯಾಟಗಳು ಮತ್ತು ಕ್ರೀಡೆಗಳು;

(ಡಿ) ರೇಡಿಯೋ ಮತ್ತು ದೂರದರ್ಶನ ಕಾರ್ಯಕ್ರಮಗಳು ಮತ್ತು ಧ್ವನಿಮುದ್ರಿತ ಸಂಗೀತ;

(ಇ) ಸೂಕ್ತ ರೀತಿಯಲ್ಲಿ ಯೋಜಿಸಲಾದ ಪ್ರವಾಸಗಳು.

(9) (ಎ) ತಂದೆ ತಾಯಿಗಳು, ಕುಟುಂಬದ ಸದಸ್ಯರು, ಪಾಲಕ ಮತ್ತು ಮಕ್ಕಳಿಗೆ ಪರಿಚಯವಿರುವವರು ಮಾತ್ರ ಮಕ್ಕಳನ್ನು ಭೇಟಿ ಮಾಡುವಂತೆ ನಿರ್ಬಂಧಿಸಲಾಗುವುದು.

(ಬಿ) ಭೇಟಿಯ ಫಲಿತಾಂಶವನ್ನು, ಮಗುವನ್ನು ಭೇಟಿ ಮಾಡುವ ವ್ಯಕ್ತಿಯ ಹೆಸರು ಮತ್ತು ಮಗುವಿನೊಂದಿಗೆ ಇರುವ ಸಂಬಂಧವನ್ನು ಹೆಚ್ಚಿನ ಅನುಸರಣಾ ಕಾರ್ಯವನ್ನು ಕೈಗೊಳ್ಳುವ ಸಲುವಾಗಿ ವಿಳಾಸ ಯಾವುದಾದರೂ ಇದ್ದರೆ, ಅದನ್ನು ಅಧೀಕ್ಷಕನು ದಾಖಲು ಮಾಡತಕ್ಕದ್ದು.

(ಸಿ) ಮಗುವಿನ ತಂದೆ ತಾಯಿಗಳಿಗೆ ಮತ್ತು ಸಮೀಪದ ಬಂಧುಗಳಿಗೆ ಮಗುವನ್ನು ತಿಂಗಳಿಗೊಮ್ಮೆ ಅಥವಾ ವಿಶೇಷ ಸಂದರ್ಭಗಳಲ್ಲಿ ಅಧೀಕ್ಷಕನ ವಿವೇಚನಾನುಸಾರ, ಆತನು ಗೊತ್ತುಪಡಿಸುವ ಸಂದರ್ಶನ ವೇಳೆಗಳಲ್ಲಿ, ಆಗಿಂದಾಗ್ಗೆ ಭೇಟಿ ಮಾಡಲು ಅವಕಾಶ ನೀಡತಕ್ಕದ್ದು.

(ಡಿ) ಸಂಸ್ಥೆಯ ಮಕ್ಕಳಿಗೆ ಬರುವ ಪತ್ರಗಳ ಬಗ್ಗೆ ನಿರ್ಬಂಧವಿರತಕ್ಕದ್ದಲ್ಲ ಮತ್ತು ಅವರಿಗೆ ಯುಕ್ತ ಕಾಲಗಳಲ್ಲಿ ಪತ್ರ ಬರೆಯುವ ಸ್ವಾತಂತ್ರ್ಯವಿರತಕ್ಕದ್ದು. ತಂದೆ ತಾಯಿಗಳು, ಪಾಲಕರು ಅಥವಾ ಸಂಬಂಧಿಗಳ ಬಗ್ಗೆ ತಿಳಿದಿರುವಲ್ಲಿ ಮಗುವು ಪ್ರತಿವಾರವೂ ಕನಿಷ್ಠ ಪಕ್ಷ ಒಂದು ಪತ್ರವನ್ನಾದರೂ ಬರೆಯುವಂತೆ ಅಧೀಕ್ಷಕನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಅದಕ್ಕಾಗಿ ಅಂಚೆ ವೆಚ್ಚವನ್ನು ಒದಗಿಸತಕ್ಕದ್ದು.

(10) (ಎ) ಬಾಲಕನ/ ಮಗುವಿನ ಕುಟುಂಬದ ಯಾರೇ ಹತ್ತಿರದ ಬಂಧುವು ಮೃತನಾದಾಗ, ತೀವ್ರವಾಗಿ ಅಸ್ವಸ್ಥನಾಗಿರುವಾಗ ಅಥವಾ ಗಾಯಗೊಂಡಿರುವಾಗ ಆ ಬಗ್ಗೆ ಸಾಧ್ಯವಾದಷ್ಟು ಬೇಗ ಅವನಿಗೆ ತಿಳಿಸತಕ್ಕದ್ದು ಮತ್ತು ಮೃತನ ಅಂತ್ಯ ಸಂಸ್ಕಾರಕ್ಕೆ ಹಾಜರಾಗಲು ಅಥವಾ ತೀವ್ರವಾಗಿ ಅಸ್ವಸ್ಥನಾಗಿರುವ ಒಬ್ಬ ಬಂಧುವನ್ನು ನೋಡಿಕೊಂಡು ಬರಲು ಅವಕಾಶ ನೀಡತಕ್ಕದ್ದು.

(ಬಿ) ಪರೀಕ್ಷೆ ಬರೆಯುವ ದೃಷ್ಟಿಯಿಂದ, ತುರ್ತು ಸಂದರ್ಭಗಳಲ್ಲಿ ಅಥವಾ ಕುಟುಂಬದಲ್ಲಿ ಜರುಗುವ ಮದುವೆಯಂಥ ವಿಶೇಷ ಸನ್ನಿವೇಶಗಳಲ್ಲಿ ಮಗುವನ್ನು ಸಂಸ್ಥೆಯಿಂದ ಗೈರುಹಾಜರಿ ರಜೆಯ ಮೇಲೆ ಹೋಗಲು ಅನುಮತಿಸಬಹುದು ಮತ್ತು ತನ್ನ ಕುಟುಂಬದವರೊಂದಿಗೆ ಇರಲು ಅವಕಾಶ ನೀಡಬಹುದು.

(ಸಿ) ಬಾಲಕನ / ಮಗುವಿನ ತಂದೆ ತಾಯಿಗಳು ಅಥವಾ ಪಾಲಕನು, ಕರೆದೊಯ್ಯುವುದಕ್ಕಾಗಿ ಕಾರಣಗಳು ಮತ್ತು ಹಾಗೆ ಕರೆದೊಯ್ಯುವ ಅವಧಿಯನ್ನು ಸ್ಪಷ್ಟವಾಗಿ ತಿಳಿಸಿ ರಜೆಯಲ್ಲಿರುವ ಆ ಬಾಲಕನನ್ನು / ಮಗುವನ್ನು ಕರೆದೊಯ್ಯಲು ಬಿಡುಗಡೆ ಮಾಡುವಂತೆ ಕೋರಿ ಅಧೀಕ್ಷಕನಿಗೆ ಒಂದು ಅರ್ಜಿಯನ್ನು ಸಲ್ಲಿಸತಕ್ಕದ್ದು.

(ಡಿ) ಮೇಲೆ ಉಲ್ಲೇಖಿಸಲಾಗಿರುವ ಕಾರಣಗಳಿಗಾಗಿ ಅಥವಾ ಅನ್ಯಥಾ ಬಾಲಕನ ಹಿತದೃಷ್ಟಿಯಿಂದ ಹಾಗೆ ಕರೆದೊಯ್ಯಲು ಅನುಮತಿ ನೀಡಬಹುದು ಎಂದು ಅಧೀಕ್ಷಕನು ಪರಿಗಣಿಸಿದರೆ, ಅವನು ಅಥವಾ ಅವಳು ಹಾಗೆ ಕರೆದೊಯ್ಯಲು ಆತನು ಅಥವಾ ಆಕೆಯು ಅನುಮತಿಸಬಹುದು.

(ಇ) ನಮೂನೆ - XI ರಲ್ಲಿ ಗೈರುಹಾಜರಿ ರಜೆಯನ್ನು ಮಂಜೂರುಮಾಡುವ ಆದೇಶವನ್ನು ಹೊರಡಿಸುವಾಗ, ಸಕ್ಷಮ ಪ್ರಾಧಿಕಾರಿಯು, ರಜೆಯ ಅವಧಿಯನ್ನು ಮತ್ತು ರಜೆಯ ಆದೇಶಕ್ಕೆ ಲಗತ್ತಿಸಲಾಗಿರುವ ಷರತ್ತುಗಳನ್ನು ನಮೂದಿಸತಕ್ಕದ್ದು ಮತ್ತು ಕರೆದೊಯ್ಯಲಾದ ಅವಧಿಯಲ್ಲಿ ಈ ಷರತ್ತುಗಳ ಪೈಕಿ ಯಾವುದೇ ಷರತ್ತನ್ನು ಪಾಲಿಸದಿರುವಲ್ಲಿ, ಆ ಬಾಲಕನನ್ನು ಅಥವಾ ಮಗುವನ್ನು ಸಂಸ್ಥೆಗೆ ಹಿಂದಕ್ಕೆ ಕರೆಸಿಕೊಳ್ಳಬಹುದು.

(ಎಫ್) ತಂದೆ ತಾಯಿಗಳು ಅಥವಾ ಪಾಲಕನು ಬಾಲಕನನ್ನು / ಮಗುವನ್ನು ಸಂಸ್ಥೆಯಿಂದ ಕರೆದುಕೊಂಡು ಹೋಗುವಾಗ ಮತ್ತು ಸಂಸ್ಥೆಗೆ ಕರೆದುಕೊಂಡು ಬರುವಾಗ ಬೆಂಗಾವಲಿಗೆ ವ್ಯವಸ್ಥೆ ಮಾಡತಕ್ಕದ್ದು ಮತ್ತು ಆ ಸಂಬಂಧದ ಪ್ರಯಾಣ

ವೆಚ್ಚಗಳನ್ನು ಭರಿಸತಕ್ಕದ್ದು. ವಿಶೇಷ ಸಂದರ್ಭಗಳಲ್ಲಿ ಅಥವಾ ತುರ್ತು ಸಂದರ್ಭದಲ್ಲಿ, ಪ್ರಭಾರಿ ಅಧಿಕಾರಿಯು ಮಗುವನ್ನು ಕುಟುಂಬವಿರುವ ಸ್ಥಳಕ್ಕೆ ಮತ್ತು ಹಿಂದಕ್ಕೆ ಕರೆದುಕೊಂಡು ಬರುವಾಗ ಬೆಂಗಾವಲಿನ ವ್ಯವಸ್ಥೆ ಮಾಡತಕ್ಕದ್ದು.

(ಜಿ) ಬಾಲಕನು / ಮಗುವು ರಜಾ ಅವಧಿಯಲ್ಲಿ ಕುಟುಂಬದಿಂದ ಓಡಿಹೋದರೆ, ತಂದೆ ತಾಯಿಗಳು ಅಥವಾ ಪಾಲಕನು, ತಕ್ಷಣವೇ ಸಂಸ್ಥೆಯ ಪ್ರಭಾರಿ ಅಧಿಕಾರಿಗೆ ಆ ಬಗ್ಗೆ ತಿಳಿಸತಕ್ಕದ್ದು ಮತ್ತು ಆ ಬಾಲಕನನ್ನು / ಮಗುವನ್ನು ಪತ್ತೆ ಹಚ್ಚಲು ಪ್ರಯತ್ನಿಸತಕ್ಕದ್ದು ಮತ್ತು ಅವನು ಪತ್ತೆಯಾದಲ್ಲಿ ಆ ಬಾಲಕನನ್ನು / ಮಗುವನ್ನು ಸಂಸ್ಥೆಗೆ ಕಳುಹಿಸತಕ್ಕದ್ದು.

(ಎಚ್) ಅಂಥ ಅವಧಿಯನ್ನು ಆ ಸಂಸ್ಥೆಯಲ್ಲಿನ ಸ್ಥಾನಬದ್ಧತೆಯ ಅವಧಿಯ ಭಾಗವೆಂದು ಭಾವಿಸತಕ್ಕದ್ದು. ಕಾನೂನು ಸಂಬಂಧದ ಸಂಘರ್ಷಕ್ಕೊಳಗಾದ ಮಕ್ಕಳ ಪ್ರಕರಣದಲ್ಲಿ ಮಾತ್ರ, ಬಾಲಕನು / ಮಗುವು ಗೊತ್ತುಪಡಿಸಲಾದ ಅವಧಿಯೊಳಗಾಗಿ ಸಂಸ್ಥೆಗೆ ಹಿಂದಿರುಗಲು ತಪ್ಪಿದ ತರುವಾಯದ ಕಾಲವನ್ನು ಆ ಸಂಸ್ಥೆಯಲ್ಲಿ ಅವನ ಸ್ಥಾನಬದ್ಧತೆಯ ಅವಧಿಯನ್ನು ಲೆಕ್ಕ ಹಾಕುವಾಗ ಹೊರತುಪಡಿಸತಕ್ಕದ್ದು.

(ಐ) ಬಿಡುಗಡೆಗೆ ಮುಂಚಿನ ಯೋಜನೆಯ ಒಂದು ಪೂರ್ಣ ಪ್ರಮಾಣದ ಕಾರ್ಯಕ್ರಮವನ್ನು ಮತ್ತು ವಿಶೇಷ ಗೃಹಗಳಿಂದ ಬಿಡುಗಡೆ ಮಾಡಿದ ಮಕ್ಕಳ ಬಗ್ಗೆ ಅನುಸರಣಾ ಕಾರ್ಯವನ್ನು ಅಸ್ತಿತ್ವದಲ್ಲಿರುವ ಸರ್ಕಾರಿ ಮತ್ತು ಸ್ವಯಂ ಸೇವಾ ಸಂಸ್ಥೆಗಳ ನಿಕಟ ಸಹಯೋಗದೊಂದಿಗೆ ಎಲ್ಲ ಸಂಸ್ಥೆಗಳಲ್ಲಿ ವ್ಯವಸ್ಥೆ ಮಾಡತಕ್ಕದ್ದು.

(11) (ಎ) ಬಾಲಕನ / ಮಗುವಿನ ವರ್ಗಾವಣೆಯನ್ನು, ಅದು ಆ ಬಾಲಕನ / ಮಗುವಿನ ಹಿತದೃಷ್ಟಿಯಲ್ಲಿ ಸೂಕ್ತವಾಗಿದ್ದರೆ ಮಾತ್ರ ಪ್ರಸ್ತಾವಿಸತಕ್ಕದ್ದು, ಎಂದರೆ,-

- (i) ಆ ಸಂಸ್ಥೆಯಲ್ಲಿ ಲಭ್ಯವಿಲ್ಲದಂಥ ಹೆಚ್ಚಿನ ಶಿಕ್ಷಣವನ್ನು ಅಥವಾ ತರಬೇತಿಯನ್ನು ಆ ಬಾಲಕನಿಗೆ / ಮಗುವಿಗೆ ನೀಡಬೇಕಾಗಿದ್ದರೆ;
- (ii) ಅನಾರೋಗ್ಯದ ಕಾರಣದ ಮೇಲೆ ಸಂಸ್ಥೆಯಲ್ಲಿ ಲಭ್ಯವಿಲ್ಲದಿರುವಂಥ ಚಿಕಿತ್ಸೆ ಪಡೆಯುವ ಸಲುವಾಗಿ ಬಾಲಕನಿಗೆ ಪರಿಸರದ ಬದಲಾವಣೆ ಅಥವಾ ಹವಾ ಬದಲಾವಣೆ ಅಗತ್ಯವಾಗಿದ್ದರೆ;
- (iii) ಉದ್ದೇಶಿತ ವರ್ಗಾವಣೆಯು ಆ ಬಾಲಕನನ್ನು / ಮಗುವನ್ನು ತನ್ನ ಕುಟುಂಬದ ಸನಿಹಕ್ಕೆ ತರುವಂತಿದ್ದರೆ ಮತ್ತು ಅವನ ಪುನರ್ವಸತಿಗೆ ಅದು ನೆರವಾಗುವಂತಿದ್ದರೆ;
- (iv) ಬಾಲಕನ / ಮಗುವಿನ ಹಿತಾಸಕ್ತಿಯಲ್ಲಿ ಅಥವಾ ಕಲ್ಯಾಣದ ದೃಷ್ಟಿಯಿಂದ ವರ್ಗಾವಣೆ ಮಾಡಬೇಕಾಗಿರುವ ಇತರ ಯಾವುದೇ ಕಾರಣಗಳಿಗಾಗಿ;

(ಬಿ) ಯಾರೇ ಬಾಲಕನು / ಮಗುವು ಈಗಿರುವ ಸಂಸ್ಥೆಯಲ್ಲಿ ಸಮಸ್ಯೆಗಳನ್ನು ಉಂಟು ಮಾಡಿರುವನೆಂಬ ಅಥವಾ ಅವನನ್ನು ಸಂಭಾಳಿಸುವುದು ಕಷ್ಟಕರವೆಂಬ ಕಾರಣ ಮಾತ್ರದಿಂದಲೇ ಬಾಲಕನನ್ನು / ಮಗುವನ್ನು ವರ್ಗಾವಣೆ ಮಾಡತಕ್ಕದ್ದಲ್ಲ ಅಥವಾ ವರ್ಗಾವಣೆಗೆ ಪ್ರಸ್ತಾವ ಮಾಡತಕ್ಕದ್ದಲ್ಲ;

(ಸಿ) ಬಾಲಕನ / ಮಗುವಿನ ಎಲ್ಲಾ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಪೂರ್ವಸ್ಥಿತಿಗಾಗಿ ಅಥವಾ ವಿಚಾರಣೆಗಾಗಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವರ್ಗಾವಣೆ ಮಾಡಬೇಕಾದಲ್ಲಿ ಸಕ್ಷಮ ಪ್ರಾಧಿಕಾರದಿಂದ ಸಮ್ಮತಿ ಪಡೆದ ತರುವಾಯ ಆದೇಶ ನೀಡಬಹುದು;

(ಡಿ) ಮಕ್ಕಳ ಕಲ್ಯಾಣ ಸಮಿತಿಯ ಸಮ್ಮತಿಯಿಲ್ಲದೆ ಯಾರೇ ಬಾಲಕ / ಮಗುವನ್ನು ದತ್ತು ಉದ್ದೇಶಗಳಿಗಾಗಿ ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ಅಥವಾ ಜಿಲ್ಲೆ / ನಗರದಾಚೆಗಿನ ಸಂಸ್ಥೆಗಳಿಗೆ ವರ್ಗಾವಣೆ ಮಾಡತಕ್ಕದ್ದಲ್ಲ;

(ಇ) ಅಧೀಕ್ಷಕನು, ವರ್ಗಾವಣೆ ಆದೇಶವನ್ನು ಸ್ವೀಕರಿಸಿದ ತರುವಾಯ, ಬಾಲಕನನ್ನು / ಮಗುವನ್ನು ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಸ್ಥಳ / ವ್ಯಕ್ತಿಯ ಬಳಿಗೆ ಸರ್ಕಾರಿ ವೆಚ್ಚದಲ್ಲಿ ಕರೆದೊಯ್ಯುವ ವ್ಯವಸ್ಥೆ ಮಾಡತಕ್ಕದ್ದು;

(ಎಫ್) ಹಾಗೆ ವರ್ಗಾವಣೆ ಮಾಡಿದ ಮೇಲೆ ಬಾಲಕನಿಗೆ / ಮಗುವಿಗೆ ಸಂಬಂಧಿಸಿದ ಪ್ರಕರಣದ ಕಡತವನ್ನು ಮತ್ತು ದಾಖಲೆಗಳನ್ನು ಬಾಲಕನೊಂದಿಗೆ / ಮಗುವಿನೊಂದಿಗೆ ಕಳುಹಿಸತಕ್ಕದ್ದು.

(12) (ಎ) ಅಧೀಕ್ಷಕನು, ಮಂಡಲಿಯು ಆದೇಶಿಸಿದಂತೆ, ಗೃಹದಲ್ಲಿನ ವಾಸ್ತವ್ಯದ ಅವಧಿಯು ಮುಕ್ತಾಯವಾದ ಮೇಲೆ ಬಿಡುಗಡೆ ಮಾಡಬೇಕಾಗಿರುವ ಪ್ರಕರಣಗಳನ್ನು ತೋರಿಸುವ ಒಂದು ಸರದಿ ಪಟ್ಟಿಯನ್ನು ಇಡತಕ್ಕದ್ದು. ಪ್ರತಿಯೊಂದು ಪ್ರಕರಣವನ್ನು ಮೇಲ್ವಿಚಾರಣಾ ಮತ್ತು ಮೌಲ್ಯ ನಿರ್ಣಯ ಸಮಿತಿಯ ಮುಂದೆ ಇಡತಕ್ಕದ್ದು ಮತ್ತು ಗರಿಷ್ಠ ಅವಧಿಯವರೆಗೆ ಇಟ್ಟುಕೊಳ್ಳಬೇಕಾಗಿರುವ ಬಾಲಕನ / ಮಗುವಿನ ಸಂಬಂಧದಲ್ಲಿ ಅವರಿಗೆ ಹದಿನೆಂಟು ವರ್ಷಗಳು ತುಂಬುವ ಆರು ತಿಂಗಳ ಮೊದಲೇ ಬಿಡುಗಡೆಯ ಕ್ರಮವನ್ನು ಪ್ರಾರಂಭಿಸತಕ್ಕದ್ದು.

(ಬಿ) ಬಾಲಕನ / ಮಗುವಿನ ಬಿಡುಗಡೆಯ ಬಗ್ಗೆ ಅಥವಾ ಬಿಡುಗಡೆ ಮಾಡಲಿರುವ ಸಂಭಾವ್ಯ ದಿನಾಂಕದ ಬಗ್ಗೆ ಮಾಹಿತಿಯನ್ನು ತಂದೆ ತಾಯಿ ಅಥವಾ ಪಾಲಕನಿಗೆ ಸಕಾಲದಲ್ಲಿ ತಿಳಿಸತಕ್ಕದ್ದು ಮತ್ತು ಆ ದಿನಾಂಕದಂದು ಬಾಲಕನನ್ನು / ಮಗುವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಸಂಸ್ಥೆಗೆ ಬರುವಂತೆ ತಂದೆ ತಾಯಿ ಅಥವಾ ಪಾಲಕನಿಗೆ ತಿಳಿಸತಕ್ಕದ್ದು. ಬಿಡುಗಡೆಗೆ ಆರು ತಿಂಗಳಿಗಿಂತ ಮುಂಚೆಯೇ ಬಾಲಕನ / ಮಗುವಿನ ಬಿಡುಗಡೆಯ ಬಗ್ಗೆ ತಂದೆ ತಾಯಿಗೆ ತಿಳಿಸತಕ್ಕದ್ದು ಮತ್ತು ಸಲಹೆಗಾರನಿಂದ ಒಂದು ಔಪಚಾರಿಕ ಸಲಹೆ ನೀಡುವ ಮೂಲಕ ಬಿಡುಗಡೆಗಾಗಿ ಬಾಲಕನನ್ನು / ಮಗುವನ್ನು ಸಿದ್ಧಗೊಳಿಸತಕ್ಕದ್ದು. ಬಾಲಕ / ಮಗು, ಕುಟುಂಬ ಮತ್ತು ಸಲಹೆಗಾರನು ಪರಸ್ಪರ ಸಹಯೋಗದೊಂದಿಗೆ ಪುನರ್ವಸತಿ ಯೋಜನೆಯನ್ನು ರೂಪಿಸತಕ್ಕದ್ದು.

(ಸಿ) ಅಗತ್ಯವಿದ್ದರೆ, ತಂದೆ ತಾಯಿ ಅಥವಾ ಪಾಲಕರು ಬಂದು ಹೋಗುವ ಮತ್ತು ಸಂಸ್ಥೆಯಿಂದ ಬಾಲಕನ / ಮಗುವಿನ ಪ್ರಯಾಣಕ್ಕೆ ತಗಲುವ ವಾಸ್ತವ ವೆಚ್ಚವನ್ನು ಅಧೀಕ್ಷಕನು, ಬಾಲಕನ / ಮಗುವಿನ ಬಿಡುಗಡೆಯ ಕಾಲಕ್ಕೆ ತಂದೆ ತಾಯಿ ಅಥವಾ ಪಾಲಕನಿಗೆ ಸಂದಾಯ ಮಾಡತಕ್ಕದ್ದು.

(ಡಿ) ಗೊತ್ತುಪಡಿಸಿದ ದಿನಾಂಕದಂದು, ಸಂದರ್ಭಾನುಸಾರ, ತಂದೆ ತಾಯಿ ಅಥವಾ ಪಾಲಕನು ಮಗುವನ್ನು ಕರೆದೊಯ್ಯುವುದಕ್ಕಾಗಿ ಬರಲು ತಪ್ಪಿದರೆ, ಮಗುವನ್ನು ಸಂಸ್ಥೆಯ ಬೆಂಗಾವಲಿನವನೊಂದಿಗೆ ಮಗುವಿನ ನಿವಾಸಕ್ಕೆ ಕರೆದೊಯ್ಯತಕ್ಕದ್ದು ಮತ್ತು ಬಾಲಕಿಯ ಸಂದರ್ಭದಲ್ಲಿ, ಅವಳನ್ನು ಮಹಿಳಾ ಬೆಂಗಾವಲಿನ ಜೊತೆಗೆ ಕಳುಹಿಸತಕ್ಕದ್ದು.

(ಇ) ಬಿಡುಗಡೆ ಅಥವಾ ವಿಮೋಚನೆಗೊಳಿಸುವ ಕಾಲಕ್ಕೆ, ಬಾಲಕನಿಗೆ / ಮಗುವಿಗೆ ಒಂದು ಜೊತೆ ಬಟ್ಟೆಯನ್ನು ನೀಡತಕ್ಕದ್ದು ಮತ್ತು ಅಧೀಕ್ಷಕನು, ತಂದೆ ತಾಯಿ ಅಥವಾ ಪಾಲಕನ ರುಜುವನ್ನು ಪಡೆದ ತರುವಾಯ, ಮಗುವಿನ ಉಳಿತಾಯಗಳು, ಯಾವುವಾದರೂ ಇದ್ದರೆ, ಅವೂ ಸೇರಿದಂತೆ, ಅದರ ಸ್ವಂತದ ವಸ್ತುಗಳನ್ನು ನೀಡತಕ್ಕದ್ದು.

(ಎಫ್) ಬಾಲಕನಿಗೆ/ ಮಗುವಿಗೆ ತಂದೆ ತಾಯಿ ಅಥವಾ ಪಾಲಕನು ಇಲ್ಲದಿದ್ದರೆ ಮತ್ತು ಎಲ್ಲ ಸರ್ಕಾರೇತರ ಸಂಸ್ಥೆಗಳು ಅವರನ್ನು ಇರಿಸಿಕೊಳ್ಳಲು ಸಮ್ಮತಿಸದಿದ್ದರೆ ಅಂತಹವರನ್ನು ಅನುಪಾಲನಾ ಸಂಸ್ಥೆಗೆ ಕಳುಹಿಸಬಹುದು.

(ಜಿ) ಬಾಲಕಿಯರ ಸಂಸ್ಥೆಯ ಅಧೀಕ್ಷಕನು, ಸಕ್ಷಮ ಪ್ರಾಧಿಕಾರದ ಅನುಮೋದನೆಗೊಳಪಟ್ಟು, ಹದಿನೆಂಟು ವರ್ಷಕ್ಕೆ ಮೇಲ್ಪಟ್ಟ ಯುಕ್ತ ಬಾಲಕಿಯರ ವಿವಾಹವನ್ನು ಕಾಲಕಾಲಕ್ಕೆ ಸರ್ಕಾರವು ರೂಪಿಸುವ ಕಾರ್ಯ ವಿಧಾನಕ್ಕೆ ಅನುಸಾರವಾಗಿ ನಡೆಸಬಹುದು. ಇದನ್ನು ಬಾಲಕಿಯ ಲಿಖಿತ ಸಮ್ಮತಿಯ ಮೇರೆಗೆ ಮಾತ್ರ ಮಾಡಬಹುದಾಗಿರುತ್ತದೆ.

(ಹೆಚ್) ಅಧೀಕ್ಷಕನು, ಯಾರೇ ಬಾಲಕನ / ಮಗುವಿನ ಸ್ಥಾನಬದ್ಧತೆಯ ಅವಧಿ ಮುಕ್ತಾಯವಾದ ತರುವಾಯ ವಿಮೋಚನಾ ಆದೇಶವನ್ನು ಮಾಡತಕ್ಕದ್ದು ಮತ್ತು ಕ್ರಮ ಕೈಗೊಂಡ ಬಗ್ಗೆ ಏಳು ದಿನಗಳೊಳಗಾಗಿ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. ಬಿಡುಗಡೆಯ ದಿನವು ಭಾನುವಾರ ಅಥವಾ ಇತರೆ ಸಾರ್ವಜನಿಕ ರಜಾ ದಿನವಾದರೆ, ಬಾಲಕನನ್ನು / ಮಗುವನ್ನು ಹಿಂದಿನ ದಿನದಂದೇ ಬಿಡುಗಡೆ ಮಾಡಬಹುದು. ಹಾಗೆ ಮಾಡಿದ ಬಗ್ಗೆ ವಿಮೋಚನಾ ರಿಜಿಸ್ಟರಿನಲ್ಲಿ ನಮೂದಿಸುವುದು. ಅಧೀಕ್ಷಕನು, ಎಲ್ಲ ಸಂದರ್ಭಗಳಲ್ಲೂ, ಆಹಾರ ಮತ್ತು ಪ್ರಯಾಣ ವೆಚ್ಚಗಳೂ ಸೇರಿದಂತೆ ಭತ್ಯೆಯ ಸಂದಾಯ ಮಾಡಬೇಕೆಂದು ಆದೇಶ ಮಾಡತಕ್ಕದ್ದು.

(ಐ) ಅರ್ಹ ಪ್ರಕರಣಗಳಲ್ಲಿ, ಅಧೀಕ್ಷಕನು, ಸಂಸ್ಥೆಯ ಮೂಲಕ ನಿಗದಿಪಡಿಸಬಹುದಾದಂಥ ಗರಿಷ್ಠ ವೆಚ್ಚಕ್ಕೆ ಒಳಪಟ್ಟು ಕೆಲಸ ಅಥವಾ ವ್ಯವಹಾರ ಪ್ರಾರಂಭಿಸಲು ಅಗತ್ಯವಿರಬಹುದಾದ ಚಿಕ್ಕಪುಟ್ಟ ಉಪಕರಣಗಳನ್ನು ಬಾಲಕನಿಗೆ ನೀಡಬಹುದು.

(ಜೆ) ಅಧೀಕ್ಷಕನು, ಸಕ್ಷಮ ಪ್ರಾಧಿಕಾರದ ಅನುಮೋದನೆಗೊಳಪಟ್ಟು, ಬಾಲಕಿಯರು ಅಥವಾ ಬಾಲಕರಿಗೆ ಹೋಗಲು ಯಾವುದೇ ಸ್ಥಳಗಳಿಲ್ಲದಿರುವಲ್ಲಿ ಅವರ ಸ್ವಂತ ಕೋರಿಕೆಯ ಮೇಲೆ ಅವರ ಸ್ಥಾನಬದ್ಧತೆಯ ಅವಧಿಯು ಮುಕ್ತಾಯವಾದ ತರುವಾಯ, ಇತರ ಸೂಕ್ತ ವ್ಯವಸ್ಥೆಗಳನ್ನು ಮಾಡುವವರೆಗೆ ಅವರು ಅದೇ ಸಂಸ್ಥೆಯಲ್ಲಿ / ಗುರುತಿಸಲಾದ ರಕ್ಷಣಾ ಗೃಹಗಳಲ್ಲಿ ವಾಸಿಸಲು ಅವಕಾಶ ಮಾಡಿಕೊಡಬಹುದು.

(13) (ಎ) ಬಾಲಕನ / ಮಗುವಿನ ಸಾಮಾನ್ಯ ವಾಸ ಸ್ಥಳವು ಸಕ್ಷಮ ಪ್ರಾಧಿಕಾರದ ವ್ಯಾಪ್ತಿಯಿಂದ ಹೊರಗೆ ಇರುವ ಸಂದರ್ಭದಲ್ಲಿ ಮತ್ತು ಸಕ್ಷಮ ಪ್ರಾಧಿಕಾರವು 50ನೇ ಪ್ರಕರಣದ ಅಡಿಯಲ್ಲಿ ಕ್ರಮ ಕೈಗೊಳ್ಳುವ ಅಗತ್ಯವಿದೆಯೆಂದು ಭಾವಿಸಿದರೆ, ಅದು ಸಾಮಾನ್ಯ ವಾಸ ಸ್ಥಳದಲ್ಲಿ ಬಾಲಕನನ್ನು / ಮಗುವನ್ನು ಸ್ವೀಕರಿಸುವ ಸಂಬಂಧಿ ಅಥವಾ ಇತರ ವ್ಯಕ್ತಿಯ ಅರ್ಹತೆ ಮತ್ತು ಒಪ್ಪಿಗೆಯ ಬಗ್ಗೆ ಮತ್ತು ಅಂಥ ಸಂಬಂಧಿ ಅಥವಾ ಸೂಕ್ತ ವ್ಯಕ್ತಿಯು ಬಾಲಕನನ್ನು / ಮಗುವನ್ನು ಸರಿಯಾಗಿ ಪಾಲನೆ ಮತ್ತು ನಿಯಂತ್ರಣ ಮಾಡುತ್ತಾನೆಯೇ ಎಂಬ ಬಗ್ಗೆ ವಿಚಾರಣೆ ನಡೆಸುವಂತೆ ಪರಿವೀಕ್ಷಣಾಧಿಕಾರಿಗೆ ನಿರ್ದೇಶನ ನೀಡಬಹುದು.

(ಬಿ) ಒಬ್ಬ ವಿದೇಶಿ ರಾಷ್ಟ್ರೀಯನಾಗಿರುವ ಮತ್ತು ತನ್ನ ಕುಟುಂಬದೊಂದಿಗೆ ಸಂಪರ್ಕವನ್ನು ಕಳೆದುಕೊಂಡಿರುವ ಯಾರೇ ಬಾಲಕ / ಮಗು ಸಹ ರಕ್ಷಣೆ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು. ಬಾಲಕನನ್ನು / ಮಗುವನ್ನು ವಿದೇಶಿ ವ್ಯವಹಾರಗಳ ಮಂತ್ರಾಲಯ ಮತ್ತು ಸಂಬಂಧಪಟ್ಟ ರಾಜದೂತಾವಾಸ ಅಥವಾ ಉನ್ನತ ಆಯೋಗದ ಸಹಯೋಗದೊಂದಿಗೆ, ಆದಷ್ಟು ಬೇಗ ಆತನ ದೇಶಕ್ಕೆ ಕಳುಹಿಸಿಕೊಡತಕ್ಕದ್ದು.

(ಸಿ) ಸಕ್ಷಮ ಪ್ರಾಧಿಕಾರವು, ಸಂದರ್ಭಾನುಸಾರ, ಪರಿವೀಕ್ಷಣಾಧಿಕಾರಿ / ಕಾರ್ಯನಿರ್ವಾಹಕ / ಮಕ್ಕಳ ಕಲ್ಯಾಣ ಅಧಿಕಾರಿಯ ವರದಿಯಿಂದ ಮನದಟ್ಟಾದ ಮೇಲೆ, ಬಾಲಕನು / ಮಗುವು ನಮೂನೆ XII ರಲ್ಲಿರುವಂತೆ ಅಗತ್ಯವಿದ್ದರೆ ಸದರಿ ಸಂಬಂಧಿಗೆ ಅಥವಾ ಯೋಗ್ಯ ವ್ಯಕ್ತಿಗೆ ಒಂದು ಬಂಧಪತ್ರವನ್ನು ಬರೆದುಕೊಟ್ಟ ತರುವಾಯ ಅಥವಾ ನಮೂನೆ XIII ರಲ್ಲಿ ಸೂಕ್ತ ವ್ಯಕ್ತಿಯಿಂದ ಮುಚ್ಚಳಿಕೆ ಬರೆಸಿಕೊಂಡು ಬಾಲಕನನ್ನು / ಮಗುವನ್ನು ಕಳುಹಿಸಬಹುದು.

(ಡಿ) 50ನೇ ಪ್ರಕರಣದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದ ಮೂಲಕ ಜಾರಿಗೊಳಿಸಲಾದ ಆದೇಶದ ಒಂದು ಪ್ರತಿಯನ್ನು ಈ ಮುಂದಿನವರಿಗೆ ಕಳುಹಿಸತಕ್ಕದ್ದು,-

(i) 13ನೇ ಉಪ ನಿಯಮದ (ಎ) ಖಂಡದ ಅಡಿಯಲ್ಲಿ ಒಂದು ವರದಿಯನ್ನು ಸಲ್ಲಿಸುವಂತೆ ನಿರ್ದೇಶನ ಪಡೆದ ಪರಿವೀಕ್ಷಣಾಧಿಕಾರಿ;

(ii) ಬಾಲಕನನ್ನು / ಮಗುವನ್ನು ಯಾವ ಸ್ಥಳಕ್ಕೆ ಕಳುಹಿಸಬೇಕಾಗಿದೆಯೋ ಆ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಪರಿವೀಕ್ಷಣಾಧಿಕಾರಿ;

(iii) ಬಾಲಕನನ್ನು / ಮಗುವನ್ನು ಯಾವ ಸ್ಥಳಕ್ಕೆ ಕಳುಹಿಸಬೇಕಾಗಿದೆಯೋ ಆ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಸಕ್ಷಮ ಪ್ರಾಧಿಕಾರ; ಮತ್ತು

(iv) ಬಾಲಕನನ್ನು / ಮಗುವನ್ನು ಸ್ವೀಕರಿಸಲಿರುವ ಸಂಬಂಧಿ ಅಥವಾ ವ್ಯಕ್ತಿ.

(ಇ) ಮೇಲಿನ (ಸಿ) ಖಂಡದ ಅಡಿಯಲ್ಲಿ ನೀಡಲಾದ ಬಂಧಪತ್ರ ಅಥವಾ ಮುಚ್ಚಳಿಕೆಯ ಅಥವಾ ಅವೆರಡರ ಯಾವುದೇ ಉಲ್ಲಂಘನೆಯು, ಬಾಲಕನನ್ನು / ಮಗುವನ್ನು ಸಕ್ಷಮ ಪ್ರಾಧಿಕಾರದ ಮುಂದೆ ಕರೆತರಲು ಬದ್ಧವಾಗಿರತಕ್ಕದ್ದು. ಅದು, ಬಾಲಕನನ್ನು / ಮಗುವನ್ನು ಗೃಹಕ್ಕೆ ಕಳುಹಿಸುವಂತೆ ನಿರ್ದೇಶಿಸಿ ಒಂದು ಆದೇಶ ಮಾಡಬಹುದು.

(ಎಫ್) (ಸಿ) ಖಂಡದ ಅಡಿಯಲ್ಲಿ ಆದೇಶವು ಇತ್ಯರ್ಥದಲ್ಲಿರುವಾಗ, ಸಕ್ಷಮ ಪ್ರಾಧಿಕಾರವು, ಬಾಲಕನನ್ನು /ಮಗುವನ್ನು ಒಂದು ಪರಿವೀಕ್ಷಣಾಲಯ / ಬಾಲಕ ಗೃಹಕ್ಕೆ ಕಳುಹಿಸತಕ್ಕದ್ದು.

(ಜಿ) 50ನೇ ಪ್ರಕರಣದ ಅಡಿಯಲ್ಲಿ, ಸಕ್ಷಮ ಪ್ರಾಧಿಕಾರವು ಬಾಲಕನನ್ನು / ಮಗುವನ್ನು ಆತನ ಸಾಮಾನ್ಯ ವಾಸಸ್ಥಳಕ್ಕೆ ಕಳುಹಿಸುವುದು ಸೂಕ್ತವೆಂದು ಭಾವಿಸಿರುವ ಒಬ್ಬ ಬಾಲಕನ / ಮಗುವಿನ ಸಂದರ್ಭದಲ್ಲಿ, ಸಕ್ಷಮ ಪ್ರಾಧಿಕಾರವು, ಬಾಲಕನನ್ನು / ಮಗುವನ್ನು ಕರೆದೊಯ್ಯುವ ಸಂಬಂಧಿ ಅಥವಾ ಸೂಕ್ತ ವ್ಯಕ್ತಿಗೆ ತಿಳಿಸತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಬಾಲಕನನ್ನು / ಮಗುವನ್ನು ಗೃಹಕ್ಕೆ ಬಂದು ವಶಕ್ಕೆ ತೆಗೆದುಕೊಳ್ಳಲು ಕರೆ ಕಳುಹಿಸತಕ್ಕದ್ದು.

(ಹೆಚ್) 13ನೇ ಉಪಪ್ರಕರಣದ (ಬಿ) ಖಂಡದ ಅಡಿಯಲ್ಲಿ ಸದರಿ ಸಂಬಂಧಿ ಅಥವಾ ಸೂಕ್ತ ವ್ಯಕ್ತಿಗೆ ಕರೆ ಕಳುಹಿಸುವ ಸಕ್ಷಮ ಪ್ರಾಧಿಕಾರವು, ಅಗತ್ಯವಿದ್ದರೆ, ಬಾಲಕನನ್ನು / ಮಗುವನ್ನು ಕಳುಹಿಸುವ ಸಮಯದಲ್ಲಿ ಸಂಬಂಧಿ ಅಥವಾ ಸೂಕ್ತ ವ್ಯಕ್ತಿಯು ಸಮುಚಿತ ದರ್ಜೆಯಲ್ಲಿ ಮಾಡುವ ಎರಡೂ ಕಡೆಯ ಪ್ರಯಾಣಕ್ಕೆ ಮತ್ತು ಬಾಲಕನನ್ನು / ಮಗುವನ್ನು ಗೃಹದಿಂದ ಸಾಮಾನ್ಯ ವಾಸಸ್ಥಳಕ್ಕೆ ಹೋಗುವ ಪ್ರಯಾಣಕ್ಕೆ ವಾಸ್ತವವಾಗಿ ತಗಲುವ ವೆಚ್ಚವನ್ನು ಸಂದಾಯ ಮಾಡುವಂತೆ ಪ್ರಭಾರಿ ಅಧಿಕಾರಿಗೆ ನಿರ್ದೇಶಿಸಬಹುದು.

(ಐ) ನಿಗದಿಪಡಿಸಲಾದ ದಿನಾಂಕದಂದು ಬಾಲಕನನ್ನು / ಮಗುವನ್ನು ಕರೆದೊಯ್ಯಲು ಆತನ ಸಂಬಂಧಿ ಅಥವಾ ಸೂಕ್ತ ವ್ಯಕ್ತಿಯು ಬರಲು ತಪ್ಪಿದರೆ, ಬಾಲಕನನ್ನು / ಮಗುವನ್ನು ಮಕ್ಕಳ ಗೃಹದ ಬೆಂಗಾವಲಿನವರು ಆತನ ನಿವಾಸದ ಸ್ಥಳಕ್ಕೆ ಕರೆದುಕೊಂಡು ಹೋಗತಕ್ಕದ್ದು. ಬಾಲಕಿಯಾಗಿರುವ ಸಂದರ್ಭದಲ್ಲಿ ಬೆಂಗಾವಲಿನವರ ಪೈಕಿ ಕಡೇಪಕ್ಷ ಒಬ್ಬರಾದರೂ ಮಹಿಳೆಯಾಗಿರತಕ್ಕದ್ದು.

(14) ವಿಚಾರಣೆಯ ಕಾಲಕ್ಕೆ, ಬಾಲಕನು/ ಮಗುವು ಸಮಿತಿಯ ಅಧಿಕಾರ ವ್ಯಾಪ್ತಿಯ ಹೊರಗೆ ಬರುವ ಸ್ಥಳಕ್ಕೆ ಸೇರಿದವನೆಂದು ಕಂಡುಬಂದರೆ, ಸಮಿತಿಯು, ಆ ಬಾಲಕನನ್ನು / ಮಗುವನ್ನು ಆ ಬಾಲಕನ / ಮಗುವಿನ ನಿವಾಸ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಕ್ಷಮ ಪ್ರಾಧಿಕಾರಕ್ಕೆ ವರ್ಗಾವಣೆ ಮಾಡಲು ಆದೇಶಿಸತಕ್ಕದ್ದು. ಹಾಗೆ ಮಾಡುವಾಗ, ಪ್ರಯಾಣಕ್ಕೆ ತಗಲುವ ವಾಸ್ತವ ಪ್ರಯಾಣ ವೆಚ್ಚ ಮತ್ತು ವಹಿಸಬೇಕಾಗಿರುವ ಇತರ ವೆಚ್ಚಗಳನ್ನು ಬಾಲಕನಿಗೆ / ಮಗುವಿಗೆ ಸಂದಾಯ ಮಾಡತಕ್ಕದ್ದು.

(15) (ಎ) ಕ್ರೌರ್ಯದಿಂದ, ಅಮಾನವೀಯವಾಗಿ ಅಥವಾ ಕೀಳಾಗಿ ನಡೆಸಿಕೊಳ್ಳುವ ಎಲ್ಲಾ ಶಿಸ್ತು ಕ್ರಮಗಳನ್ನು ಕಡ್ಡಾಯವಾಗಿ ನಿಷೇಧಿಸತಕ್ಕದ್ದು. ಇದರಲ್ಲಿ ಬಾಲಕನನ್ನು / ಮಗುವನ್ನು ಹೊಡೆಯುವಂಥ ದೈಹಿಕ ದಂಡನೆ, ಒಂದು ಕತ್ತಲೆ ಕೋಣೆಯಲ್ಲಿ ಇರಿಸುವುದು ಅಥವಾ ಮುಚ್ಚಿದ ಸ್ಥಳದಲ್ಲಿ ಅಥವಾ ಒಬ್ಬಂಟಿಯಾಗಿ ಇರಿಸುವುದು ಅಥವಾ ದೈಹಿಕ ಅಥವಾ ಮಾನಸಿಕ ಆರೋಗ್ಯಕ್ಕೆ ಅಥವಾ ಸಂಬಂಧಪಟ್ಟ ಬಾಲಕನಿಗೆ/ ಮಗುವಿಗೆ ಸಂಬಂಧಿಸಿದ ಶಿಕ್ಷಣಾವಕಾಶದ ಮೇಲೆ ಕೆಟ್ಟ ಪರಿಣಾಮ ಬೀರುವಂಥ ಇತರ ಯಾವುದೇ ದಂಡನೆಯೂ ಸೇರುತ್ತದೆ.

(ಬಿ) ಯಾವುದೇ ಉದ್ದೇಶದಿಂದ ಆಹಾರ ಪ್ರಮಾಣವನ್ನು ಕಡಿಮೆ ಮಾಡುವುದು ಮತ್ತು ಕುಟುಂಬದ ಸದಸ್ಯರೊಂದಿಗಿನ ಸಂಪರ್ಕವನ್ನು ನಿರ್ಬಂಧಿಸುವುದು ಅಥವಾ ನಿರಾಕರಿಸುವುದು - ಇವುಗಳನ್ನು ನಿಷೇಧಿಸತಕ್ಕದ್ದು. ದುಡಿಮೆಯನ್ನು ದಂಡನೆಯಾಗಿ ವಿಧಿಸತಕ್ಕದ್ದಲ್ಲ. ಯಾರೇ ಬಾಲಕನನ್ನು / ಮಗುವನ್ನು ಒಂದೇ ಅಪರಾಧಕ್ಕಾಗಿ ಒಂದಕ್ಕಿಂತ ಹೆಚ್ಚು ಬಾರಿ ಶಿಕ್ಷಿಸತಕ್ಕದ್ದಲ್ಲ. ಸಾಮೂಹಿಕ ಅಥವಾ ಸಮೂಹ ಶಿಕ್ಷೆಗಳನ್ನು ನಿಷೇಧಿಸತಕ್ಕದ್ದು.

(ಸಿ) ಎಲ್ಲ ಸಂಸ್ಥೆಗಳಲ್ಲಿ ಸಿಬ್ಬಂದಿಯವರು ಬೆತ್ತ, ಲಾಟಿ, ಸರಪಳಿ, ಬೆಲ್ಟ್, ಮೊದಲಾದಂಥ ಆಯುಧಗಳನ್ನು ಅಥವಾ ಹಿಂಸಾತ್ಮಕ ಉಪಕರಣಗಳನ್ನು ಅನಧಿಕೃತವಾಗಿ ಒಯ್ಯುವುದನ್ನು ಮತ್ತು ಬಳಸುವುದನ್ನು ಈ ಅಧಿನಿಯಮದ ಅಡಿಯಲ್ಲಿ ನಿಷೇಧಿಸತಕ್ಕದ್ದು.

(ಡಿ) ಸಂಬಂಧಪಟ್ಟ ವಿಷಯ ನಿರ್ವಾಹಕ ಅಥವಾ ಅಧೀಕ್ಷಕನು ಮಾತ್ರ ಶಿಕ್ಷೆಗಳನ್ನು ವಿಧಿಸಲು ಸಕ್ಷಮನಾದ ವ್ಯಕ್ತಿಯಾಗಿರತಕ್ಕದ್ದು. ಇತರ ಎಲ್ಲ ಸಿಬ್ಬಂದಿ ಹಾಗೂ ಮಕ್ಕಳು ಶಿಕ್ಷೆಗಳನ್ನು ವಿಧಿಸತಕ್ಕದ್ದಲ್ಲ.

(ಇ) ದುರ್ವರ್ತನೆಯ ಬಗ್ಗೆ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ನೀಡತಕ್ಕದ್ದು. ಅದು ಅನಗತ್ಯ ವಿಳಂಬ ಮಾಡದೆ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳತಕ್ಕದ್ದು. ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ಪ್ರಕರಣದ ಕೂಲಂಕಷ ಪರೀಕ್ಷೆಯನ್ನು ಮಾಡತಕ್ಕದ್ದು.

(ಎಫ್) ಯಾರೇ ಬಾಲಕನನ್ನು / ಮಗುವನ್ನು ಇತರ ಯಾರೇ ಬಾಲಕನಿಗೆ / ಮಗುವಿಗೆ ಶಿಕ್ಷೆಯನ್ನು ವಿಧಿಸಲು ಬಳಸಿಕೊಳ್ಳತಕ್ಕದ್ದಲ್ಲ.

**38. ತುರ್ತು ಪರಿಸ್ಥಿತಿಗಳು.–** (1) ಅಧೀಕ್ಷಕನು ಈ ಮುಂದಿನ ಸನ್ನಿವೇಶಗಳಲ್ಲಿ ತುರ್ತಾಗಿ ವ್ಯವಹರಿಸತಕ್ಕದ್ದು:–

(ಎ) ತಪ್ಪಿಸಿಕೊಂಡು ಓಡಿಹೋಗುವುದು

(ಬಿ) ಮರಣ ಅಥವಾ ಆತ್ಮಹತ್ಯೆ

(ಸಿ) ಅಭಿರಕ್ಷೆಯಲ್ಲಿರುವಾಗ ಸಂಭವಿಸಿದ ಅತ್ಯಾಚಾರ ಅಥವಾ ಲೈಂಗಿಕ ದುರುಪಯೋಗ

(ಡಿ) ಅಪಘಾತಗಳು

(ಇ) ಬೆಂಕಿ ಆಕಸ್ಮಿಕ

(ಎಫ್) ಸಾಂಕ್ರಾಮಿಕ ರೋಗಗಳು

(ಜಿ) ಆಹಾರ ವಿಷವಾಗುವಿಕೆ.

(2) ತಪ್ಪಿಸಿಕೊಂಡು ಓಡಿಹೋದ ಸಂದರ್ಭದಲ್ಲಿ, ಈ ಮುಂದಿನ ಕ್ರಮ ಕೈಗೊಳ್ಳತಕ್ಕದ್ದು.

(i) ಪರಿವೀಕ್ಷಣಾಧಿಕಾರಿ / ಅಧೀಕ್ಷಕನು, ಬಾಲಕನ / ಮಗುವಿನ ಶೋಧನೆಗಾಗಿ ರೈಲ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು, ಮಕ್ಕಳ ಮತ್ತು ಅವನು ಹೋಗುವ ಸಾಧ್ಯತೆ ಇರುವಂಥ ಗೃಹ/ ಇತರ ಸ್ಥಳಗಳಿಗೆ ಕಾವಲುಗಾರರನ್ನು ಕೂಡಲೇ ಕಳುಹಿಸತಕ್ಕದ್ದು;

(ii) ಹಾಗೆ ತಪ್ಪಿಸಿಕೊಂಡು ಹೋದ ಬಗ್ಗೆ ತಂದೆ ತಾಯಿಗಳಿಗೆ ಅಥವಾ ಪಾಲಕರಿಗೆ ಕೂಡಲೇ ತಿಳಿಸತಕ್ಕದ್ದು;

(iii) ಬಾಲಕನ / ಮಗುವಿನ ವಿವರಗಳು / ವಿವರಣೆಯೊಂದಿಗೆ, ಗುರುತು ಚಿಹ್ನೆಗಳು, ಭಾವಚಿತ್ರ, ತಂದೆ ತಾಯಿಯರ ವಿಳಾಸದ ವಿವರಗಳು (ಲಭ್ಯವಿದ್ದರೆ) ಇವುಗಳ ಸಹಿತ ಒಂದು ದೂರನ್ನು ಅಧಿಕಾರ ವ್ಯಾಪ್ತಿಯೊಳಗೆ ಇರುವ ಪೊಲೀಸು ಠಾಣೆಯಲ್ಲಿ ದಾಖಲು ಮಾಡತಕ್ಕದ್ದು. ಅದರ ಒಂದು ಪ್ರತಿಯನ್ನು ಬಾಲಕ ನ್ಯಾಯ ಮಂಡಲಿಗೆ ಮತ್ತು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನೀಡತಕ್ಕದ್ದು;

(iv) ಪರಿವೀಕ್ಷಣಾಧಿಕಾರಿಯು / ಅಧೀಕ್ಷಕನು ತಪ್ಪಿಸಿಕೊಂಡು ಹೋದ ಪ್ರತಿಯೊಂದು ಪ್ರಕರಣದ ಬಗ್ಗೆ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಆ ಘಟನೆಯು ಸಂಭವಿಸಿದ ಇಪ್ಪತ್ತನಾಲ್ಕು ಗಂಟೆಯೊಳಗಾಗಿ ಮಂಡಲಿಗೆ ಮತ್ತು ಸಂಬಂಧಪಟ್ಟ ಪ್ರಾಧಿಕಾರಕ್ಕೆ ತನ್ನ ವರದಿಯನ್ನು ಕಳುಹಿಸತಕ್ಕದ್ದು. ಯಾರೇ ಒಬ್ಬ ಬಾಲಕನು ಅಥವಾ ಮಗುವು ತಪ್ಪಿಸಿಕೊಂಡು ಓಡಿಹೋದ ಸಂದರ್ಭದಲ್ಲಿ, ಅಂಥ ಸಿಬ್ಬಂದಿಯು ಸದ್ಭಾವನೆಯಿಂದ ಕ್ರಮಕೈಗೊಂಡಿದ್ದರೆ, ಅದು ಸಂಸ್ಥೆಯ ಯಾವುದೇ ಸಿಬ್ಬಂದಿಯ ವೈಯಕ್ತಿಕ ಹೊಣೆಗಾರಿಕೆಯಾಗಿರತಕ್ಕದ್ದಲ್ಲ;

(v) ಬಾಲಕನು / ಮಗುವು, ಅನುಮತಿ ಇಲ್ಲದೆ ಗೃಹವನ್ನು ಬಿಟ್ಟು ಹೋದ ಸಂದರ್ಭದಲ್ಲಿ, ಆ ವಿಷಯವನ್ನು, ಪೊಲೀಸರಿಗೆ ಮತ್ತು ಅವನ ಕುಟುಂಬದವರಿಗೆ ತಿಳಿಸತಕ್ಕದ್ದು. ಬಾಲಕನನ್ನು / ಮಗುವನ್ನು ಪತ್ತೆ ಹಚ್ಚಲು ಮಾಡಿದ ಪ್ರಯತ್ನಗಳ ಪೂರ್ಣ ವಿವರಗಳನ್ನೊಳಗೊಂಡ ವರದಿಯನ್ನು ಸಮಿತಿಯ ನಂತರದ ಉಪವೇಶನದಲ್ಲಿ ಮಾಹಿತಿಗಾಗಿ ಸಮಿತಿಗೆ ಕಳುಹಿಸತಕ್ಕದ್ದು.

(3) ಮರಣ ಅಥವಾ ಆತ್ಮಹತ್ಯೆಯಂಥ ಯಾವುದೇ ಪ್ರಕರಣವು ಸಂಭವಿಸಿದಲ್ಲಿ ಈ ಮುಂದಿನಂತೆ ಕ್ರಮ ಕೈಗೊಳ್ಳತಕ್ಕದ್ದು:-

(i) ಒಬ್ಬ ಬಾಲಕನು ಅಥವಾ ಮಗುವು, ಸಂಸ್ಥೆಗೆ ಅವನನ್ನು ಸೇರಿಸಿದ ಇಪ್ಪತ್ತನಾಲ್ಕು ಗಂಟೆಯೊಳಗಾಗಿ ಆತ್ಮಹತ್ಯೆ, ಅಪಘಾತ, ಹಿಂಸಾತ್ಮಕ ಅಥವಾ ಹಠಾತ್ ಸಾವನ್ನಪ್ಪಿದರೆ, ಆದಷ್ಟು ಬೇಗ ಅದರ ಪಂಚನಾಮೆ ಮತ್ತು ಮರಣೋತ್ತರ ಪರೀಕ್ಷೆ ನಡೆಸತಕ್ಕದ್ದು;

(ii) ಒಂದು ಹಠಾತ್ ಅಥವಾ ಹಿಂಸಾತ್ಮಕ ಮರಣ ಅಥವಾ ಆತ್ಮಹತ್ಯೆಯಿಂದ ಅಥವಾ ಅಪಘಾತದಿಂದ ಮರಣ ಸಂಭವಿಸಿದಾಗಲೆಲ್ಲಾ ಅಧೀಕ್ಷಕನಿಗೆ, ಪೊಲೀಸ್ ಠಾಣೆಯ ಪ್ರಭಾರಿ ಅಧಿಕಾರಿಗೆ ಮತ್ತು ವೈದ್ಯಾಧಿಕಾರಿಗೆ ಕೂಡಲೇ ಮಾಹಿತಿ ನೀಡತಕ್ಕದ್ದು;

(iii) ಅಧೀಕ್ಷಕನು, ಪೊಲೀಸ್ ಅಧಿಕಾರಿಯು ಮತ್ತು ವೈದ್ಯಾಧಿಕಾರಿಯು, ಮೃತದೇಹವನ್ನು ಪರೀಕ್ಷಿಸತಕ್ಕದ್ದು. ಒಂದು ಮಗುವು ಸ್ವಾಭಾವಿಕ ಕಾರಣಗಳಲ್ಲದೆ ಇತರ ಕಾರಣಗಳಿಂದಾಗಿ ಮರಣ ಹೊಂದಿದರೆ ಅಥವಾ ಮರಣದ ಕಾರಣವು ಗೊತ್ತಿಲ್ಲದಿದ್ದರೆ ಅಥವಾ ಮರಣವು ಆತ್ಮಹತ್ಯೆ ಅಥವಾ ಹಿಂಸಾಚಾರ ಅಥವಾ ಅಪಘಾತದ ಕಾರಣದಿಂದ ಉಂಟಾಗಿದ್ದರೆ ಅಥವಾ ಯಾವುದೇ ಮಗುವಿನ ಮರಣದ ಕಾರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಸಂದೇಹ ಅಥವಾ ದೂರು ಅಥವಾ ಪ್ರಶ್ನೆ ಇದ್ದಾಗಲೆಲ್ಲಾ ಪೊಲೀಸರು ಮತ್ತು ಪ್ರಭಾರಿ ಅಧಿಕಾರಿಯು ಕೂಡಲೇ, ಪಂಚನಾಮೆ ನಡೆಸಲು ಅಧಿಕಾರ ಹೊಂದಿರುವ ಹತ್ತಿರದ ದಂಡಾಧಿಕಾರಿಗೆ ವಿಷಯ ತಿಳಿಸತಕ್ಕದ್ದು;

(iv) ಪಂಚನಾಮೆಯು ಮುಗಿದ ನಂತರ, ಪ್ರಕರಣಕ್ಕೆ ಸಂಬಂಧಪಟ್ಟ ಸ್ಥಿತಿಗತಿಗಳ ಬಗ್ಗೆ ಒಂದು ಸಂಪೂರ್ಣ ವರದಿಯನ್ನು ಅಧೀಕ್ಷಕನು, ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಗೆ ಸಲ್ಲಿಸತಕ್ಕದ್ದು;

(v) ಪರಿವೀಕ್ಷಣಾ ಗೃಹ ಅಥವಾ ವಿಶೇಷ ಗೃಹ ಅಥವಾ ಮಕ್ಕಳ ಗೃಹಗಳಲ್ಲಿ ಮಗುವು ಸ್ವಾಭಾವಿಕವಾಗಿ ಅಥವಾ ಕಾಯಿಲೆಯಿಂದಾಗಿ ಮರಣಹೊಂದಿದ ಸಂದರ್ಭದಲ್ಲಿ ಪರಿವೀಕ್ಷಣಾಧಿಕಾರಿ/ ಅಧೀಕ್ಷಕನು ಮರಣದ ಕಾರಣವನ್ನು ತಿಳಿಸುವ ಒಂದು ವರದಿಯನ್ನು ವೈದ್ಯಾಧಿಕಾರಿಯಿಂದ ಪಡೆಯತಕ್ಕದ್ದು ಮತ್ತು ಮರಣದ ಬಗ್ಗೆ ಒಂದು ಲಿಖಿತ ಮಾಹಿತಿಯನ್ನು ಕೂಡಲೇ ಸಂದರ್ಭಾನುಸಾರ, ಹತ್ತಿರದ ಪೊಲೀಸ್ ಠಾಣೆ, ಬಾಲಕ ನ್ಯಾಯ ಮಂಡಲಿ, ಮಕ್ಕಳ ಕಲ್ಯಾಣ ಸಮಿತಿಗೆ ತಿಳಿಸತಕ್ಕದ್ದು;

(vi) ಮಗುವು ಸಂಸ್ಥೆಯಲ್ಲಿದ್ದಾಗ, ಮರಣ ಹೊಂದಿದಾಗ, ಹತ್ತಿರದ ಸಂಬಂಧಿ ಲಭ್ಯವಿದ್ದರೆ ಅವನಿಗೆ ಕೂಡಲೇ ತಿಳಿಸಬೇಕು. ಅವನು ಶವವನ್ನು ನೋಡುವ ಮತ್ತು ಶವ ಸಂಸ್ಕಾರ ಮಾಡುವ ವಿಧಾನವನ್ನು ನಿರ್ಣಯಿಸುವ ಹಕ್ಕನ್ನು ಹೊಂದಿರತಕ್ಕದ್ದು;

(vii) ಮೃತ ಮಗುವಿನ ತಂದೆ ತಾಯಿ ಅಥವಾ ಪಾಲಕನನ್ನು ಸಂಪರ್ಕಿಸತಕ್ಕದ್ದು ಮತ್ತು ಅಧೀಕ್ಷಕನು ಸಂಬಂಧಿಕರು ಬರುವುದಕ್ಕಾಗಿ ಇಪ್ಪತ್ತನಾಲ್ಕು ಗಂಟೆಗಳ ಕಾಲ ಕಾಯತಕ್ಕದ್ದು. ಪಂಚನಾಮೆ ನಡೆಸಿದ ತರುವಾಯ, ಮಗುವು ಯಾವ ಧರ್ಮಕ್ಕೆ ಸೇರಿದ್ದೆಂದು ತಿಳಿದಿದೆಯೋ ಆ ಧರ್ಮಕ್ಕೆ ಅನುಸಾರವಾಗಿ ಶವಸಂಸ್ಕಾರ ಮಾಡತಕ್ಕದ್ದು.

(4) ಅಭಿರಕ್ಷೆಯಲ್ಲಿರುವಾಗ ಸಂಭವಿಸಿದ ಅತ್ಯಾಚಾರ ಮತ್ತು / ಅಥವಾ ಲೈಂಗಿಕ ದುರುಪಯೋಗ ಸಂದರ್ಭದಲ್ಲಿ ಈ ಮುಂದಿನಂತೆ ಕ್ರಮಕೈಗೊಳ್ಳತಕ್ಕದ್ದು:-

(i) ಯಾರೇ ನಿವಾಸಿ ಅಥವಾ ಇತರ ಯಾರೇ ವ್ಯಕ್ತಿಯು, ಲೈಂಗಿಕ ದುರಾಚಾರ ನಡೆದಿದೆ ಎಂಬುದನ್ನು ಗಮನಿಸಿದ್ದು, ತಿಳಿದಿದ್ದು ಅಥವಾ ಹಾಗೆ ಶಂಕಿಸಲು ಕಾರಣವಿದ್ದು ಕುಂದು ಕೊರತೆಗಳ ಪೆಟ್ಟಿಗೆಯ ಮೂಲಕ ಅಥವಾ ಮಕ್ಕಳ ಸಹಾಯವಾಣಿಯ ಮೂಲಕ ಅಥವಾ ಇತರ ಯಾವುದೇ ವಿಧಾನಗಳ ಮೂಲಕ ದೂರು ನೀಡಿದರೆ ಅಥವಾ ಪ್ರಭಾರಿ ಅಧಿಕಾರಿ / ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯು ಬಾಲಕನಲ್ಲಿ / ಮಗುವಿನಲ್ಲಿ ಈ ಮುಂದೆ ಹೇಳಿದ ಸಾಮಾನ್ಯ ವರ್ತನೆಯಲ್ಲಿ ಒಂದು ಅಥವಾ ಹೆಚ್ಚಿನ ಬದಲಾವಣೆಗಳನ್ನು ಗಮನಿಸಿದ ಸಂದರ್ಭದಲ್ಲಿ, ಲೈಂಗಿಕ ದುರಾಚಾರದ ಸಾಧ್ಯತೆಯ ಬಗ್ಗೆ ಒಂದು ವಿಶೇಷ ತನಿಖೆಯನ್ನು ನಡೆಸಲು ಬಾಲಕ ನ್ಯಾಯ ಮಂಡಲಿಯ ಮುಂದೆ ಒಂದು ವರದಿಯನ್ನು ಸಲ್ಲಿಸತಕ್ಕದ್ದು. ಅಂಥ ಅನುಮಾನಗಳನ್ನು ಕೂಡಲೇ ವರದಿ ಮಾಡುವುದು ಎಲ್ಲ ಸಿಬ್ಬಂದಿ ವರ್ಗದವರ ಜವಾಬ್ದಾರಿಯಾಗಿರತಕ್ಕದ್ದು. ವರದಿಯು, ವರ್ತನೆಯಲ್ಲಿ ಈ ಮುಂದಿನ ಹಠಾತ್ ಬದಲಾವಣೆಗಳಾದ ಬಗ್ಗೆ ನಿರ್ಣಯಗಳನ್ನು ಆಧರಿಸಿರತಕ್ಕದ್ದು:-

(ಎ) ವಯಸ್ಕರ ಲೈಂಗಿಕ ವರ್ತನೆಯ ಅನುಕರಣ;

(ಬಿ) ಇತರ ಮಕ್ಕಳೊಂದಿಗೆ, ಅವರವರೇ, ಗೊಂಬೆಗಳು ಅಥವಾ ಸಾಕು ಪ್ರಾಣಿಗಳೊಂದಿಗೆ ಸತತವಾಗಿ ಲೈಂಗಿಕ ಚಟುವಟಿಕೆ;

(ಸಿ) ಲೈಂಗಿಕ ತಿಳಿವಳಿಕೆಯಲ್ಲಿ ಭಾಷೆ ಅಥವಾ ವರ್ತನೆಯ ಮೂಲಕ ತಮ್ಮ ವಯಸ್ಸಿಗೆ ಮತ್ತು ಸಂದರ್ಭಗಳಿಗೆ ಸಹಜವಾದದ್ದಕ್ಕಿಂತ ಹೆಚ್ಚಿನ ಹಠಾತ್ ಬೆಳವಣಿಗೆ;

(ಡಿ) ಬಾಯಿಯಲ್ಲಿ / ಜನನೇಂದ್ರಿಯದಲ್ಲಿ ಅಥವಾ ಗುದದ್ವಾರದಲ್ಲಿ ವಿವರಿಸಲಾಗದಂಥ ನೋವು, ಊತ, ರಕ್ತಸ್ರಾವ ಅಥವಾ ಉರಿ, ಮೂತ್ರದಲ್ಲಿ ಸೋಂಕು, ಲೈಂಗಿಕವಾಗಿ ಹರಡುವ ರೋಗಗಳು;

(ಇ) ಅಂಥ ದುರುಪಯೋಗವಾದ ಬಗ್ಗೆ ಸುಳಿವು, ಪರೋಕ್ಷ ಟೀಕೆಗಳು ಅಥವಾ ಹೇಳಿಕೆಗಳು.

(ii) ಬಾಲಕ ನ್ಯಾಯ ಮಂಡಲಿಯು, ಭಾರತ ದಂಡ ಸಂಹಿತೆ, 1860 ರ (1860 ರ 45) ಉಪಬಂಧಗಳ ಅಡಿಯಲ್ಲಿ ತಪ್ಪಿತಸ್ಥನೆಂದು ಕಂಡುಬಂದ ವ್ಯಕ್ತಿ / ವ್ಯಕ್ತಿಗಳ ವಿರುದ್ಧ ಒಂದು ಮೊಕದ್ದಮೆಯನ್ನು ನೋಂದಾಯಿಸಲು ಸ್ಥಳೀಯ ಪೊಲೀಸ್ ಠಾಣೆ / ಬಾಲಕರ ವಿಶೇಷ ಪೊಲೀಸ್ ಘಟಕಕ್ಕೆ ನಿರ್ದೇಶಿಸತಕ್ಕದ್ದು. ಬಾಲಕರ ವಿಶೇಷ ಪೊಲೀಸ್ ಘಟಕವು, ತಜ್ಞ ಏಜೆನ್ಸಿಗಳ ಮೇಲ್ವಿಚಾರಣೆ ಅಡಿ ಅವಶ್ಯ ತನಿಖೆಗಳನ್ನು ನಡೆಸುವುದು. ಸಂಸ್ಥೆಯ ಒಬ್ಬ ಸಿಬ್ಬಂದಿಯು ಅದರಲ್ಲಿ ಷಾಮೀಲಾಗಿರುವನೆಂದು ಅನುಮಾನಬಂದರೆ, ಸಂಬಂಧಪಟ್ಟ ಸಿಬ್ಬಂದಿಯನ್ನು ಕೂಡಲೇ ಹೆಚ್ಚಿನ ವಿಚಾರಣೆಯು ಇತ್ಯರ್ಥವಾಗುವವರೆಗೆ ಕೂಡಲೇ ಅಮಾನತುಗೊಳಿಸತಕ್ಕದ್ದು;

(iii) (ಎ) ಮಗುವಿನ ಮೇಲೆ ಲೈಂಗಿಕ ದುರಾಚಾರ ನಡೆಸುತ್ತಿದ್ದನೆಂದು ಶಂಕಿಸಲಾದ ವ್ಯಕ್ತಿಯು ತಾನೇ ಸ್ವತಃ ಮಗುವಾಗಿದ್ದರೆ, ಆಗ ಆ ಮಗುವನ್ನು ಸಮಾಲೋಚನೆ/ ಸಲಹೆಗಾಗಿ ನಿಮ್ಹಾನ್ಸ್‌ಗೆ (ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರರೋಗ ವಿಜ್ಞಾನ ಸಂಸ್ಥೆ) ಕಳಿಸತಕ್ಕದ್ದು. ಅವರು ಸಮುಚಿತವಾದ ಕ್ರಮವನ್ನು ನಿಗದಿಪಡಿಸತಕ್ಕದ್ದು;

(ಬಿ) ಮಗುವು, ಸಂಸ್ಥೆಯನ್ನು ಬಿಟ್ಟ ತರುವಾಯ ಲೈಂಗಿಕ ದುರಾಚಾರದ/ ಅತ್ಯಾಚಾರದ ಬಗ್ಗೆ ಯಾರೇ ವ್ಯಕ್ತಿಗೆ ವರದಿ ಮಾಡಿದರೆ, ಆ ವ್ಯಕ್ತಿಯು ಆ ವಿಷಯವನ್ನು ಬಾಲಕ ನ್ಯಾಯ ಮಂಡಲಿಯ ಗಮನಕ್ಕೆ ತರತಕ್ಕದ್ದು. ಅದು, ಆ ತರುವಾಯ ಒಂದು ವಿಚಾರಣೆಯನ್ನು ನಡೆಸುವುದು.

(ಸಿ) ನಿವಾಸಿಗಳಿಗೆ ಸಂಬಂಧಿಸಿ ಇತರ ಯಾವುದೇ ಅಪರಾಧವು ಘಟಿಸಿದ ಸಂದರ್ಭದಲ್ಲಿ, ಬಾಲಕ ನ್ಯಾಯ ಮಂಡಲಿಯು, ಬಾಲಕರ ವಿಶೇಷ ಪೊಲೀಸು ಘಟಕವು ತಜ್ಞ ಏಜೆನ್ಸಿಗಳ ಮೇಲ್ವಿಚಾರಣೆಯಲ್ಲಿ ಅವಶ್ಯಕ ತನಿಖೆ ನಡೆಸಲು ವ್ಯವಸ್ಥೆಗೊಳಿಸುವುದು;

(ಡಿ) ದುರಾಚಾರಕ್ಕೆ ಒಳಗಾದ ಮಗುವಿಗೆ ಸರಿಯಾದ ಪಾಲನೆ ಮತ್ತು ದೈಹಿಕ/ ಮಾನಸಿಕ ಚಿಕಿತ್ಸೆ ದೊರಕಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಮತ್ತು ತನಿಖೆಯ ಅವಧಿಯಲ್ಲಿ ಮತ್ತೊಮ್ಮೆ ದುರಾಚಾರಕ್ಕೆ ಬಲಿಯಾಗುವುದನ್ನು ತಡೆಯಲು ಸಹ ಎಚ್ಚರಿಕೆ ವಹಿಸತಕ್ಕದ್ದು.

(5) ಬಾಲಕ / ಮಗು ಒಂದು ಅಪಘಾತದಿಂದಾಗಿ ಗಾಯಗೊಂಡ ಸಂದರ್ಭದಲ್ಲಿ, ಕೂಡಲೇ ವೈದ್ಯಕೀಯ ಚಿಕಿತ್ಸೆ ನೀಡತಕ್ಕದ್ದು ಮತ್ತು ಶೀಘ್ರವಾಗಿ ವಿಚಾರಣೆ ನಡೆಸತಕ್ಕದ್ದು ಮತ್ತು ಗಾಯಗೊಂಡ ಬಾಲಕನ / ಮಗುವಿನ ಮತ್ತು ಇತರ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲು ಮಾಡತಕ್ಕದ್ದು.

(6) ಒಂದು ಸಂಸ್ಥೆಯಲ್ಲಿ ಬೆಂಕಿ ಹೊತ್ತಿಕೊಳ್ಳುವುದರ ಅಥವಾ ಹರಡುವುದರ ವಿರುದ್ಧ ಎಲ್ಲಾ ಮುಂಜಾಗರೂಕತೆಯನ್ನು ತೆಗೆದುಕೊಳ್ಳತಕ್ಕದ್ದು. ಅಗ್ನಿಶಾಮಕ ದಳಕ್ಕೆ ತಕ್ಷಣ ವಿಷಯ ತಿಳಿಸತಕ್ಕದ್ದು ಮತ್ತು ಅಂಥ ನೆರವು ಬರುವವರೆಗೆ, ಬೆಂಕಿ ನಂದಿಸುವ ಪ್ರಯತ್ನ ನಡೆಸತಕ್ಕದ್ದು. ಬೆಂಕಿಯು ಸಂಸ್ಥೆಯ ಇತರ ಭಾಗಗಳಿಗೆ ಹರಡದಂತೆ ಮತ್ತು ಮಕ್ಕಳ ಹಾಗೂ ಸಿಬ್ಬಂದಿ ವರ್ಗದವರ ಜೀವಗಳಿಗೆ ಹಾನಿಯಾಗದಿರುವಂತೆ ಕ್ರಮ ಕೈಗೊಳ್ಳತಕ್ಕದ್ದು. ಅಧೀಕ್ಷಕನು ಜೀವಗಳನ್ನು ಮತ್ತು ಸ್ವತ್ತನ್ನು ಉಳಿಸಲು ತಾನು ಸೂಕ್ತವೆಂದು ಭಾವಿಸುವಂಥ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(7) ಕಾಲರಾ, ಟೈಫಾಯಿಡ್ ಜ್ವರ, ದಡಾರ, ಫ್ಲೂ ಜ್ವರ, ಹೆಪಟೈಟೀಸ್–ಬಿ, ಮುಂತಾದ ಸಾಂಕ್ರಾಮಿಕ ರೋಗಗಳು ಸಂಸ್ಥೆಯಲ್ಲಿ ಹರಡುವ ಸಂಭವವಿರುತ್ತದೆ. ಸಂಸ್ಥೆಯಲ್ಲಿ ಸಾಂಕ್ರಾಮಿಕ ರೋಗ ಹರಡಿದಾಗ ಆ ಬಗ್ಗೆ ತುರ್ತಾಗಿ ವ್ಯವಹರಿಸಬೇಕಾಗುತ್ತದೆ. ಅಧೀಕ್ಷಕನು ಮತ್ತು ವೈದ್ಯಾಧಿಕಾರಿಯು ಈ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(8) ಆಹಾರ ವಿಷವಾಗಿ ಪರಿಣಮಿಸುವುದು, ನೀರು / ವಿದ್ಯುಚ್ಛಕ್ತಿ ಸರಬರಾಜು/ ಬೆಳಕಿನ ವ್ಯವಸ್ಥೆಗಳು / ನಿರ್ಮಲೀಕರಣ / ಕೊಳಾಯಿ ಕಾಮಗಾರಿಗಳು ಮೊದಲಾದವುಗಳಂಥ ಅತ್ಯಗತ್ಯ ಸೇವೆಗಳ ವಿಫಲತೆ, ಆಹಾರ ಪದಾರ್ಥಗಳು ಅಥವಾ ಕಚ್ಚಾ ಸಾಮಗ್ರಿಗಳನ್ನು ಸರಬರಾಜು ಮಾಡದಿರುವುದು

– ಇವೆಲ್ಲಾ ಸಂಸ್ಥೆಯ ದಿನಚರಿಯು ಏರುಪೇರಾಗಲು ಕಾರಣವಾಗುತ್ತದೆ.

**39. ಮಕ್ಕಳ ಗೃಹಗಳ / ಬಾಲಕ ಗೃಹಗಳ / ವಿಶೇಷ ಗೃಹಗಳ ಪ್ರಭಾರ ಹೊಂದಿರುವ ಪರಿವೀಕ್ಷಣಾಧಿಕಾರಿಯ/ ಅಧೀಕ್ಷಕನ ಕರ್ತವ್ಯಗಳು.–** (1) ಪರಿವೀಕ್ಷಣಾಧಿಕಾರಿಯು / ಅಧೀಕ್ಷಕನು ಈ ಮುಂದಿನ ಕರ್ತವ್ಯಗಳನ್ನು ಮತ್ತು ಹೊಣೆಗಾರಿಕೆಗಳನ್ನು ಪಾಲಿಸತಕ್ಕದ್ದು:–

(ಎ) ಮಗುವಿನ ಹಕ್ಕುಗಳನ್ನು ರಕ್ಷಿಸಲಾಗಿದೆ ಮತ್ತು ನಿಯಮಗಳಲ್ಲಿ ನಿರೂಪಿಸಲಾಗಿರುವ ಎಲ್ಲ ಕಾರ್ಯವಿಧಾನಗಳನ್ನು ಪಾಲಿಸಲಾಗಿದೆ ಎಂಬ ಬಗ್ಗೆ ಖಚಿತಗೊಳಿಸುವುದು;

(ಬಿ) ಮಕ್ಕಳಿಗೆ ಪ್ರೀತಿ, ಆತ್ಮೀಯತೆ, ಪಾಲನೆ, ಕ್ಷೇಮಾಭಿವೃದ್ಧಿ – ಇವುಗಳಿಂದ ಕೂಡಿದ ಮನೆಯ ವಾತಾವರಣವನ್ನು ಒದಗಿಸುವುದು;

(ಸಿ) ಸಂಸ್ಥೆಯ ಎಲ್ಲ ಕಾರ್ಯಚಟುವಟಿಕೆಗಳು, ಕಾರ್ಯಕ್ರಮಗಳು – ಇವುಗಳನ್ನು ರೂಪಿಸುವುದು, ಜಾರಿಗೊಳಿಸುವುದು ಮತ್ತು ಸಮನ್ವಯಗೊಳಿಸುವುದು;

(ಡಿ) ಬಾಲಕರ / ಮಕ್ಕಳ ಶಿಸ್ತು ಮತ್ತು ಕ್ಷೇಮದ ಬಗ್ಗೆ ಮೇಲ್ವಿಚಾರಣೆ ಮಾಡುವುದು;

(ಇ) ಗೃಹದಲ್ಲಿ ಕನಿಷ್ಠ ಗುಣಮಟ್ಟವನ್ನು ನಿರ್ವಹಿಸುವುದು;

(ಎಫ್) ಬಾಲಕರ / ಮಕ್ಕಳ ತರಬೇತಿ ಮತ್ತು ಚಿಕಿತ್ಸಾ ಕಾರ್ಯಕ್ರಮಗಳು ಮತ್ತು ಅವರನ್ನು ತಿದ್ದುವ ಕಾರ್ಯ ಚಟುವಟಿಕೆಗಳ ಮೇಲ್ವಿಚಾರಣೆ ಮಾಡುವುದು;

(ಜಿ) ಸಿಬ್ಬಂದಿಗಳಿಗೆ ಕರ್ತವ್ಯಗಳ ಹಂಚಿಕೆ ಮಾಡುವುದು;

(ಎಚ್) ಪ್ರತಿಯೊಂದು ಮಗುವಿಗೆ ಸಂಬಂಧಿಸಿದ ವರದಿಗಳನ್ನು ಮತ್ತು ಪ್ರಕರಣದ ಕಡತಗಳನ್ನು ಇಟ್ಟುಕೊಂಡು ಬರುವುದು;

(ಐ) ಸಿಬ್ಬಂದಿ ವರ್ಗದ ಕಲ್ಯಾಣ ಮತ್ತು ನೌಕರರ ಶಿಸ್ತನ್ನು ಗಮನಿಸುವುದು;

(ಜೆ) ಆಯವ್ಯಯ ಪತ್ರ ಸಿದ್ಧಪಡಿಸುವುದು ಮತ್ತು ಹಣಕಾಸು ವಿಷಯಗಳ ಮೇಲೆ ನಿಯಂತ್ರಣ ಹೊಂದಿರುವುದು;

(ಕೆ) ಆಹಾರ ಪದಾರ್ಥಗಳ ಸೂಕ್ತ ಸಂಗ್ರಹಣೆ ಮತ್ತು ಪರಿಶೀಲನೆ;

(ಎಲ್) ನೀರು ಸಂಗ್ರಹಣೆ, ದೀಪ ವ್ಯವಸ್ಥೆ ಮೊದಲಾದುವುಗಳು ವಿಫಲಗೊಂಡಾಗ ತುರ್ತು ಬದಲಿ ವ್ಯವಸ್ಥೆಗಳನ್ನು ಮಾಡುವುದು;

(ಎಂ) ಅಪಘಾತ ಮತ್ತು ಅಗ್ನಿ ತಡೆ ಕ್ರಮಗಳು;

(ಎನ್) ಕಚೇರಿ ಆಡಳಿತದ ಮೇಲಿನ ಮೇಲ್ವಿಚಾರಣೆ;

(ಒ) ಕಚೇರಿಯ ಮಾಸಿಕ ಪರಿಶೀಲನೆ;

(ಪಿ) ಸಂಸ್ಥೆಯ ದೈನಂದಿನ ತಪಾಸಣೆ ಮತ್ತು ತನಿಖೆಗಾಗಿ ಭೇಟಿಮಾಡುವುದು;

(ಕ್ಯೂ) ಬಾಲಕ/ ಮಗುವಿಗಾಗಿ ತಯಾರಿಸಲಾದ ಆಹಾರವನ್ನು ಪರಿಶೀಲಿಸುವುದು ಮತ್ತು ರುಚಿನೋಡುವುದು;

(ಆರ್) ತುರ್ತು ಸಂದರ್ಭಗಳನ್ನು ನಿಭಾಯಿಸಲು ಕ್ಷಿಪ್ರ ಪ್ರಯತ್ನ ಮಾಡುವುದು;

(ಎಸ್) ಯುಕ್ತ ಪುನರ್ವಸತಿ ಕ್ರಮಗಳನ್ನು ಕೈಗೊಳ್ಳುವುದು;

(ಟಿ) ಬಾಲಕರ / ಮಕ್ಕಳ ಶಿಸ್ತು ಮತ್ತು ನೈತಿಕ ಹಿತದ ಬಗ್ಗೆ ಮೇಲ್ವಿಚಾರಣೆ;

(ಯು) ವಾರಕ್ಕೊಮ್ಮೆ ರಾತ್ರಿ ವೇಳೆಯಲ್ಲಿ ಸಂಸ್ಥೆಗಳ ತಪಾಸಣೆ;

(ವಿ) ಅಂಕಿ–ಅಂಶಗಳ ಸೂಕ್ತ ನಿರ್ವಹಣೆ, ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನಿಯತ ಕಾಲಿಕ ವರದಿಗಳನ್ನು ಕಳುಹಿಸುವುದು;

(ಡಬ್ಲ್ಯೂ) ರಾಜ್ಯ ಸರ್ಕಾರವು ಕಾಲಕಾಲಕ್ಕೆ ವಿಧಿಸುವ ಇತರ ಕರ್ತವ್ಯಗಳು, ಪ್ರಕಾರ್ಯಗಳು ಮತ್ತು ಹೊಣೆಗಾರಿಕೆಗಳು.

(2) (ಎ) 13ನೇ ಪ್ರಕರಣದ (ಬಿ) ಖಂಡದ ಅಡಿಯಲ್ಲಿ ವಿಶೇಷ ಪೊಲೀಸ್ ಘಟಕದ ಪ್ರಭಾರಿ ಅಧಿಕಾರಿಯಿಂದ ಮಾಹಿತಿಯನ್ನು ಸ್ವೀಕರಿಸಿದ ತರುವಾಯ, ಪರಿವೀಕ್ಷಣಾಧಿಕಾರಿಯು ಬಾಲಕನ / ಮಗುವಿನ ಪೂರ್ವ ವೃತ್ತಾಂತ ಮತ್ತು ಕುಟುಂಬದ ಚರಿತ್ರೆಯನ್ನು ಮತ್ತು ಅಗತ್ಯವಿರಬಹುದಾದಂಥ ಇತರ ಮುಖ್ಯ ಸನ್ನಿವೇಶದ ವಿಚಾರಣೆ ಮಾಡತಕ್ಕದ್ದು ಮತ್ತು ಸಾಧ್ಯವಾದಷ್ಟು ಬೇಗನೆ, ಸಾಮಾಜಿಕ ತನಿಖಾ ವರದಿಯನ್ನು ನಮೂನೆ IX ರಲ್ಲಿ ಮಂಡಲಿಗೆ ಸಲ್ಲಿಸತಕ್ಕದ್ದು.

(ಬಿ) ಪ್ರತಿಯೊಬ್ಬ ಪರಿವೀಕ್ಷಣಾಧಿಕಾರಿಯು, ಮಂಡಲಿ / ಸಮಿತಿ ಅಥವಾ ಸಂಬಂಧಪಟ್ಟ ಪ್ರಾಧಿಕಾರವು ನೀಡಿದ ಎಲ್ಲ ನಿರ್ದೇಶನಗಳನ್ನು ಪಾಲಿಸತಕ್ಕದ್ದು ಮತ್ತು ಈ ಮುಂದಿನ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು:–

(i) ತಮ್ಮ ಮೇಲ್ವಿಚಾರಣೆಯಡಿ ಇರುವ ಬಾಲಕ/ ಮಗುವಿನ ಗೃಹ ಮತ್ತು ಶಾಲಾ ಸ್ಥಿತಿಗತಿ, ಅವನ ನಡತೆ ಚಾರಿತ್ರ್ಯ ಮತ್ತು ಆರೋಗ್ಯಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸುವುದು;

(ii) ಬಾಲಕ ನ್ಯಾಯ ಮಂಡಲಿಯ ನಡೆವಳಿಗಳಲ್ಲಿ ನಿಯತವಾಗಿ ಭಾಗವಹಿಸುವುದು ಮತ್ತು ವರದಿಗಳನ್ನು ಒಪ್ಪಿಸುವುದು;

(iii) ಕಾಲಕಾಲಕ್ಕೆ ನಿಯಮಿಸಬಹುದಾದಂಥ ದಿನಚರಿ, ವಿಷಯ ಕಡತಗಳು ಮತ್ತು ರಿಜಿಸ್ಟರುಗಳನ್ನು ಇಟ್ಟುಕೊಂಡು ಬರುವುದು;

(iv) ತಮ್ಮ ಮೇಲ್ವಿಚಾರಣೆಯಡಿ ಇರುವ ಬಾಲಕನ/ ಮಗುವಿನ ನಿವಾಸಕ್ಕೆ ಮತ್ತು ಆತನು ಕೆಲಸ ಮಾಡುವ ಸ್ಥಳಗಳಿಗೆ ಅಥವಾ ಅಂತಹ ಮಕ್ಕಳು ಹೋಗುತ್ತಿರುವ ಶಾಲೆಗೆ ನಿಯತವಾಗಿ ಭೇಟಿ ನೀಡುವುದು ಮತ್ತು ಆ ಬಗ್ಗೆ ನಮೂನೆ XIV ರಲ್ಲಿ ನಿಯಮಿಸಲಾದಂತೆ ಪಾಕ್ಷಿಕ ವರದಿಗಳನ್ನು ನಿಯತವಾಗಿ ಸಲ್ಲಿಸುವುದು;

(v) ಸಾಧ್ಯವಿರುವಲ್ಲೆಲ್ಲಾ, ಮಂಡಲಿಯ ಕಚೇರಿಯಿಂದ, ಸಂದರ್ಭಾನುಸಾರ ಪರಿವೀಕ್ಷಣಾ ಗೃಹ, ವಿಶೇಷ ಗೃಹ, ಮಕ್ಕಳ ಗೃಹ ಅಥವಾ ಸೂಕ್ತ ವ್ಯಕ್ತಿಯ ಬಳಿಗೆ ಬಾಲಕನೊಂದಿಗೆ / ಮಗುವಿನೊಂದಿಗೆ ಹೋಗುವುದು;

(vi) ಮೇಲ್ವಿಚಾರಣಾ ಅವಧಿಯಲ್ಲಿ ಉತ್ತಮ ನಡವಳಿಕೆಯಿಲ್ಲದ ಮಕ್ಕಳನ್ನು ಕೂಡಲೇ ಮಂಡಲಿ / ಸಮಿತಿಯ ಮುಂದೆ ಕರೆ ತರುವುದು;

(vii) ಸಂಸ್ಥೆಗಳಿಂದ ಬಾಲಕನ / ಮಗುವಿನ ಬಿಡುಗಡೆಯಾದ ತರುವಾಯ, ಅವರ ಬಗ್ಗೆ ಅನುಸರಣಾ ಕ್ರಮ ಕೈಗೊಳ್ಳುವುದು ಮತ್ತು ಅವರಿಗೆ ಸಹಾಯ ಮತ್ತು ಮಾರ್ಗದರ್ಶನವನ್ನು ನೀಡುವುದು;

(viii) ಮಕ್ಕಳ ಪುನರ್ವಸತಿ ಮತ್ತು ಸಾಮಾಜಿಕ ಪುನರ್ ಸಂಯೋಜನಾ ಸೌಲಭ್ಯಗಳನ್ನು ಕಲ್ಪಿಸುವ ಸಲುವಾಗಿ ಸ್ವಯಂ ಸೇವಕರು ಮತ್ತು ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಸಂಪರ್ಕವಿಟ್ಟುಕೊಳ್ಳುವುದು ಮತ್ತು ಅಗತ್ಯವಾದ ಅನುಸರಣಾ ಕ್ರಮಗಳ ಬಗ್ಗೆ ಖಚಿತಪಡಿಸಿಕೊಳ್ಳುವುದು;

(ix) ಮಕ್ಕಳಿಗೆ ನಿರ್ದಿಷ್ಟ ಗುಣಮಟ್ಟದ ಪ್ರಕಾರ ಆಹಾರ ಮತ್ತು ಉಡುಪಿನ ಅಗತ್ಯವನ್ನು ಪೂರೈಸಲಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು;

(x) ಆವರಣಗಳ ಸ್ವಚ್ಛತೆಯ ಬಗ್ಗೆ ಮತ್ತು ನೀರು ಮತ್ತು ವಿದ್ಯುಚ್ಛಕ್ತಿ ಅನುಕೂಲಗಳೂ ಸೇರಿದಂತೆ ಮೂಲಭೂತ ಸೌಲಭ್ಯಗಳ ನಿರ್ವಹಣೆಯ ಬಗ್ಗೆ ಖಚಿತಪಡಿಸಿಕೊಳ್ಳುವುದು;

(xi) ಪುನಶ್ಚೇತನ, ಮೇಲ್ವಿಚಾರಣೆ, ಶಿಕ್ಷಣ, ವೃತ್ತೀಯ ಮತ್ತು ಪುನರ್ವಸತಿ ಕಾರ್ಯಕ್ರಮಗಳಿಗೆ ಅನುಕೂಲ ಕಲ್ಪಿಸುವುದು;

(xii) ಬಿಡುಗಡೆಯ ತರುವಾಯ ಮಕ್ಕಳಿಗೆ ಭಾವನಾತ್ಮಕವಾದ ಮತ್ತು ಸಾಮಾಜಿಕ ಬೆಂಬಲ ದೊರೆಯುವಂತಾಗಲು, ಅವರಿಗೆ ಬಿಡುಗಡೆಪೂರ್ವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸಂಪರ್ಕಗಳನ್ನು ಸಾಧಿಸಲು ಅವರಿಗೆ ನೆರವು ನೀಡುವುದು.

(ಸಿ) ಪರಿವೀಕ್ಷಣಾಧಿಕಾರಿಯು / ಅಧೀಕ್ಷಕನು ಅಥವಾ ಇತರ ಸಿಬ್ಬಂದಿಯು ತಮ್ಮ ಮೇಲ್ವಿಚಾರಣೆಯಲ್ಲಿರುವ ಮಕ್ಕಳನ್ನು ತಮ್ಮ ಸ್ವಂತ ಉದ್ದೇಶಗಳಿಗಾಗಿ ನಿಯೋಜಿಸಿಕೊಳ್ಳತಕ್ಕದ್ದಲ್ಲ ಅಥವಾ ಅವರಿಂದ ಯಾವುದೇ ಖಾಸಗಿ ಸೇವೆಯನ್ನು ಪಡೆಯತಕ್ಕದ್ದಲ್ಲ.

(3) ವಿಷಯ ನಿರ್ವಾಹಕರ / ಮಕ್ಕಳ ಕಲ್ಯಾಣ ಅಧಿಕಾರಿಯ ಸಾಮಾನ್ಯ ಕರ್ತವ್ಯಗಳು, ಪ್ರಕಾರ್ಯಗಳು ಮತ್ತು ಹೊಣೆಗಾರಿಕೆಗಳು ಈ ಮುಂದಿನಂತಿವೆ:-

(ಎ) ಬಾಲಕನನ್ನು/ ಮಗುವನ್ನು ವೈಯಕ್ತಿಕ ಸಂದರ್ಶನ ಮಾಡುವ ಮೂಲಕ ಮತ್ತು ಕುಟುಂಬ, ಸಾಮಾಜಿಕ ಏಜೆನ್ಸಿಗಳು ಮತ್ತು ಇತರ ಮೂಲಗಳ ಮೂಲಕ ಸಾಮಾಜಿಕ ತನಿಖೆ ನಡೆಸುವುದು;

(ಬಿ) ಬಾಲಕನ/ ಮಗುವಿನ ಸಮಸ್ಯೆಗಳ ಸ್ಪಷ್ಟ ಚಿತ್ರಣ ಪಡೆಯುವುದು, ಸಂಸ್ಥೆಯಲ್ಲಿರುವಾಗ ಅವರ ಜೀವನದಲ್ಲಿ ಎದುರಿಸುವ ತೊಂದರೆಗಳ ಬಗ್ಗೆ ವ್ಯವಹರಿಸುವುದು;

(ಸಿ) ಪುನಶ್ಚೇತನ, ಮೇಲ್ವಿಚಾರಣೆ, ಶಿಕ್ಷಣ, ವೃತ್ತೀಯ ಮತ್ತು ಪುನರ್ವಸತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು;

(ಡಿ) ಬಾಲಕನ/ ಮಗುವಿನ ಮತ್ತು ಆಡಳಿತ ವರ್ಗದ ನಡುವೆ ಸಹಕಾರ ಮತ್ತು ತಿಳಿವಳಿಕೆ ಮೂಡಿಸುವುದು;

(ಇ) ಬಾಲಕನು/ ಮಗುವು ತನ್ನ ಕುಟುಂಬದೊಡನೆ ಸಂಪರ್ಕ ಹೊಂದಲು ನೆರವು ನೀಡುವುದು ಮತ್ತು ಆ ಬಗ್ಗೆ ಕುಟುಂಬದ ಸದಸ್ಯರಿಗೆ ಸಹ ನೆರವು ನೀಡುವುದು;

(ಎಫ್) ಬಿಡುಗಡೆ ಪೂರ್ವ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಬಾಲಕನು/ ಮಗುವು ನೆರವು ನೀಡುವುದು ಇದರಿಂದ ಬಿಡುಗಡೆಯ ತರುವಾಯ ಬಾಲಕನಿಗೆ/ ಮಗುವಿಗೆ ಭಾವನಾತ್ಮಕವಾದ ಮತ್ತು ಸಾಮಾಜಿಕ ಬೆಂಬಲ ದೊರೆಯುವಂತಾಗಲು ಸಂಪರ್ಕಗಳನ್ನು ಸಾಧಿಸಲು ಅವರಿಗೆ ನೆರವು ನೀಡುವುದು.

(4) ಹೌಸ್ ಫಾದರ್ / ಹೌಸ್ ಮದರ್ ಇವರ ಸಾಮಾನ್ಯ ಕರ್ತವ್ಯಗಳು, ಪ್ರಕಾರ್ಯಗಳು ಮತ್ತು ಹೊಣೆಗಾರಿಕೆಗಳು ಈ ಮುಂದಿನಂತಿರತಕ್ಕದ್ದು:-

(ಎ) ಬಾಲಕನನ್ನು/ ಮಗುವನ್ನು ಪ್ರೀತಿ ಮತ್ತು ಆತ್ಮೀಯತೆಯಿಂದ ನೋಡಿಕೊಳ್ಳುವುದು;

(ಬಿ) ಸರಿಯಾದ ರೀತಿಯಲ್ಲಿ ಬಾಲಕನ/ ಮಗುವಿನ ಪಾಲನೆ ಮತ್ತು ಯೋಗಕ್ಷೇಮ ನೋಡಿಕೊಳ್ಳುವುದು;

(ಸಿ) ಬಾಲಕರು / ಮಕ್ಕಳಲ್ಲಿ ಶಿಸ್ತು ಮೂಡಿಸುವುದು;

(ಡಿ) ನೈರ್ಮಲ್ಯ ಮತ್ತು ಆರೋಗ್ಯವನ್ನು ಕಾಪಾಡಿಕೊಂಡು ಬರುವುದು;

(ಇ) ದಿನನಿತ್ಯದ ಕೆಲಸಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದು;

(ಎಫ್) ಬಾಲಕರಿಗೆ / ಮಕ್ಕಳಿಗೆ ಆಹಾರ ನೀಡುವ ಸಮಯದಲ್ಲಿ ಹಾಜರಿರುವುದು;

(ಜಿ) ಗೃಹದ ಭದ್ರತೆ ಮತ್ತು ಸುರಕ್ಷತೆಯ ವ್ಯವಸ್ಥೆಗಳನ್ನು ನೋಡಿಕೊಳ್ಳುವುದು;

(ಹೆಚ್) ಸಂಸ್ಥೆಯ ಪ್ರಭಾರಿ ಅಧಿಕಾರಿಯು ವಹಿಸಿದ ಇತರ ಯಾವುವೇ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳನ್ನು ನಿರ್ವಹಿಸುವುದು.

(5) (i) ರಾಜ್ಯ ಸರ್ಕಾರವು / ಪ್ರಭಾರಿ ಅಧಿಕಾರಿಯು, ಸಿಬ್ಬಂದಿಯವರ ಶಾಸನಾತ್ಮಕ ಹೊಣೆಗಾರಿಕೆಗಳು ಮತ್ತು ನಿರ್ದಿಷ್ಟ ಕೆಲಸಗಳ ಅಗತ್ಯತೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಸಿಬ್ಬಂದಿಯ ಪ್ರತಿಯೊಂದು ಪ್ರವರ್ಗಕ್ಕಾಗಿ ಸಿಬ್ಬಂದಿ ತರಬೇತಿಗೆ ವ್ಯವಸ್ಥೆ ಮಾಡುವುದು. ತರಬೇತಿ ಕಾರ್ಯಕ್ರಮವು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು:-

(ಎ) ಹೊಸದಾಗಿ ನೇಮಕ ಹೊಂದಿದ ಸಿಬ್ಬಂದಿಯ ಪುನಶ್ಚೇತನ ಮತ್ತು ತರಬೇತಿ;

(ಬಿ) ಕಡೇ ಪಕ್ಷ ಮೂರು ವರ್ಷಗಳಿಗೊಮ್ಮೆಯಾದರೂ ಪ್ರತಿಯೊಬ್ಬ ಸಿಬ್ಬಂದಿಗೆ ಪುನರ್ಮನನ ತರಬೇತಿ ಕ್ರಮಗಳು;

(ಸಿ) ಸಂಸ್ಥೆಯ ವಿವಿಧ ಮಟ್ಟಗಳಲ್ಲಿ / ಬಾಲಕ ನ್ಯಾಯ ಪದ್ಧತಿಗೆ ಸರ್ಕಾರ ಮೊದಲಾದುವುಗಳ ವಿವಿಧ ಘಟಕಗಳು ಕಾರ್ಯಕರ್ತರ ಸಹಯೋಗದೊಂದಿಗೆ ಸಿಬ್ಬಂದಿ ಸಮ್ಮೇಳನಗಳು, ವಿಚಾರ ಸಂಕಿರಣಗಳು, ಕಾರ್ಯಾಗಾರಗಳ ಏರ್ಪಾಡು;

(ii) ಮಕ್ಕಳ ಮನೋವಿಜ್ಞಾನ ಮತ್ತು ಬಾಲಕನ / ಮಗುವಿನ ಅಭಿರುಚಿಯಲ್ಲಿ ಮತ್ತು ಮಕ್ಕಳ ವಿಕಾಸದಲ್ಲಿ ಮುಖ್ಯೋಪಾಧ್ಯಾಯರಿಗೆ, ಶಿಕ್ಷಕರಿಗೆ ಮತ್ತು ಕುಶಲಕಲಾ ಬೋಧಕರಿಗೆ ಸೂಕ್ತ ಪುನಶ್ಚೇತನ ಮತ್ತು ತರಬೇತಿ ನೀಡಲಾಗುವುದು. ಮೇಲಿನವುಗಳ ಜೊತೆಗೆ, ಯಂತ್ರಗಳ ನಿರ್ವಹಣೆಯಲ್ಲಿನ ಹೊಸ ತಂತ್ರಜ್ಞಾನವನ್ನು ಪಡೆಯಲು ಕುಶಲಕಲಾ ಬೋಧಕರನ್ನು, ವಿವಿಧ ಸಂಸ್ಥೆಗಳು, ಕಾರ್ಖಾನೆಗಳು, ಕಾರ್ಯಾಗಾರಗಳಿಗೆ ಪ್ರತಿಯೋಜಿಸತಕ್ಕದ್ದು.

(iii) ಗೃಹಗಳ ಸಿಬ್ಬಂದಿಯು ಅಧೀಕ್ಷಕನ ಸಮಗ್ರ ಮೇಲ್ವಿಚಾರಣೆಗೊಳಪಟ್ಟಿರತಕ್ಕದ್ದು ಮತ್ತು ಆತನು ನಿರ್ದಿಷ್ಟ ಹೊಣೆಗಾರಿಕೆಗಳನ್ನು ಆದೇಶದ ಮೂಲಕ ನಿರ್ಧರಿಸತಕ್ಕದ್ದು ಮತ್ತು ಕಾಲಕಾಲಕ್ಕೆ ತಾನು ಜಾರಿಗೊಳಿಸಿದಂಥ ಆದೇಶಗಳನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. ತನ್ನ ಅಧೀನದಲ್ಲಿ ಬರುವ ಸಿಬ್ಬಂದಿಯ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳನ್ನು ಸದರಿ ಅಧಿನಿಯಮದ ಶಾಸನಾತ್ಮಕ ಅಗತ್ಯತೆಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು. ಅಧೀಕ್ಷಕನು ಮತ್ತು ಅವಶ್ಯಕವೆನಿಸಬಹುದಾದ ಇತರ ಸಿಬ್ಬಂದಿಯು, ಗೃಹದ ಆವರಣದಲ್ಲಿ, ಅವರಿಗೆ ಒದಗಿಸಲಾದ ವಸತಿ ಗೃಹಗಳಲ್ಲಿ ವಾಸಿಸತಕ್ಕದ್ದು.

**40. ವಿಶೇಷ ಅಗತ್ಯತೆಗಳಿರುವ ಮಕ್ಕಳು.-** (1) ರಾಜ್ಯ ಸರ್ಕಾರವು, ನಿರಾಶ್ರಿತ, ಮಾನಸಿಕವಾಗಿ ದೋಷಪೂರ್ಣ ವಾಗಿರುವ ಅಸ್ವಸ್ಥ ಮಕ್ಕಳು ಮತ್ತು ಅಂಗವಿಕಲ ಮಕ್ಕಳಿಗಾಗಿ ಒಂದು ಗೃಹವನ್ನು ನಡೆಸತಕ್ಕದ್ದು. ಈ ಮಕ್ಕಳ ಗೃಹವು, ಸ್ಥಳೀಯ ಸಮುದಾಯ, ಸರ್ಕಾರೇತರ ಸಂಸ್ಥೆಗಳ ಸಹಕಾರ ಪಡೆದ ಒಂದು ಸಮಗ್ರ ಪಾಲನಾ ಮತ್ತು ಪುನರ್ವಸತಿ ಕೇಂದ್ರವಾಗಿರತಕ್ಕದ್ದು ಮತ್ತು ತಜ್ಞರ / ವಿದ್ಯಾ ವಿಷಯಕ ನಿಕಾಯಗಳ ಮಾಹಿತಿಯಿಂದ ಕೂಡಿದ ವಿಶೇಷ ತಜ್ಞ ಸೇವೆಗಳನ್ನು ಒಳಗೊಂಡಿರತಕ್ಕದ್ದು.

(2) ಸಕ್ಷಮ ಪ್ರಾಧಿಕಾರವು, ವಿಶೇಷ ಅಗತ್ಯತೆಗಳಿರುವ ಮಕ್ಕಳಿಗೆ ವಿಶೇಷ ಸೇವೆಗಳನ್ನು ಒದಗಿಸುವಂಥ ಸಂಸ್ಥೆಗಳನ್ನು ಗುರುತಿಸತಕ್ಕದ್ದು ಮತ್ತು ಮಾನ್ಯತೆ ನೀಡತಕ್ಕದ್ದು ಮತ್ತು ಮಕ್ಕಳ ನಿರ್ದಿಷ್ಟ ಅಗತ್ಯತೆಗಳನ್ನು ಪೂರೈಸುವ ಈ ಸಂಸ್ಥೆಗಳಿಗೆ ಮಕ್ಕಳನ್ನು ಕಳುಹಿಸತಕ್ಕದ್ದು.

(3) ಈ ಸೇವೆಗಳಲ್ಲಿ ದೈಹಿಕವಾಗಿ ದೋಷಪೂರ್ಣವಾಗಿರುವ ಮಕ್ಕಳು, ಬೀದಿ ಮಕ್ಕಳು, ಲೈಂಗಿಕ ದುರಾಚಾರಕ್ಕೆ ಒಳಗಾದ ಮಕ್ಕಳು, ಹೆಚ್ಐವಿ / ಏಡ್ಸ್ ಕಾಯಿಲೆಯಿರುವ ಮಕ್ಕಳು, ಕೈದಿಗಳ ಮಕ್ಕಳು ಮತ್ತು ಬಾಲ ವೇಶ್ಯೆಯರು, ಮಾದಕ ವ್ಯಸನಕ್ಕೊಳಗಾದ ಮಕ್ಕಳು, ಕಠಿಣ ಸ್ವರೂಪದ, ದೀರ್ಘಾವಧಿ ಕಾಯಿಲೆ ಬಿದ್ದ ಮಕ್ಕಳು ಮತ್ತು ಇತರ ಯಾರೇ ಮಕ್ಕಳು ಒಳಗೊಳ್ಳುತ್ತಾರೆ.

(4) ಮಾನ್ಯತೆ ಪಡೆದ ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ವಿಶೇಷ ಅಗತ್ಯತೆಗಳಿರುವ ಮಕ್ಕಳನ್ನು ಇತರ ವಿಶೇಷ ಸೇವೆಗಳು ಅಥವಾ ಸಂಸ್ಥೆಗಳಲ್ಲಿ ಕಳಿಸಲಾಗುವ ಈ ಅಧಿನಿಯಮದ ಅಡಿಯಲ್ಲಿನ ಪ್ರಾಯೋಜಕತ್ವದ ವ್ಯಾಪ್ತಿಗೆ ಒಳಪಡಿಸತಕ್ಕದ್ದು.

**41. ಕಾಣೆಯಾದ ಮಕ್ಕಳ ಒಂದು ವಿಭಾಗ.-** (1) ರಾಜ್ಯ ಸರ್ಕಾರವು, ಕಾಣೆಯಾದ ಮಕ್ಕಳಿಗೆ ಸಂಬಂಧಿಸಿದ ಮಾಹಿತಿಯ ದಾಖಲೆ ಇಡಲು ಮತ್ತು ಜಾಹೀರುಪಡಿಸಲು ಕಾಣೆಯಾದ ಮಕ್ಕಳ ಒಂದು ವಿಭಾಗವನ್ನು ಪ್ರಾರಂಭಿಸತಕ್ಕದ್ದು. ಅಂಥ ಮಕ್ಕಳ ಮಾಹಿತಿಯನ್ನು ಶೀಘ್ರವಾಗಿ ಪರಿಶೀಲಿಸಲು ಮತ್ತು ಪ್ರಸರಣಪಡಿಸಲು ಸಾಧ್ಯವಾಗುವಂತೆ ದೇಶದಾದ್ಯಂತ ಅಂಥವೇ ಇತರ ಸೌಲಭ್ಯಗಳಿರುವ ಕೇಂದ್ರಗಳನ್ನು ಗುರುತಿಸಿ ಜಾಲದ ವ್ಯವಸ್ಥೆಗೆ ತರುವ ಪ್ರಯತ್ನಗಳನ್ನು ಮಾಡತಕ್ಕದ್ದು. ಇದು ಕಾಣೆಯಾದ ಮಕ್ಕಳ ಅಂಕಿ ಅಂಶಗಳ ಕೇಂದ್ರವಾಗಿ ಕೆಲಸ ನಿರ್ವಹಿಸುತ್ತದೆ.

(2) ಸಾಧ್ಯವಿರುವೆಡೆಯಲ್ಲೆಲ್ಲಾ ಕಾಣೆಯಾದ ಮಕ್ಕಳ ವಿಭಾಗವು ಮಕ್ಕಳ ಸಹಾಯವಾಣಿಯ ಸಂಪರ್ಕ ಹೊಂದಿರುವುದರ ಜೊತೆಗೆ ಪ್ರತಿಯೊಂದು ಜಿಲ್ಲೆಯಲ್ಲಿನ ಎಲ್ಲ ಮುಖ್ಯ ಪೊಲೀಸ್ ಠಾಣೆಗಳ ಸಂಪರ್ಕವನ್ನು ಹೊಂದಿರತಕ್ಕದ್ದು.

(3) ಈ ಮಾಹಿತಿಯು ಬೇಕಾಗಿರುವ, ನೇರವಾಗಿ ಸಂಬಂಧಪಟ್ಟವರೆಂದು ಅಥವಾ ಅನ್ಯಥಾ ಅಧಿಕೃತರೆಂದು ಕಂಡು ಬರುವ ಎಲ್ಲ ವ್ಯಕ್ತಿಗಳಿಗೆ ಈ ಅಂಕಿ ಅಂಶಗಳ ಯುಕ್ತ ಉಪಯೋಗ ಪಡೆಯಲು ಮುಕ್ತ ಅವಕಾಶ ನೀಡತಕ್ಕದ್ದು. ಮಕ್ಕಳ ಹಿತಾಸಕ್ತಿಗೆ ವಿರುದ್ಧವಾಗಿ ಈ ಅಂಕಿ ಅಂಶದ ಉಪಯುಕ್ತತೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವರೆಂದು ಕಂಡು ಬಂದ ವ್ಯಕ್ತಿಗಳನ್ನು ವಿಚಾರಣೆ ಮಾಡತಕ್ಕದ್ದು ಮತ್ತು ಅಗತ್ಯ ಕ್ರಮಕೈಗೊಳ್ಳತಕ್ಕದ್ದು.

**42. ಬಾಲಕ ನ್ಯಾಯನಿಧಿ.-** (1) (ಎ) ರಾಜ್ಯ ಸರ್ಕಾರವು, ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ವ್ಯವಹರಿಸಬೇಕಾದ ಮಗುವಿನ ಕಲ್ಯಾಣ ಮತ್ತು ಪುನರ್ವಸತಿಗಾಗಿ ರಾಜ್ಯಮಟ್ಟದಲ್ಲಿ 61ನೇ ಪ್ರಕರಣದ ಮೇರೆಗೆ "ಬಾಲಕ ನ್ಯಾಯನಿಧಿ" ಎಂದು ಕರೆಯಲಾಗುವ ನಿಧಿಯೊಂದನ್ನು ಸ್ಥಾಪಿಸತಕ್ಕದ್ದು. ಸ್ವಇಚ್ಛೆಯಿಂದ ನೀಡಲಾಗುವ ವಂತಿಗೆಯೇ ಅಲ್ಲದೆ ಕೇಂದ್ರ ಸರ್ಕಾರವೂ ಸಹ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಬಾಲಕ ನ್ಯಾಯ ನಿಧಿಗೆ ವಂತಿಗೆಯನ್ನು ನೀಡತಕ್ಕದ್ದು.

(ಬಿ) ನಿಧಿಯ ಉದ್ದೇಶವು ಈ ಮುಂದಿನಂತಿರತಕ್ಕದ್ದು:-

(ಎ) ಮಕ್ಕಳ ಕಲ್ಯಾಣ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದು;

(ಬಿ) ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಾನುದಾನ ನೀಡುವುದು;

(ಸಿ) ರಾಜ್ಯ ಸಲಹಾ ಮಂಡಲಿ ಮತ್ತು ಅದರ ಉದ್ದೇಶಕ್ಕಾಗಿ ತಗಲುವ ವೆಚ್ಚಗಳನ್ನು ಭರಿಸುವುದು;

(ಡಿ) ಮೇಲ್ಕಂಡ ಉದ್ದೇಶಗಳಿಗೆ ಪ್ರಾಸಂಗಿಕವಾದ ಅಥವಾ ಸಹಾಯಕವಾಗಿರುವ ಇತರ ಎಲ್ಲ ಕಾರ್ಯಗಳನ್ನು ನಿರ್ವಹಿಸುವುದು.

(ಸಿ) ನಿಧಿಯ ನಿರ್ವಹಣೆ ಮತ್ತು ಆಡಳಿತವು, 61 ನೇ ಪ್ರಕರಣದ (3) ನೇ ಉಪಪ್ರಕರಣದ ಅಡಿಯಲ್ಲಿ ರಾಜ್ಯ ಸಲಹಾ ಮಂಡಲಿಯ ನಿಯಂತ್ರಣದಲ್ಲಿರತಕ್ಕದ್ದು.

(ಡಿ) ವ್ಯವಸ್ಥಾಪನಾ ಮಂಡಲಿಯು ಈ ಮುಂದಿನ ಸದಸ್ಯರನ್ನೊಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (i) | ಕರ್ನಾಟಕದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಭಾರದಲ್ಲಿರುವ ಸಚಿವರು | ಅಧ್ಯಕ್ಷರು |
| (ii) | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ ಕಾರ್ಯದರ್ಶಿ. | ಸದಸ್ಯರು |
| (iii) | ಸ್ವಯಂ ಸೇವಾ ಸಂಸ್ಥೆಗಳ, ನಿಗಮಿತ ವಲಯದ ಅಥವಾ ಶಿಕ್ಷಣ ತಜ್ಞರ ಪ್ರತಿನಿಧಿಗಳಾಗಿರುವ ಮೂವರು ಸರ್ಕಾರೇತರ ಸದಸ್ಯರು. | ಸದಸ್ಯರು |
| (iv) | ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. | ಸದಸ್ಯ ಕಾರ್ಯದರ್ಶಿ. |

(ಇ) ವ್ಯವಸ್ಥಾಪಕ ಮಂಡಲಿಯ ನಾಮ ನಿರ್ದೇಶಿತ ಸದಸ್ಯನು ಎರಡು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(ಎಫ್) ಸರ್ಕಾರೇತರ ಸದಸ್ಯನು, ಅಧ್ಯಕ್ಷರಿಗೆ ಲಿಖಿತದಲ್ಲಿ ತನ್ನ ರಾಜೀನಾಮೆಯನ್ನು ಸಲ್ಲಿಸಬಹುದು, ಅದನ್ನು ಸ್ವೀಕರಿಸಲಾದ ದಿನಾಂಕದಿಂದ ಅಥವಾ ರಾಜೀನಾಮೆ ನೀಡಿದ ದಿನಾಂಕದ ತರುವಾಯದ ಮೂವತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯ - ಇವುಗಳಲ್ಲಿ ಯಾವುದು ಮೊದಲೋ ಅಂದಿನಿಂದ ಪರಿಣಾಮಕಾರಿಯಾಗತಕ್ಕದ್ದು.

(ಜಿ) ಸರ್ಕಾರೇತರ ಸದಸ್ಯನು,-

(i) ಅಸ್ವಸ್ಥಚಿತ್ತನಾದರೆ;

(ii) ಅವನು ದಿವಾಳಿಯೆಂದು ಘೋಷಿತನಾದರೆ;

(iii) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನು ಒಳಗೊಂಡ ಯಾವುದೇ ಅಪರಾಧವನ್ನು ಮಾಡಿದ್ದರೆ;

(iv) ಅವನನ್ನು ಸದಸ್ಯನಾಗಿ ಮುಂದುವರೆಸುವುದು ಅಪೇಕ್ಷಣೀಯವಲ್ಲವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ

- ಅವನನ್ನು ಪದದಿಂದ ತೆರವುಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು.

(ಹೆಚ್) ವ್ಯವಸ್ಥಾಪಕ ಮಂಡಲಿಯು, ಕಡೇ ಪಕ್ಷ ವರ್ಷಕ್ಕೊಮ್ಮೆ ಅಥವಾ ತನ್ನ ವ್ಯವಹಾರಗಳನ್ನು ನಡೆಸಲು ಅಗತ್ಯವೆಂದು ಕಂಡುಬಂದಷ್ಟುಬಾರಿ ಸಭೆ ಸೇರತಕ್ಕದ್ದು.

(ಐ) ಸಭೆಯಲ್ಲಿ ನಾಲ್ಕು ಸದಸ್ಯರ ಕೋರಂ ಇರತಕ್ಕದ್ದು.

(ಜೆ) ಯಾವುದೇ ಸ್ಥಾನ ತೆರವು ಇದ್ದರೂ ಸಹ ಮಂಡಲಿಯು ತನ್ನ ಕಾರ್ಯವನ್ನು ನಿರ್ವಹಿಸಬಹುದು.

(ಕೆ) ಸದಸ್ಯ ಕಾರ್ಯದರ್ಶಿಯ ಕರ್ತವ್ಯಗಳು ಈ ಮುಂದಿನಂತಿರತಕ್ಕದ್ದು:-

(i) ವ್ಯವಸ್ಥಾಪಕ ಮಂಡಲಿಯ ಎಲ್ಲ ದಾಖಲೆಗಳನ್ನು ತನ್ನ ಅಭಿರಕ್ಷೆಯಲ್ಲಿಟ್ಟುಕೊಳ್ಳುವುದು;

(ii) ವ್ಯವಸ್ಥಾಪಕ ಮಂಡಲಿಯ ಪರವಾಗಿ ಅಧಿಕೃತ ಪತ್ರ ವ್ಯವಹಾರಗಳನ್ನು ನಡೆಸುವುದು;

(iii) ವ್ಯವಸ್ಥಾಪಕ ಮಂಡಲಿಯ ಸಭೆ ಕರೆಯುವುದಕ್ಕಾಗಿ ಎಲ್ಲ ನೋಟೀಸುಗಳನ್ನು ಹೊರಡಿಸುವುದು;

(iv) ವ್ಯವಸ್ಥಾಪಕ ಮಂಡಲಿಯ ಎಲ್ಲ ಸಭೆಗಳ ನಡವಳಿಕೆಗಳನ್ನು ಇಡುವುದು;

(v) ನಿಧಿಯ ಸ್ವತ್ತುಗಳನ್ನು ಮತ್ತು ಹಣಕಾಸನ್ನು ನಿರ್ವಹಿಸುವುದು;

(vi) ಲೆಕ್ಕಪತ್ರಗಳನ್ನು ಇಡುವುದು ಮತ್ತು ವ್ಯವಸ್ಥಾಪಕ ಮಂಡಲಿಯ ಪರವಾಗಿ ಎಲ್ಲ ಕರಾರುಗಳನ್ನು ಬರೆದುಕೊಡುವುದು;

(vii) ವ್ಯವಸ್ಥಾಪಕ ಮಂಡಲಿಯು ಕಾಲಕಾಲಕ್ಕೆ ಅವರಿಗೆ ವಹಿಸಬಹುದಾದಂಥ ಇತರ ಎಲ್ಲ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

(2) (i) ನಿಧಿಯ ಉದ್ದೇಶವನ್ನು ಕಾರ್ಯರೂಪಕ್ಕೆ ತರುವಲ್ಲಿ, ವ್ಯವಸ್ಥಾಪಕ ಮಂಡಲಿಯು ಯಾರೇ ವ್ಯಕ್ತಿ ಅಥವಾ ಸಂಸ್ಥೆಯು ಸ್ವಯಿಚ್ಛೆಯಿಂದ ನೀಡಬಹುದಾದಂಥ ದೇಣಿಗೆ, ವಂತಿಗೆಗಳು ಅಥವಾ ಚಂದಾಗಳನ್ನು ಸ್ವೀಕರಿಸಬಹುದು.

(ii) ನಿಧಿಯ ಆಸ್ತಿಯು, ಸಂಸ್ಥೆಯಿಂದ ಮತ್ತು ವ್ಯಕ್ತಿಗಳಿಂದ ಬರುವಂಥ ಎಲ್ಲ ದೇಣಿಗೆಗಳನ್ನು ಮತ್ತು ವಂತಿಗೆಗಳನ್ನು ಒಳಗೊಂಡಿರತಕ್ಕದ್ದು.

(iii) ನಿಧಿಯ ಎಲ್ಲ ಹಣವನ್ನು, ಪ್ರಾರಂಭದಲ್ಲಿ, ರಾಜ್ಯ ಸರ್ಕಾರವು ಅನುಮೋದಿಸಿದ ಯಾವುದೇ ಬ್ಯಾಂಕಿನಲ್ಲಿ ತೆರೆಯಲಾಗುವ ನಿಧಿಯ ಖಾತೆಗೆ ಜಮೆ ಮಾಡತಕ್ಕದ್ದು.

(iv) ಮಂಡಲಿಯ ಅನುಮೋದನೆಯನ್ನು ಪಡೆದು, ಸದಸ್ಯ-ಕಾರ್ಯದರ್ಶಿಯು ಸಹಿ ಮಾಡಿದ ನಂತರ, ಚೆಕ್ಕುಗಳ ಮೂಲಕ ಅಥವಾ ಸಂದರ್ಭಾನುಸಾರ, ಕೋರಿಕೆಗಳ ಮೂಲಕ ಹಣ ತೆಗೆಯತಕ್ಕದ್ದು.

(v) ಎಲ್ಲ ಹಣ ಮತ್ತು ಸ್ವತ್ತುಗಳು ಮತ್ತು ನಿಧಿಯ ಎಲ್ಲ ಆದಾಯಗಳು ಮತ್ತು ವೆಚ್ಚಗಳಿಗೆ ಸರಿಯಾದ ಲೆಕ್ಕಗಳನ್ನು ಇಡತಕ್ಕದ್ದು ಮತ್ತು ಅದನ್ನು ಚಾರ್ಟರ್ಡ್ ಅಕೌಂಟೆಂಟರಿರುವ ಫರ್ಮಿನಿಂದ ಅಥವಾ ಮಂಡಲಿಯು ನೇಮಕ ಮಾಡಬಹುದಾದ ಮಾನ್ಯತೆ ಪಡೆದ ಇತರ ಯಾರೇ ಪ್ರಾಧಿಕಾರಿಗಳಿಂದ ಲೆಕ್ಕ ಪರಿಶೋಧನೆ ಮಾಡಿಸತಕ್ಕದ್ದು. ನಿಧಿಗಳಿಂದ ಮಾಡಿದ ವೆಚ್ಚದ ಲೆಕ್ಕವನ್ನು ಸದಸ್ಯ -ಕಾರ್ಯದರ್ಶಿಯು ಇಡತಕ್ಕದ್ದೆಂಬುದನ್ನು ಕೂಡ ಲೆಕ್ಕಪರಿಶೋಧಕರು ಪ್ರಮಾಣೀಕರಿಸತಕ್ಕದ್ದು. ಎಲ್ಲ ಕರಾರುಗಳು ಮತ್ತು ಇತರ ಭರವಸೆಗಳು, ವ್ಯವಸ್ಥಾಪಕ ಮಂಡಲಿಯ ಹೆಸರಿನಲ್ಲಿರತಕ್ಕದ್ದು ಮತ್ತು ಅದರ ಪರವಾಗಿ ಸದಸ್ಯ -ಕಾರ್ಯದರ್ಶಿ ಹಾಗೂ ಆ ಉದ್ದೇಶಕ್ಕಾಗಿ ಆಡಳಿತ ಮಂಡಲಿಯಿಂದ ಪ್ರಾಧಿಕೃತನಾದ ಅದರ ಒಬ್ಬ ಸದಸ್ಯನು ಅದಕ್ಕೆ ಸಹಿ ಹಾಕತಕ್ಕದ್ದು.

(vi) ವ್ಯವಸ್ಥಾಪಕ ಮಂಡಲಿಯು, ಮಾರಾಟದ ಉತ್ಪತ್ತಿಯನ್ನು ಅಥವಾ ಸ್ವತ್ತಿನ ಇತರ ವಿಲೇವಾರಿಯನ್ನು ನಿಧಿಯ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಕೂಡಲೇ ಬಳಸಲು ಅಗತ್ಯವಿಲ್ಲದ ಹಣ ಅಥವಾ ಸ್ವತ್ತನ್ನು ವ್ಯವಸ್ಥಾಪಕ ಮಂಡಲಿಯು ಕಾನೂನಿನ ಪ್ರಕಾರ ಪ್ರಾಧಿಕೃತವಾದ ಟ್ರಸ್ಟ್ ನ ಹಣವನ್ನು ಹೂಡಲು ಸೂಕ್ತವೆಂದು ಭಾವಿಸುವಂಥ ಯಾವುದೇ ಒಂದು ಅಥವಾ ಹೆಚ್ಚು ವಿಧಾನದಲ್ಲಿ ಹೂಡಬಹುದು.

(vii) ವ್ಯವಸ್ಥಾಪಕ ಮಂಡಲಿಯು, ತನ್ನ ಅಭಿಪ್ರಾಯದಲ್ಲಿ ಕೇವಲ ಕಾರ್ಯವಿಧಾನಕ್ಕೆ ಸಂಬಂಧಿಸಿದ ವ್ಯವಸ್ಥೆಯಾಗಿರುವಂಥ ಅಧಿಕಾರಗಳನ್ನು, ಒಬ್ಬ ಅಥವಾ ಹೆಚ್ಚು ಸದಸ್ಯರಿಗೆ ಪ್ರತ್ಯಾಯೋಜಿಸಬಹುದು.

**43. ಸಲಹಾ ಮಂಡಲಿಗಳು.–** (1) ರಾಜ್ಯ ಸರ್ಕಾರವು, ರಾಜ್ಯದಲ್ಲಿನ ಗೃಹಗಳ ಮತ್ತು ಬಾಲಕ ನ್ಯಾಯಕ್ಕೆ ಸಂಬಂಧಿಸಿದ ಪ್ರಕಾರ್ಯಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಉಸ್ತುವಾರಿ ವಹಿಸಲು ರಾಜ್ಯ ಮಟ್ಟದ ಒಂದು ಸಲಹಾ ಸಮಿತಿಯನ್ನು ರಚಿಸತಕ್ಕದ್ದು.

(2) ಅದು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

| | | |
|---|---|---|
| (i) | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವರು | ಅಧ್ಯಕ್ಷ |
| (ii) | ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯ |
| (iii) | ಕಾರ್ಯದರ್ಶಿ, ಶಿಕ್ಷಣ ಇಲಾಖೆ | ಸದಸ್ಯ |
| (iv) | ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಸದಸ್ಯ |
| (v) | ಕಾರ್ಯದರ್ಶಿ, ಗೃಹ ಇಲಾಖೆ | ಸದಸ್ಯ |
| (vi) | ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ | ಸದಸ್ಯ |
| (vii) | ಕಾರ್ಯದರ್ಶಿ, ಕಾರ್ಮಿಕ ಇಲಾಖೆ | ಸದಸ್ಯ |
| (viii) | ನಿರ್ದೇಶಕ, ವಾರ್ತಾ ಮತ್ತು ಪ್ರಚಾರ ಇಲಾಖೆ | ಸದಸ್ಯ |
| (ix) | ನಿರ್ದೇಶಕ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | ಸದಸ್ಯ |
| (x) | ನಿರ್ದೇಶಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯ – ಕಾರ್ಯದರ್ಶಿ |
| (xi) | ನಿಗಮ ವಲಯ, ಶಿಕ್ಷಣ ತಜ್ಞರು, ವೈದ್ಯ ವೃತ್ತಿ ನಿರತರು, ಸ್ವಯಂ ಸೇವಾ ಸಂಸ್ಥೆಗಳ ಸಮಾಜ ಸೇವಕರು – ಇವರ ಪೈಕಿಯಿಂದ ರಾಜ್ಯ ಸರ್ಕಾರವು ನಾಮ ನಿರ್ದೇಶಿಸುವ ಏಳನ್ನು ಮೀರದಷ್ಟು ಸಂಖ್ಯೆಯ ಅಧಿಕಾರೇತರ ಸದಸ್ಯರು. | |

(3) ಮಂಡಲಿಯ ಪ್ರಕಾರ್ಯಗಳು ಈ ಮುಂದಿನಂತಿರತಕ್ಕದ್ದು:–

(ಎ) ಗೃಹಗಳ ಬಾಲಕರ / ಮಕ್ಕಳ ಪಾಲನೆ, ಕಲ್ಯಾಣ ಮತ್ತು ಪುನರ್ವಸತಿ – ಇವು ಎಲ್ಲ ರೀತಿಯಲ್ಲಿಯೂ ಸರಿಯಾಗಿವೆಯೆ ಎಂಬುದನ್ನು ವಿಚಾರಿಸುವುದು ಮತ್ತು ಈ ಸಂಬಂಧದಲ್ಲಿ ವ್ಯವಸ್ಥೆ ಮಾಡುವುದು;

(ಬಿ) ಮಗುವಿಗೆ ಸಂಬಂಧಪಟ್ಟ ಕಾರ್ಯಕ್ರಮಗಳ ಬಗೆಗಿನ ವಿಷಯಗಳನ್ನು ಪುನರ್ ಪರಿಶೀಲಿಸುವುದು;

(ಸಿ) ಬಾಲಕರ / ಮಕ್ಕಳ ಶಿಕ್ಷಣ, ತರಬೇತಿ ಮತ್ತು ಪುನರ್ವಸತಿಗಾಗಿ ಇರುವ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಮಾರ್ಗೋಪಾಯಗಳನ್ನು ಸೂಚಿಸುವುದು;

(ಡಿ) ಆಡಳಿತಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಲಹೆ ನೀಡುವುದು ಮತ್ತು ಗೃಹಗಳ ನಿರ್ವಹಣೆ, ಸಂಪನ್ಮೂಲ ಸಂಗ್ರಹಣೆ ಮತ್ತು ಸಂಬಂಧಪಟ್ಟ ಹಲವಾರು ಸರ್ಕಾರಿ ಮತ್ತು ಸರ್ಕಾರೇತರ ಏಜೆನ್ಸಿಗಳ ನಡುವೆ ಸಮನ್ವಯ ಮೂಡಿಸುವುದು;

(ಇ) ತಮ್ಮ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ವಿವಿಧ ಸಾಂಸ್ಥಿಕ ಮತ್ತು ಸಾಂಸ್ಥಿಕೇತರ ಸೇವೆಗಳನ್ನು ಪರಿಶೀಲಿಸುವುದು ಮತ್ತು ಮತ್ತಷ್ಟು ಸುಧಾರಣೆಗಳಿಗಾಗಿ ಕ್ರಮೋಪಾಯ ಸೂಚಿಸುವುದು.

(4) ರಾಜ್ಯ ಸರ್ಕಾರವು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರ ಶಿಫಾರಸಿನ ಮೇಲೆ ಮಂಡಲಿಯ ಸರ್ಕಾರೇತರ ಸದಸ್ಯರನ್ನು ನೇಮಕ ಮಾಡತಕ್ಕದ್ದು ಮತ್ತು ಅವರು, ನೇಮಕದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಪುನರ್ ನೇಮಕಕ್ಕೆ ಅರ್ಹರಾಗಿರತಕ್ಕದ್ದು.

(5) ರಾಜ್ಯ ಸರ್ಕಾರವು, ಯಾವುದೇ ಕಾರಣ ಕೊಡದೆ ಸರ್ಕಾರೇತರ ಸದಸ್ಯರ ಅವಧಿಯನ್ನು ಕೊನೆಗೊಳಿಸಬಹುದು.

(6) ಸರ್ಕಾರೇತರ ಸದಸ್ಯರ ಪೈಕಿ ಉಂಟಾಗುವ ಯಾವುದೇ ಆಕಸ್ಮಿಕ ಖಾಲಿಸ್ಥಾನವನ್ನು, ಇನ್ನೊಬ್ಬ ವ್ಯಕ್ತಿಯ ನೇಮಕಾತಿಯ ಮೂಲಕ ಭರ್ತಿ ಮಾಡಬಹುದು. ನೇಮಕ ಹೊಂದಿದ ಸ್ಥಾನದಲ್ಲಿದ್ದ ವ್ಯಕ್ತಿಯು ಖಾಲಿ ಸ್ಥಾನವು ಉಂಟಾಗದಿದ್ದರೆ ಎಷ್ಟು ಕಾಲದವರೆಗೆ ಪದಧಾರಣ ಮಾಡುತ್ತಿದ್ದನೋ ಅಷ್ಟು ಕಾಲದವರೆಗೆ ಅವನು ಪದಧಾರಣ ಮಾಡತಕ್ಕದ್ದು.

(7) ಸಲಹಾ ಮಂಡಲಿಯು ಕಡೇ ಪಕ್ಷ ಆರು ತಿಂಗಳಲ್ಲಿ ಒಮ್ಮೆಯಾದರೂ ಸಭೆ ಸೇರತಕ್ಕದ್ದು. ಆದಾಗ್ಯೂ, ಅವಶ್ಯವಿದ್ದರೆ, ಅಧ್ಯಕ್ಷನು ಅಥವಾ ಒಟ್ಟು ಸದಸ್ಯರ ಪೈಕಿ ಮೂರನೇ ಒಂದರಷ್ಟು ಸದಸ್ಯರ ಕೋರಿಕೆಯ ಮೇರೆಗೆ ಹೆಚ್ಚುವರಿ ಸಭೆಗಳನ್ನು ಕರೆಯಬಹುದು.

(8) ಮಂಡಲಿಯ ಪ್ರತಿಯೊಂದು ಸಭೆಗೆ ಅಧ್ಯಕ್ಷರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಅವರ ಗೈರುಹಾಜರಿಯಲ್ಲಿ, ಹಾಜರಿರುವ ಸದಸ್ಯರು, ತಮ್ಮ ಪೈಕಿಯಿಂದ ಒಬ್ಬನನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಲು ಆಯ್ಕೆ ಮಾಡತಕ್ಕದ್ದು. ಸಲಹಾ ಮಂಡಲಿಯ ಸಭೆಯ ಕೋರಂ ಏಳು ಆಗಿರತಕ್ಕದ್ದು.

(9) ಸಲಹಾ ಮಂಡಲಿಯು, ಅದರ ಸಭೆಯ ದಿನಾಂಕ, ವೇಳೆ ಮತ್ತು ಸ್ಥಳವನ್ನು ನಿಗದಿಪಡಿಸತಕ್ಕದ್ದು ಮತ್ತು ಹಾಗೆ ನಿಗದಿಪಡಿಸಿದ ದಿನಕ್ಕೆ ಏಳು ದಿನಗಳಿಗೆ ಮುಂಚಿತವಾಗಿ, ಪರಿಗಣಿಸಬೇಕಾದ ವಿಷಯಗಳ ಪಟ್ಟಿಯ ಜೊತೆಗೆ ಸದಸ್ಯ – ಕಾರ್ಯದರ್ಶಿಯು ಆ ಬಗ್ಗೆ ನೋಟೀಸನ್ನು, ಎಲ್ಲ ಸದಸ್ಯರಿಗೆ ಕಳುಹಿಸತಕ್ಕದ್ದು.

(10) ಸದಸ್ಯ –ಕಾರ್ಯದರ್ಶಿಯು, ಸಲಹಾ ಮಂಡಲಿಗಳ ಪ್ರತಿಯೊಂದು ಸಭೆಯ ನಡವಳಿಗಳ ಟಿಪ್ಪಣಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅವುಗಳನ್ನು ಅಧ್ಯಕ್ಷರು ಅನುಮೋದಿಸಿದ ತರುವಾಯ, ಮಂಡಲಿಯ ಸದಸ್ಯರಿಗೆ ಕಳುಹಿಸತಕ್ಕದ್ದು.

(11) 25ನೇ ನಿಯಮದ ಅಡಿಯಲ್ಲಿ ಸ್ಥಾಪಿಸಲಾದ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಗಳು ಜಿಲ್ಲಾ ಸಲಹಾ ಮಂಡಲಿಗಳಾಗಿಯೂ ಕೆಲಸ ನಿರ್ವಹಿಸತಕ್ಕದ್ದು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರು ಜಿಲ್ಲಾ ಸಲಹಾ ಮಂಡಲಿಯ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

**44. ದಾಖಲೆಗಳ / ದಸ್ತಾವೇಜುಗಳ ವಿಲೇವಾರಿ.–** ಒಬ್ಬ ಬಾಲಕ / ಮಗುವಿಗೆ ಸಂಬಂಧಪಟ್ಟ ದಾಖಲೆಗಳು ಅಥವಾ ದಸ್ತಾವೇಜುಗಳನ್ನು ಏಳು ವರ್ಷಗಳವರೆಗೆ ಸುರಕ್ಷಿತ ಸ್ಥಳದಲ್ಲಿ ಇಟ್ಟಿರತಕ್ಕದ್ದು ಮತ್ತು ಆ ನಂತರ, ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಯ ಕ್ರಮಬದ್ಧ ಅನುಮತಿ ಪಡೆದ ತರುವಾಯ ಅವುಗಳನ್ನು ನಾಶಪಡಿಸತಕ್ಕದ್ದು.

**45. ಬಾಲಕ ನ್ಯಾಯ ಅಧಿನಿಯಮ, 2000 – ಇದನ್ನು ಅನುಷ್ಠಾನಗೊಳಿಸಲು ಕೈಪಿಡಿ.–** ಗೃಹಗಳ ಕಾರ್ಯನಿರ್ವಹಣೆ ಮತ್ತು ಅಧಿನಿಯಮದ ಅನುಷ್ಠಾನದ ಸಂಬಂಧದಲ್ಲಿ, ಹೆಚ್ಚಿನ ಮಾರ್ಗದರ್ಶಿ ಸೂತ್ರಗಳನ್ನು ಬಾಲಕ ನ್ಯಾಯ ಅಧಿನಿಯಮ, 2000 – ಇದರ ಕೈಪಿಡಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಅನುಸರಿಸತಕ್ಕದ್ದು.

**46. ನಿರಸನ ಮತ್ತು ಉಳಿಸುವಿಕೆಗಳು.–** ಬಾಲಕ ನ್ಯಾಯ (ಕರ್ನಾಟಕ) ನಿಯಮಗಳು, 1987ನ್ನು ಈ ಮೂಲಕ ನಿರಸನಗೊಳಿಸಲಾಗಿದೆ. ಹಾಗೆ ನಿರಸಿತವಾಗಿದ್ದರೂ, ಸದರಿ ನಿಯಮಗಳ ಅಡಿಯಲ್ಲಿ ಮಾಡಿದ ಯಾವುದೇ ಕೃತ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ನಿಯಮಗಳ ಸಂವಾದಿ ಉಪಬಂಧಗಳ ಅಡಿ ಮಾಡಲಾದುದೆಂದು ಅಥವಾ ಕೈಗೊಳ್ಳಲಾದುದೆಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಹುಲಿಯಪ್ಪ,**

ಸರ್ಕಾರದ ಅಧೀನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

## ನಮೂನೆ – I

**[13ನೇ ನಿಯಮದ (4)ನೇ ಉಪ ನಿಯಮವನ್ನು ನೋಡಿ]**

.............................. ರ ನಿವಾಸಿಯಾದ ........................... ರವರ ಮಗ/ ಮಗಳಾದ .................................... ವಯಸ್ಸಿನ .............................. ನ್ನು (ಮಗುವಿನ ಹೆಸರು) .................ನೇ ಪ್ರಕರಣದ ಅಡಿಯಲ್ಲಿ ದಸ್ತಗಿರಿ ಮಾಡಲಾಗಿದ್ದು, ಅವರನ್ನು .....................ದಲ್ಲಿರುವ ಪರಿವೀಕ್ಷಣಾಲಯದಲ್ಲಿಡಲಾಗಿದ್ದು, ಅವರನ್ನು ............................ ಸ್ಥಳದಲ್ಲಿ ಕಾರ್ಯನಿರ್ವಹಿಸುವ ಬಾಲಕ ನ್ಯಾಯ ಮಂಡಳಿಯ ಮುಂದೆ ................. ದಿನಾಂಕದಂದು ಹಾಜರು ಪಡಿಸಬೇಕಾಗಿರುವುದರಿಂದ;

.......................ನಿವಾಸಿಯಾದ ....................... ರವರಿಗೆ (ತಂದೆ ತಾಯಿ ಅಥವಾ ಪಾಲಕರ ಹೆಸರು) ............................. ಇಲ್ಲಿ ಕಾರ್ಯ ನಿರ್ವಹಿಸುವ ಬಾಲಕ ನ್ಯಾಯ ಮಂಡಳಿಯ ಮುಂದೆ ...................ಗಂಟೆಗೆ ಹಾಜರಿರುವಂತೆ ಈ ಮೂಲಕ ನಿರ್ದೇಶಿಸಲಾಗಿದೆ.

ಸಂಬಂಧಪಟ್ಟ ಉಪಬಂಧಗಳೊಂದಿಗೆ
ಮತ್ತು ಘಟನೆಯ ಸಂಕ್ಷಿಪ್ತ ವಿವರಣೆಯೊಂದಿಗೆ
ಮಗುವನ್ನು ವಶಕ್ಕೆ ತೆಗೆದುಕೊಂಡದ್ದಕ್ಕೆ
ಕಾರಣಗಳು.

ಮಗುವಿನ ಗುರುತಿನ ಚಿಹ್ನೆಗಳು

(1)

(2)

ದಿನಾಂಕ : ಪೊಲೀಸ್ ಠಾಣೆಯ ಪ್ರಭಾರಿ ಅಧಿಕಾರಿಯ ಸಹಿ

## ನಮೂನೆ – II

**[13ನೇ ನಿಯಮದ (4)ನೇ ಉಪ ನಿಯಮವನ್ನು ನೋಡಿ]**

(1) ಬಾಲಕನ / ಮಗುವಿನ ಹೆಸರು
(2) ಬಾಲಕನ / ಮಗುವಿನ ವಯಸ್ಸು
(3) ತಂದೆಯ ಹೆಸರು
(4) ವಾಸ ಸ್ಥಳದ ವಿಳಾಸ
(5) ವಶಕ್ಕೆ ತೆಗೆದುಕೊಂಡ ದಿನಾಂಕ ಮತ್ತು ಸಮಯ
(6) ಬಾಲಕನನ್ನು / ಮಗುವನ್ನು ವಶಕ್ಕೆ ತೆಗೆದುಕೊಂಡ ಸ್ಥಳ
(7) ಮಗುವನ್ನು ಇರಿಸಿರುವ ಸ್ಥಳ
(8) ಯಾವ ಉಪಬಂಧದ ಅಡಿಯಲ್ಲಿ ಬಾಲಕನನ್ನು / ಮಗುವನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ
(9) ಪ್ರಕರಣದ ಸಂಕ್ಷಿಪ್ತ ಮಾಹಿತಿ
(10) ಗುರುತು ಚಿಹ್ನೆಗಳು

ಸ್ಥಳ: ಪೊಲೀಸ್ ಠಾಣೆಯ ಪ್ರಭಾರಿ ಅಧಿಕಾರಿಯ ಸಹಿ
ದಿನಾಂಕ:

ಪರಿವೀಕ್ಷಣಾಧಿಕಾರಿ / ಗೃಹದ ಪ್ರಭಾರಿ ಅಧಿಕಾರಿ
– ಇವರಿಗೆ

## ನಮೂನೆ – III

**[13ನೇ ನಿಯಮದ (14)ನೇ ಉಪ ನಿಯಮವನ್ನು ನೋಡಿ]**

**ಸಾಮಾಜಿಕ ತನಿಖಾ ವರದಿಯ ಆದೇಶ**

ಪರಿವೀಕ್ಷಣಾಧಿಕಾರಿ / ವಿಷಯ ನಿರ್ವಾಹಕ

........................................ ಇವರಿಗೆ,

(1) ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000ದ ............... ನೇ ಪ್ರಕರಣದ ಅಡಿಯಲ್ಲಿ .................... ಇಲ್ಲಿ ವಾಸಿಸುವ ...................... ಇವರ ಮಗ / ಮಗಳಾದ .................... (ಮಗುವಿನ ಹೆಸರು)ಗೆ ಸಂಬಂಧಿಸಿದಂತೆ ಒಂದು ವರದಿಯನ್ನು / ದೂರನ್ನು .....................ಇವರಿಂದ ಸ್ವೀಕರಿಸಿರುವುದರಿಂದ;

(2) .................................... ಇಲ್ಲಿ ವಾಸಿಸುವ ...............................ಇವರ ಮಗ / ಮಗಳಾದ ........................ ಇವರನ್ನು ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000ದ ......... ನೇ ಪ್ರಕರಣದ ಅಡಿಯಲ್ಲಿ ಮಂಡಲಿಯ / ಸಮಿತಿಯ ಮುಂದೆ ಹಾಜರು ಪಡಿಸಬೇಕಾಗಿರುವುದರಿಂದ;

ಸದರಿ ಮಗುವಿನ ನಡತೆ ಮತ್ತು ಸಾಮಾಜಿಕ ಪೂರ್ವ ವೃತ್ತಾಂತದ ಬಗ್ಗೆ ತನಿಖೆ ನಡೆಸಲು ಮತ್ತು ............... ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಅಥವಾ ಮಂಡಲಿ / ಸಮಿತಿಯು ನಿಮಗೆ ಅನುಮತಿಸಿರುವಂಥ ಸಮಯದ ಒಳಗಾಗಿ ನಿಮ್ಮ ಸಾಮಾಜಿಕ ತನಿಖಾ ವರದಿಯನ್ನು ಸಲ್ಲಿಸಲು ನಿಮಗೆ ಈ ಮೂಲಕ ನಿರ್ದೇಶನವನ್ನು ನೀಡಲಾಗಿದೆ.

........................ ನೇ ದಿನಾಂಕ ......................... ತಿಂಗಳು .......................... ವರ್ಷ

(ಸಹಿ)

**ಪ್ರಧಾನ ಮ್ಯಾಜಿಸ್ಟ್ರೇಟ್**

ಬಾಲಕ ನ್ಯಾಯ ಮಂಡಲಿ / ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ

## ನಮೂನೆ – IV

**[13ನೇ ನಿಯಮದ (15)ನೇ ಉಪ ನಿಯಮವನ್ನು ನೋಡಿ]**

**ಮೇಲ್ವಿಚಾರಣಾ ಆದೇಶ**

ಮಗುವನ್ನು ತಂದೆ ತಾಯಿ, ಪಾಲಕ ಅಥವಾ ಇತರ ಸೂಕ್ತ ವ್ಯಕ್ತಿಯ ಪಾಲನೆಯಲ್ಲಿ ಇರಿಸಿದಾಗ

........................ ನೇ ದಿನಾಂಕ ..................... 20 ................. ರ ವ್ಯಕ್ತಿ ಚಿತ್ರ ಸಂಖ್ಯೆ ...........

........................ (ಮಗುವಿನ ಹೆಸರು), ಈ ದಿನ ಒಂದು ಅಪರಾಧವೆಸಗಿರುವುದಾಗಿ ಕಂಡುಬಂದಿರುವುದರಿಂದ ಮತ್ತು ....................... (ಹೆಸರು) ..................... (ವಿಳಾಸ) ಇವರಿಂದ ಒಂದು ಬಂಧ ಪತ್ರವನ್ನು ಬರೆಸಿಕೊಳ್ಳುವುದರ ಮೂಲಕ ಸದರಿ .......... ಇವರ ಪಾಲನೆಯಲ್ಲಿ ಇರಿಸಲಾಗಿದೆ ಮತ್ತು ಅವನನ್ನು / ಅವಳನ್ನು ಮೇಲ್ವಿಚಾರಣೆಯಲ್ಲಿ ಇರಿಸುವ ಒಂದು ಆದೇಶವನ್ನು ಹೊರಡಿಸಿ ಸದರಿ ಮಗುವಿನ ಬಗ್ಗೆ ವ್ಯವಹರಿಸುವುದು ಯುಕ್ತವೆಂದು ಮಂಡಲಿಗೆ ಮನದಟ್ಟಾಗಿರುವುದರಿಂದ;

ಈ ಮುಂದಿನ ಷರತ್ತುಗಳಿಗೊಳಪಟ್ಟು, .................. ಅವಧಿಗಾಗಿ .................. ಪರಿವೀಕ್ಷಣಾಧಿಕಾರಿ / ವಿಷಯ ನಿರ್ವಾಹಕನ ಮೇಲ್ವಿಚಾರಣೆಯಲ್ಲಿ ಸದರಿ ಮಗುವನ್ನು ಇರಿಸಲು ಈ ಮೂಲಕ ಆದೇಶಿಸಲಾಗಿದೆ:–

(1) ಮಗುವನ್ನು, ಆದೇಶದ ಪ್ರತಿಗಳು ಮತ್ತು ಸದರಿ ................... ಇವರು ಬರೆದುಕೊಟ್ಟಿರುವ ಬಂಧಪತ್ರದೊಂದಿಗೆ ಅದರಲ್ಲಿ ಹೆಸರಿಸಲಾಗಿರುವ ......... ಪರಿವೀಕ್ಷಣಾಧಿಕಾರಿ / ವಿಷಯ ನಿರ್ವಾಹಕ –ಇವರ ಮುಂದೆ ಹಾಜರುಪಡಿಸಬೇಕು.

(2) ಪರಿವೀಕ್ಷಣಾಧಿಕಾರಿಯ ಮೇಲ್ವಿಚಾರಣೆಗೆ ಮಗುವನ್ನು ಒಪ್ಪಿಸಬೇಕು.

(3) ಮಗುವು ..................... ಅವಧಿಯವರೆಗೆ ........................ ಇಲ್ಲಿ ವಾಸಿಸಬೇಕು.

(4) ಪರಿವೀಕ್ಷಣಾಧಿಕಾರಿಯ/ ವಿಷಯ ನಿರ್ವಾಹಕನ ಅನುಮತಿ ಪಡೆಯದೆ, ಜಿಲ್ಲಾ ಅಧಿಕಾರ ವ್ಯಾಪ್ತಿಯನ್ನು ಬಿಟ್ಟುಹೋಗಲು ಮಗುವಿಗೆ ಅವಕಾಶ ನೀಡಲಾಗುವುದಿಲ್ಲ.

(5) ಮಗುವಿಗೆ ದುರ್ನಡತೆಯವರೊಂದಿಗೆ ಬೆರೆಯಲು ಅವಕಾಶ ನೀಡಲಾಗುವುದಿಲ್ಲ.

(6) ಮಗುವು ಪ್ರಾಮಾಣಿಕವಾಗಿ ಮತ್ತು ಶಾಂತಿಯುತ ಜೀವನ ನಡೆಸಬೇಕು ಮತ್ತು ಶಾಲೆಗೆ ನಿಯತವಾಗಿ ಹೋಗಬೇಕು/ ಪ್ರಾಮಾಣಿಕ ಜೀವನೋಪಾಯವನ್ನು ನಡೆಸಲು ಪ್ರಯತ್ನಿಸಬೇಕು.

(7) ಮಗುವು ನಿಯತವಾಗಿ ಹಾಜರಾತಿ ಕೇಂದ್ರಕ್ಕೆ ಹಾಜರಾಗಬೇಕು.

(8) ಮಗುವನ್ನು ಯಾರ ರಕ್ಷಣೆಯಲ್ಲಿ ಇರಿಸಲಾಗಿದೆಯೋ ಅವರು ಮಗುವಿನ ಪಾಲನೆ, ಶಿಕ್ಷಣ ಮತ್ತು ಅಭಿವೃದ್ಧಿಯ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕು.

(9) ಮಗುವು ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡದಂತೆ ಮಗುವನ್ನು ಯಾರ ರಕ್ಷಣೆಯಲ್ಲಿ ಇರಿಸಲಾಗಿದೆಯೋ ಅವರು ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳಬೇಕು.

(10) ಮಗುವು ನಿದ್ರಾಜನಕ ಔಷಧಗಳನ್ನು ಅಥವಾ ಮನೋದ್ರೇಕಕಾರಿ ವಸ್ತುಗಳು ಅಥವಾ ಯಾವುವೇ ಇತರ ಮತ್ತುಬರಿಸುವ ಪದಾರ್ಥಗಳನ್ನು ಸೇವಿಸದಂತೆ ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳಬೇಕು.

(11) ಮೇಲೆ ನಮೂದಿಸಿರುವ ಷರತ್ತುಗಳನ್ನು ಸೂಕ್ತವಾಗಿ ಪಾಲಿಸುವುದಕ್ಕಾಗಿ, ಪರಿವೀಕ್ಷಣಾಧಿಕಾರಿ / ವಿಷಯ ನಿರ್ವಾಹಕರು ಕಾಲಕಾಲಕ್ಕೆ ನೀಡಿದ ನಿರ್ದೇಶನಗಳನ್ನು ಪಾಲಿಸಬೇಕು.

ಮೇಲ್ವಿಚಾರಣೆಯ ಅವಧಿಯಲ್ಲಿ ಮಗು ಮತ್ತು ಅವನ / ಅವಳ ಕುಟುಂಬದವರು ಪಾಲಿಸುವುದಕ್ಕಾಗಿ ಹೆಚ್ಚಿನ ಷರತ್ತುಗಳನ್ನು ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಯು ಸೂಚಿಸಬಹುದಾಗಿದೆ.

(1)

(2)

(3)

(4)

..................... ನೇ ದಿನಾಂಕ ......................... ತಿಂಗಳು 20 ....................

(ಸಹಿ)

ಪ್ರಧಾನ ಮ್ಯಾಜಿಸ್ಟ್ರೇಟರು, ಬಾಲಕ ನ್ಯಾಯ ಮಂಡಲಿ/
ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ

## ನಮೂನೆ - V

**[13ನೇ ನಿಯಮದ (16) ನೇ ಉಪ ನಿಯಮವನ್ನು ನೋಡಿ]**

**15 ನೇ ಪ್ರಕರಣದ (1)ನೇ ಉಪ ಪ್ರಕರಣದ (ಇ) ಖಂಡ, 39 ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಯಾರ ರಕ್ಷಣೆಯಲ್ಲಿ ಮಗುವನ್ನು ಇರಿಸಲಾಗಿದೆಯೋ ಆ ತಂದೆ ತಾಯಿ / ಪಾಲಕರು / ಸಂಬಂಧಿಕರು ಅಥವಾ ಸೂಕ್ತ ವ್ಯಕ್ತಿಯು ಬರೆದುಕೊಡಬೇಕಾದಂಥ ಬಂಧಪತ್ರ.**

ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಯು ........................ ಇವನನ್ನು (ಮಗುವಿನ ಹೆಸರು) ರಕ್ಷಣೆಗಾಗಿ ಇರಿಸಲು ಆದೇಶಿಸಿರುವ ..................... ತಂದೆ ತಾಯಿ, ಪಾಲಕ, ಸಂಬಂಧಿಕ ಅಥವಾ ಸೂಕ್ತ ವ್ಯಕ್ತಿಯಾಗಿರುವ ನಾನು: ಸದರಿ ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಯು, ............ ರೂ.ಗಳ (...............ರೂಪಾಯಿಗಳು) ಮೊಬಲಗಿನ ಬಂಧಪತ್ರವನ್ನು ಒಬ್ಬ ಜಾಮೀನುದಾರನೊಂದಿಗೆ / ಇಬ್ಬರು ಜಾಮೀನುದಾರರೊಂದಿಗೆ ಬರೆದುಕೊಡಲು ನಿರ್ದೇಶಿಸಿರುವುದರಿಂದ ಸದರಿ ..................... ಇವನನ್ನು ರಕ್ಷಣೆಯಲ್ಲಿ ಇರಿಸಿಕೊಳ್ಳಲು ನಾನು ಈ ಮೂಲಕ ಬದ್ಧನಾಗಿರುತ್ತೇನೆ. ನಾನು, ಸದರಿ ..................... ಇವನನ್ನು ಸೂಕ್ತವಾಗಿ ರಕ್ಷಣೆ ಮಾಡುತ್ತೇನೆ ಮತ್ತು ಸದರಿ .................... ಇವನ ಸನ್ನಡತೆಗೆ ಮತ್ತು .................... ದಿನಾಂಕದಿಂದ ಆರಂಭವಾಗಿ ................... ಅವಧಿಯವರೆಗೆ ಈ ಮುಂದಿನ ಷರತ್ತುಗಳನ್ನು ಪಾಲಿಸಲು ಜವಾಬ್ದಾರನಾಗಿರುತ್ತೇನೆ;

(1) ನಾನು, ಪರಿವೀಕ್ಷಣಾಧಿಕಾರಿ / ಮಕ್ಕಳ ಕಲ್ಯಾಣ ಅಧಿಕಾರಿಯ ಮುಖಾಂತರ ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಗೆ ಲಿಖಿತದಲ್ಲಿ ಮುಂಚಿತವಾಗಿ ತಿಳಿಸದೆ ನನ್ನ ವಾಸ ಸ್ಥಳವನ್ನು ಬದಲಾಯಿಸುವುದಿಲ್ಲ;

(2) ನಾನು, ಮಂಡಲಿ / ಸಮಿತಿಯ ಲಿಖಿತ ಅನುಮತಿಯನ್ನು ಪಡೆಯದೆ ಸದರಿ ............. ಇವನನ್ನು ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಯ ಅಧಿಕಾರ ವ್ಯಾಪ್ತಿಯ ಪರಿಮಿತಿಯಿಂದ ಹೊರಕ್ಕೆ ಕರೆದೊಯ್ಯುವುದಿಲ್ಲ;

(3) ನಾನು, ನನ್ನ ನಿಯಂತ್ರಣವನ್ನು ಮೀರಿದ ಸನ್ನಿವೇಶಗಳನ್ನು ಹೊರತುಪಡಿಸಿ, ಪ್ರತಿನಿತ್ಯ ಸದರಿ ............... ಇವನನ್ನು ಮಂಡಲಿಯು / ಸಮಿತಿಯು ಅನುಮೋದಿಸಿದಂತೆ ಶಾಲೆಗೆ / ಅಂಥ ದಿನನಿತ್ಯದ ಕೆಲಸಕ್ಕೆ ಕಳುಹಿಸುತ್ತೇನೆ;

(4) ನಾನು, ನನ್ನ ನಿಯಂತ್ರಣವನ್ನು ಮೀರಿದ ಸನ್ನಿವೇಶಗಳನ್ನು ಹೊರತುಪಡಿಸಿ, ಸದರಿ ............... ಇವನನ್ನು ಹಾಜರಾತಿ ಕೇಂದ್ರಕ್ಕೆ ನಿಯತವಾಗಿ ಕಳುಹಿಸುತ್ತೇನೆ;

(5) ನಾನು, ಮಂಡಲಿಯು / ಸಮಿತಿಯು ತನ್ನ ಮುಂದೆ ಹಾಜರಾಗಬೇಕೆಂದು ಅಗತ್ಯಪಡಿಸಿದಾಗಲೆಲ್ಲ ತಕ್ಷಣವೇ ಹಾಜರಾಗುತ್ತೇನೆ;

(6) ನಾನು, ಮಗುವು ತುಂಬಾ ಅಸಭ್ಯ ರೀತಿಯಲ್ಲಿ ವರ್ತಿಸಿದರೆ ಅಥವಾ ನನ್ನ ರಕ್ಷಣೆಯಿಂದ ತಪ್ಪಿಸಿಕೊಂಡು ಹೋದರೆ ಸದರಿ ................... ಇವನನ್ನು ಹಾಜರುಪಡಿಸುತ್ತೇನೆ;

(7) ನಾನು, ಪರಿವೀಕ್ಷಣಾಧಿಕಾರಿ / ವಿಷಯ ನಿರ್ವಹಣಾಧಿಕಾರಿಗೆ ಮೇಲ್ವಿಚಾರಣೆಯ ಕರ್ತವ್ಯಗಳನ್ನು ನಡೆಸಲು ಸಾಧ್ಯವಾಗುವಂತೆ ಮಾಡಲು ನಾನು ಎಲ್ಲ ಅಗತ್ಯ ನೆರವನ್ನು ನೀಡುತ್ತೇನೆ;

(8) ನಾನು, ಇಲ್ಲಿ ಮೇಲೆ ಹೇಳಿದ್ದನ್ನು ಮಾಡಲು ತಪ್ಪಿದ ಸಂದರ್ಭದಲ್ಲಿ, ................... ರೂ.ಗಳ ಮೊಬಲಗನ್ನು (............... ರೂಪಾಯಿಗಳು) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಬದ್ಧನಾಗಿರುತ್ತೇನೆ.

....................ನೇ ದಿನಾಂಕ ......................... ತಿಂಗಳು 20 .........................

(ಸಹಿ ಮಾಡಿದೆ)

(ಬಂಧಪತ್ರವನ್ನು ಬರೆದುಕೊಡುವ ವ್ಯಕ್ತಿಯ ಸಹಿ)

ಹೆಚ್ಚಿನ ಷರತ್ತುಗಳು ಯಾವುವಾದರೂ ಇದ್ದರೆ, ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಯು ಅವುಗಳಿಗೆ ಸರಿಯಾದ ಸಂಖ್ಯೆ ನೀಡಿ ನಮೂದಿಸತಕ್ಕದ್ದು.

(ಜಾಮೀನುದಾರರೊಂದಿಗಿನ ಒಂದು ಬಂಧಪತ್ರವನ್ನು ಬರೆದುಕೊಡಬೇಕಾದರೆ ಈ ಮುಂದಿನದನ್ನು ಸೇರಿಸಿ)

........................... ರಲ್ಲಿರುವ (ಪೂರ್ಣ ವಿವರಗಳೊಂದಿಗೆ ವಾಸಸ್ಥಳ) ................... ಎಂಬ ನಾನು / ನಾವು, ಮೇಲೆ ಹೇಳಿದ ......................... ರವರಿಗೆ (ಬಂಧಪತ್ರವನ್ನು ಬರೆದುಕೊಡುತ್ತಿರುವ ವ್ಯಕ್ತಿಯ ಹೆಸರು) ಜಾಮೀನುದಾರನಾಗಿದ್ದೇನೆ/ ಜಾಮೀನುದಾರರಾಗಿದ್ದೇವೆ ಮತ್ತು ಆತನು ಅದಕ್ಕೆ ತಪ್ಪಿದಲ್ಲಿ ನಾನು / ನಾವು, ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ......................... ರೂ. ಗಳ ಮೊಬಲಗನ್ನು ಸರ್ಕಾರವು ಮುಟ್ಟುಗೋಲು ಮಾಡಿಕೊಳ್ಳುವುದಕ್ಕೆ ನಾನು/ನಾವು

ಬದ್ಧನಿದ್ದೇನೆಂದು/ ಬದ್ಧರಿದ್ದೇವೆಂದು ........................ ಇವರ ಸಮ್ಮುಖದಲ್ಲಿ .................... ದಿನಾಂಕದ .............................ತಿಂಗಳು ............................. 20 ......... ರಂದು ಈ ಮೂಲಕ ಘೋಷಿಸುತ್ತೇನೆ/ ಘೋಷಿಸುತ್ತೇವೆ.

(ಸಹಿ)

## ನಮೂನೆ – VI

**[13ನೇ ನಿಯಮದ (19)ನೇ ಉಪನಿಯಮವನ್ನು ನೋಡಿ]**

**ಸ್ಥಾನಬದ್ಧತೆಯ ಆದೇಶ**

ಪ್ರಭಾರಿ ಅಧಿಕಾರಿ / ಯೋಜನಾ ವ್ಯವಸ್ಥಾಪಕ

........................ ಇವರಿಗೆ,

............................ ನೇ ಪ್ರಕರಣದ ಅಡಿಯಲ್ಲಿ ಕಾನೂನು ಸಂಬಂಧದಲ್ಲಿ ಸಂಘರ್ಷಕ್ಕೊಳಗಾದ/ ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಗುವಾಗಿರುವ, ವ್ಯಕ್ತಿಚಿತ್ರ ಸಂ. ................. ರಲ್ಲಿ ಹೇಳಿರುವ, .................. ಇಲ್ಲಿ ವಾಸವಾಗಿರುವ ............................ ಇವರ ಮಗ / ಮಗಳಾದ .......................... ವಯಸ್ಸಿನ .............................. (ಮಗುವಿನ ಹೆಸರು) ಇವನನ್ನು/ ಇವಳನ್ನು ..........................ನೇ ದಿನಾಂಕ ............... ತಿಂಗಳ ....................20.....................ರಂದು, ಬಾಲಕ ನ್ಯಾಯ ಮಂಡಲಿಯ ಪ್ರಧಾನ ಮ್ಯಾಜಿಸ್ಟ್ರೇಟ್/ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷನಾದ .............................. ಎಂಬ ನಾನು, ....................ನೇ ಪ್ರಕರಣದ ಅಡಿಯಲ್ಲಿ ............................... ಅವಧಿಯ ವರೆಗೆ .......................... ಇಲ್ಲಿರುವ ವಿಶೇಷ ಗೃಹ / ಮಕ್ಕಳ ಗೃಹ/ ಆಶ್ರಯಗೃಹದಲ್ಲಿ ಇರಿಸುವಂತೆ ಆದೇಶಿಸಿದ್ದೇನೆ.

ಸದರಿ ಮಗುವನ್ನು ಸ್ವೀಕರಿಸಿ ತಮ್ಮ ವಶಕ್ಕೆ ತೆಗೆದುಕೊಳ್ಳಲು ಮತ್ತು ಮೇಲೆ ಹೇಳಿದ ಆದೇಶವನ್ನು ಕಾನೂನಿಗನುಸಾರವಾಗಿ ಕಾರ್ಯಾಚರಣೆಗೆ ತರುವುದಕ್ಕಾಗಿ................................ ಇಲ್ಲಿರುವ ವಿಶೇಷ ಗೃಹ/ ಮಕ್ಕಳ ಗೃಹ/ ಆಶ್ರಯಗೃಹದಲ್ಲಿ ಅವನನ್ನು/ಅವಳನ್ನು ಇರಿಸಲು ಈ ಮೂಲಕ ನಿಮಗೆ ಅಧಿಕಾರ ನೀಡಲಾಗಿದೆ.

ಮಗುವಿನ ವಿವರ ಃ

(ಎ) ಹೆಸರು

(ಬಿ) ವಯಸ್ಸು

(ಸಿ) ಲಿಂಗ

(ಡಿ) ಗುರುತು ಚಿಹ್ನೆಗಳು

1.

2.

(ಇ) ಅಧಿನಿಯಮದ ಯಾವ ಪ್ರಕರಣದ ಅಡಿಯಲ್ಲಿ ಮಗುವನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಲಾಗಿದೆ

(ಎಫ್) ಸ್ವಾಧೀನದಲ್ಲಿರುವ ಸ್ವತ್ತಿನ ವಿವರಗಳು

ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಯ ಮೊಹರು ಹಾಕಿ ಸಹಿ ಮಾಡಿ ಈ ದಿನ ಎಂದರೆ ................. ...................... ದಿನಾಂಕ ..................... ತಿಂಗಳ 20....... ರಂದು ನೀಡಿದ್ದೇನೆ.

(ಸಹಿ)

ಪ್ರಧಾನ ಮ್ಯಾಜಿಸ್ಟ್ರೇಟ್, ಬಾಲಕ ನ್ಯಾಯ ಮಂಡಲಿ/

ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ.

**ಅಡಕ:** ಯಾವುದಾದರೂ ತೀರ್ಪು ಇದ್ದರೆ, ಅದರ ಪ್ರತಿ, ಆದೇಶಗಳ ಪ್ರತಿ, ಮನೆಯ ವಿವರಗಳು ಮತ್ತು ಹಿಂದಿನ ದಾಖಲೆಗಳು.

ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ ) ಅಧಿನಿಯಮ, 2000ದ ಅಡಿಯಲ್ಲಿನ ಪೂರ್ವವೃತ್ತಾಂತ

| ದಿನಾಂಕ | ಜಾರಿಗೊಳಿಸಿದ ಆದೇಶ ಹಾಗೂ ಸ್ಥಾನಬದ್ಧತೆಯ ಅವಧಿ | ಪ್ರಕರಣ | ಸಕ್ಷಮ ಪ್ರಾಧಿಕಾರ |
|---|---|---|---|
| (1) | (2) | (3) | (4) |

**ನಮೂನೆ - VII**

**[28ನೇ ನಿಯಮದ (5) (ಬಿ) ಉಪ ನಿಯಮವನ್ನು ನೋಡಿ]**

**ಕಾನೂನಿಗನುಸಾರವಾಗಿ ಒಂದು ಮಗುವು ದತ್ತಕಕ್ಕೆ ಮುಕ್ತವಾಗಿದೆ ಎಂದು ಘೋಷಿಸುವುದಕ್ಕೆ ಸಂಬಂಧಪಟ್ಟಂತೆ ಪರಿವೀಕ್ಷಣಾಧಿಕಾರಿಯ ವಿಚಾರಣಾ ವರದಿ**

ಪರಿವೀಕ್ಷಣಾಧಿಕಾರಿಯ ಹೆಸರು:
ಜಿಲ್ಲೆ:
ಎಸ್.ಐ.ಆರ್ ಸಂಖ್ಯೆ:
ದಿನಾಂಕ:

(1) ಮಗುವಿನ ವಿವರಗಳು
 (ಎ) ಹೆಸರು
 (ಬಿ) ವಯಸ್ಸು
 (ಸಿ) ಗುರುತು ಚಿಹ್ನೆಗಳು
(2) ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಮನವಿಯನ್ನು ಸಲ್ಲಿಸಿದ ಸಂಸ್ಥೆಯ ಹೆಸರು ಮತ್ತು ವಿಳಾಸ
(3) ದತ್ತಕದ ಕ್ರಮ ಜರುಗಿಸಲು ಸಂಸ್ಥೆಗೆ ಲೈಸೆನ್ಸ್ ನೀಡಲಾಗಿದೆಯೇ, ಹಾಗಿದ್ದಲ್ಲಿ ಯಾವ ಅವಧಿಯವರೆಗೆ ಲೈಸೆನ್ಸು ನೀಡಲಾಗಿದೆ ಎಂಬ ವಿವರಗಳನ್ನು ಒದಗಿಸಬೇಕು.
(4) ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಅರ್ಜಿ ಸಲ್ಲಿಸಿದ ದಿನಾಂಕ
(5) ಮಕ್ಕಳ ಕಲ್ಯಾಣ ಸಮಿತಿಯು, ಪರಿವೀಕ್ಷಣಾಧಿಕಾರಿಗೆ ಉಲ್ಲೇಖಿಸಿದ ಪತ್ರದ ದಿನಾಂಕ
(6) ಮಗು ಪತ್ತೆಯಾದ ಸ್ಥಳ, ಮಗುವನ್ನು ವಶಕ್ಕೆ ತೆಗೆದುಕೊಂಡ ದಿನಾಂಕ ಮತ್ತು ಸಮಯ, ಮುಂತಾದ ಮಾಹಿತಿಯ ವಿವರಗಳನ್ನು ಒದಗಿಸಬೇಕು
(7) ಮಗುವನ್ನು ಸ್ವೀಕರಿಸಿದ ಬಗ್ಗೆ ಸಂಸ್ಥೆಯು ಹತ್ತಿರದ ಪೊಲೀಸ್ ಠಾಣೆಗೆ ಒಂದು ವರದಿಯನ್ನು ಕಳುಹಿಸಿದ್ದರೆ, ಅದರ ವಿವರಗಳನ್ನು ಒದಗಿಸಬೇಕು
(8) ಮಗುವನ್ನು ಸ್ವೀಕರಿಸಿದ ಬಗ್ಗೆ ಸಂಸ್ಥೆಯು ಮಕ್ಕಳ ಕಲ್ಯಾಣ ಸಮಿತಿಗೆ ವರದಿಯನ್ನು ಕಳುಹಿಸಿದ್ದರೆ, ಅದರ ವಿವರಗಳನ್ನು ಒದಗಿಸಬೇಕು
(9) ಮಗುವಿನ ತಂದೆ ತಾಯಿಗಳನ್ನು ಅಥವಾ ಪಾಲಕರನ್ನು ಗುರುತಿಸಲು ಪೊಲೀಸರು ಕೈಗೊಂಡ ಕ್ರಮ ಮತ್ತು ಅದರ ವಿವರಗಳನ್ನು ಒದಗಿಸಬೇಕು
(10) ಮಗುವಿನ ತಂದೆ ತಾಯಿಗಳನ್ನು ಅಥವಾ ಪಾಲಕರನ್ನು ಪತ್ತೆಮಾಡಲು ಸಂಸ್ಥೆಯು ಕೈಗೊಂಡ ಕ್ರಮ ಮತ್ತು ಅದರ ವಿವರಗಳು
(11) ಪರಿವೀಕ್ಷಣಾಧಿಕಾರಿ ನಡೆಸಿದ ವಿಚಾರಣೆಯ ಸವಿಸ್ತಾರ ವರದಿ
(12) ಶಿಫಾರಸು

ಸಹಿ/
ಪರಿವೀಕ್ಷಣಾಧಿಕಾರಿ/ವಿಷಯ ನಿರ್ವಾಹಕ.

**ನಮೂನೆ - VIII**

**[34 ನೇ ನಿಯಮದ (1) ನೇ ಉಪ ನಿಯಮ ನೋಡಿ]**

**ಪ್ರಮಾಣೀಕರಿಸುವುದಕ್ಕಾಗಿ ಅರ್ಜಿ**

ತಾಲೂಕು: ಪಟ್ಟಣ/ ಗ್ರಾಮ ................
ಜಿಲ್ಲೆ:
(1) ಗೃಹದ ಹೆಸರು
(2) ಸ್ಥಾಪನೆಯ ದಿನಾಂಕ
(3) ನೋಂದಣಿ: ಯಾವ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲಾಗಿದೆಯೋ ಆ ಅಧಿನಿಯಮ, ನೋಂದಣಿ ಸಂಖ್ಯೆ, ದಿನಾಂಕ ಮತ್ತು ಸ್ಥಳ ಇತ್ಯಾದಿಗಳ ವಿವರ ಒದಗಿಸುವುದು
(4) ಆಡಳಿತ ಮಂಡಲಿಯ ಸದಸ್ಯರ ಹೆಸರುಗಳು ಮತ್ತು ಅವರ ವಿಳಾಸಗಳು
(5) ಆಡಳಿತ ಮಂಡಲಿಯ ನಿರ್ಣಯ
(6) ಎಫ್‌ಸಿಆರ್‌ಎ ಯ ವಿವರಗಳೂ ಸೇರಿದಂತೆ ನಿಧಿಯ ಮೂಲ
(7) ಸಂಸ್ಥೆಯ ಕಾರ್ಯ ಚಟುವಟಿಕೆಗಳು
(8) ರಾಜ್ಯ / ಕೇಂದ್ರ / ಅರೆ ಸರ್ಕಾರ / ವಿದೇಶಿ ಅನುದಾನವೂ ಸೇರಿದಂತೆ ಇತರೆ ಹಣ ಒದಗಿಸುವ ಏಜೆನ್ಸಿಗಳಿಂದ ಯಾವುವೇ ಕಾರ್ಯಚಟುವಟಿಕೆಗಳಿಗೆಂದು/ ಕಾರ್ಯಕ್ರಮಗಳಿಗೆಂದು ಹಣಕಾಸು ನೆರವನ್ನು ಸ್ವೀಕರಿಸಲಾಗಿದ್ದರೆ, ಅದರ ವಿವರಗಳನ್ನು ಒದಗಿಸುವುದು
(9) ಲಭ್ಯವಿರುವ ಮೂಲಭೂತ ಸೌಲಭ್ಯಗಳು:
 (ಎ) ಸಂಸ್ಥೆಯ ಆವರಣದ ಒಟ್ಟು ವಿಸ್ತೀರ್ಣ

(ಬಿ) ಕಟ್ಟಡದ ಮೇಲ್ಪಾಯದ ವಿಸ್ತೀರ್ಣ
(ಸಿ) ಆಟದ ಮೈದಾನ
(ಡಿ) ಅಡುಗೆ ಕೋಣೆ, ಸಾಲು ಹಾಸಿಗೆಗಳುಳ್ಳ ಪಡಸಾಲೆ, ಪ್ರಾರ್ಥನಾ ಕೊಠಡಿ, ಇತ್ಯಾದಿ
(ಇ) ಪ್ರಾಥಮಿಕ ಶಿಕ್ಷಣ, ಪ್ರೌಢಶಿಕ್ಷಣ ಸೌಲಭ್ಯಗಳು
(ಎಫ್) ಸಂಸ್ಥೆಯಲ್ಲಿ ಯಾವುದೇ ಶಾಲೆ ಇಲ್ಲದಿದ್ದರೆ ಸಂಸ್ಥೆಯ ಆವರಣದಿಂದ ಹೊರಗೆ ಇರುವ ಶಾಲೆಗೆ ದೂರ
(ಜಿ) ಲಭ್ಯವಿರುವ ಮನರಂಜನಾ ಸೌಲಭ್ಯಗಳು
(ಎಚ್) ಹತ್ತಿರದ ಆಸ್ಪತ್ರೆಯ (ಸರ್ಕಾರಿ) ವಿಳಾಸ ಮತ್ತು ದೂರ

(10) ಸಂಸ್ಥೆಯ / ಗೃಹದ ನೈರ್ಮಲ್ಯ ವ್ಯವಸ್ಥೆ
(11) ಜಲ ಸಂಪನ್ಮೂಲಗಳು ಸಾಕಷ್ಟಿವೆಯೇ, ಇಲ್ಲವೆ
(12) ಸಂಪರ್ಕ ವಿಳಾಸ
(13) ಸಂಪರ್ಕಿಸಬೇಕಾದ ವ್ಯಕ್ತಿಗಳ ಹೆಸರು ಮತ್ತು ವಿಳಾಸ
(14) ಮಂಜೂರಾದ ಸಿಬ್ಬಂದಿ ಮತ್ತು ಅವರ ಪ್ರಸಕ್ತ ಹುದ್ದೆಗಳ ವಿವರಗಳು
(15) ಸಂಬಂಧಪಟ್ಟ ಇತರ ಯಾವುದೇ ಮಾಹಿತಿ

**ಘೋಷಣೆ**

ಸಂಸ್ಥೆಯ ವ್ಯವಸ್ಥಾಪನೆಯ ಮಂಡಲಿಯ ಪರವಾಗಿ, ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000 ಮತ್ತು ಅದಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಷರತ್ತುಗಳನ್ನು ಗೃಹವು ಪಾಲಿಸುತ್ತದೆಂದು ನಾನು ಈ ಮೂಲಕ ಘೋಷಿಸುತ್ತೇನೆ ಮತ್ತು ನಾನು ಸದರಿ ಅಧಿನಿಯಮ ಮತ್ತು ಅದಕ್ಕೆ ಸಂಬಂಧಪಟ್ಟ ನಿಯಮಗಳಲ್ಲಿ ನಿರೂಪಿಸಲಾದಂತೆ ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000ದ ಮೂಲಕ ಪ್ರಮಾಣೀಕರಣಕ್ಕಾಗಿ ಕೈಗೊಳ್ಳಬೇಕಾಗಿದೆಯೆಂದು ಅದರಲ್ಲಿ ನಿರೂಪಿಸಲಾದ ಎಲ್ಲ ಷರತ್ತುಗಳನ್ನು ಪಾಲಿಸುತ್ತೇನೆಂದು ಮತ್ತು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ – ಇವರು ಅಗತ್ಯಪಡಿಸಬಹುದಾದಂಥ ವಿವರ ಪಟ್ಟಿಗಳನ್ನು ಸಲ್ಲಿಸುತ್ತೇನೆಂದು ಪ್ರಮಾಣ ಮಾಡುತ್ತೇನೆ.

ಸಹಿ
ಅಧೀಕ್ಷಕ

**ನಮೂನೆ – IX**

**[37 ನೇ ನಿಯಮದ (4) (ಸಿ) (ii)ನೇ ಉಪನಿಯಮವನ್ನು ನೋಡಿ]**

**ಸಾಮಾಜಿಕ ತನಿಖಾ ವರದಿ**

ಕ್ರಮ ಸಂಖ್ಯೆ ..........................
(ವಿಳಾಸ) ..................................... ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಗೆ ಸಲ್ಲಿಸಲಾಗಿದೆ.
ವ್ಯಕ್ತಿ ಚಿತ್ರಣ ಸಂಖ್ಯೆ ............. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ವ್ಯಕ್ತಿ ಚಿತ್ರಣ ಸಂಖ್ಯೆ
....................... ನೇ ಪ್ರಕರಣದ ಅಡಿಯಲ್ಲಿ

ವ್ಯಕ್ತಿ ಚಿತ್ರಣ ಶೀರ್ಷಿಕೆ
ಪೊಲೀಸ್ ಠಾಣೆ
ಮಗುವನ್ನು ಸ್ವೀಕರಿಸಿದ ವ್ಯಕ್ತಿಯ ವಿವರಗಳು
ಮಗುವನ್ನು ಸ್ವೀಕರಿಸಿದ, ಸಂಪರ್ಕಿಸಿದ ಅಥವಾ ಬಂಧಿಸಿದ ವ್ಯಕ್ತಿ / ಏಜೆನ್ಸಿಯ ಹೆಸರು:
ವಿಳಾಸ:
ದೂರವಾಣಿ ಸಂಖ್ಯೆ:
ಆರೋಪಿಸಲಾದ ಅಪರಾಧದ ಸ್ವರೂಪ (ಕಾನೂನಿನ ಸಂಬಂಧದಲ್ಲಿ ಸಂಘರ್ಷಕ್ಕೆ ಒಳಗಾದ ಮಗುವಿನ ಸಂದರ್ಭದಲ್ಲಿ)
ಮಗುವಿಗೆ ಸಂಬಂಧಿಸಿದ ಅಂಕಿ ಅಂಶಗಳು

(1) ಹೆಸರು
(2) ವಯಸ್ಸು
(3) ಲಿಂಗ
(4) ಧರ್ಮ /ಜಾತಿ
(5) ಶಿಕ್ಷಣ
(6) ವೃತ್ತಿ
(7) ಖಾಯಂ ವಿಳಾಸ
(8) ಬಂಧನಕ್ಕೆ ಮುಂಚೆ ಇದ್ದ ಕೊನೆಯ ವಿಳಾಸ
(9) ಮಗುವಿನ ಸಧ್ಯದ ಮನೆಯ ಹತ್ತಿರದ ಮೂರು ಪ್ರಮುಖ ಗುರುತುಗಳು
(10) ಈ ಹಿಂದಿನ ಸಾಂಸ್ಥಿಕ ಜೀವನದ ವೃತ್ತಾಂತ
(11) ಮಗುವು ಪತ್ತೆಯಾದ ದಿನಾಂಕ ಮತ್ತು ಸಮಯ
(12) ಮಗುವು ಪತ್ತೆಯಾದ ಸ್ಥಳದ ಹತ್ತಿರದ ಕನಿಷ್ಠ ಮೂರು ಪ್ರಮುಖ ಗುರುತುಗಳು

**ಕುಟುಂಬ**

(ಎ) ಕುಟುಂಬದ ಸದಸ್ಯರು
(ಬಿ) ಹೆಸರು
(ಸಿ) ವಯಸ್ಸು
(ಡಿ) ವೃತ್ತಿ ಅಥವಾ ಶಾಲೆ
(ಇ) ಆರೋಗ್ಯ
(ಎಫ್) ಇತರ ವಿವರಗಳು
ತಂದೆ / ಮಲ ತಂದೆ
ತಾಯಿ / ಮಲತಾಯಿ
ಒಡಹುಟ್ಟಿದವರು

ಇತರ ಸಂಬಂಧಿಗಳು

---

**ಮನೆ ಅಧ್ಯಯನ ವರದಿ**

ಮನೆಯ ವಿವರಣೆ ಮತ್ತು ಜೀವನ ಸ್ಥಿತಿಗತಿಗಳು
ವಾಸಸ್ಥಳದ ಸ್ವರೂಪ (ಕಚ್ಚಾ, ಪಕ್ಕಾ, ಕೊಠಡಿಗಳ ಸಂಖ್ಯೆ, ವಾಸದ ನೆಲೆಗಟ್ಟು, ಸುತ್ತಮುತ್ತಲ ಸ್ಥಳ ಇತ್ಯಾದಿ)

ಆರ್ಥಿಕ ಸ್ಥಿತಿಗತಿಯ ಬಗ್ಗೆ ತಿಳಿಸಿ

---

**ಮಗುವಿನ ಚರಿತ್ರೆ**

ದೈಹಿಕ ಸ್ಥಿತಿ – ಯಾವುದೇ ಗಂಭೀರ ಕಾಯಿಲೆ / ಅಶಕ್ತತೆ ಇತ್ಯಾದಿ
ಮಾನಸಿಕ ಸ್ಥಿತಿ – ಮಾನಸಿಕ ಕಾಯಿಲೆ / ಮಾನಸಿಕ ಬೆಳವಣಿಗೆಯ ಕುಂಠಿತ ಇತ್ಯಾದಿ
ಮಕ್ಕಳದುರುಪಯೋಗ – ದೈಹಿಕ, ಲೈಂಗಿಕ, ನಿರ್ಲಕ್ಷ್ಯ, ಹಿಂಸಿಸುವುದು, ಇತರ ಯಾವುದೇ ರೀತಿಯ ಶೋಷಣೆ
ಹವ್ಯಾಸ – ಮದ್ಯ ವ್ಯಸನಿ / ಮಾದಕ ಔಷಧ ಸೇವನೆಯವನು / ಜೂಜುಕೋರ / ಧೂಮಪಾನ ಮಾಡುವವನು / ಇತರ ವಿಷಯುಕ್ತ ಪದಾರ್ಥ ಬಳಕೆ ಮಾಡುವವನು, ಇತ್ಯಾದಿ
ಹಿತಾಸಕ್ತಿಗಳು – ಆಸಕ್ತಿಯ ಕ್ಷೇತ್ರವನ್ನು ನಿರ್ದಿಷ್ಟಪಡಿಸಬೇಕು
ನೈತಿಕ ಮೌಲ್ಯಗಳು – ಕೌಟುಂಬಿಕ ಮೌಲ್ಯಗಳು / ಧಾರ್ಮಿಕ ಮೌಲ್ಯಗಳು ಮತ್ತು ಅವುಗಳ ಪ್ರಭಾವ
ಮನರಂಜನಾ ಚಟುವಟಿಕೆಗಳು – ವಿವರಗಳು
ಶಾಲೆ– ಶಾಲೆ, ಶಿಕ್ಷಕರು, ಸಹಪಾಠಿಗಳು ಇವರ ಬಗ್ಗೆ ಮಗುವಿಗೆ ಇರುವ ಮನೋಭಾವ ಮತ್ತು ಅವರಿಗೆ ಮಗುವಿನ ಬಗ್ಗೆ ಇರುವ ಮನೋಭಾವ
ಕೆಲಸದ ದಾಖಲೆ– ಮಾಡುತ್ತಿದ್ದ ಕೆಲಸ, ಕೆಲಸದಲ್ಲಿ ಆಸಕ್ತಿ ಕಳೆದುಕೊಂಡಿದ್ದರ ಕಾರಣಗಳು, ಕೆಲಸದ ಅಥವಾ ಯಜಮಾನರ ಬಗ್ಗೆ ಇರುವ ಮನೋಭಾವ
ಅಸಾಧಾರಣ ಗುಣಲಕ್ಷಣಗಳು ಮತ್ತು ವಿಲಕ್ಷಣ ವ್ಯಕ್ತಿತ್ವ
ಒಡನಾಡಿಗಳು ಮತ್ತು ಮಗುವಿನ ಮೇಲೆ ಅವರ ಪ್ರಭಾವ
ಮನೆಯಿಂದ ತಪ್ಪಿಸಿಕೊಂಡು ಓಡಿಹೋಗುವ ಅಭ್ಯಾಸ ಏನಾದರೂ ಇದ್ದರೆ, ಅದು
ನೆರೆ ಹೊರೆ ಮತ್ತು ಮಗುವಿನ ಬಗ್ಗೆ ನೆರೆ ಹೊರೆಯವರ ಅಭಿಪ್ರಾಯ
ಮನೆಯಲ್ಲಿ ಶಿಸ್ತಿಗೆ ಸಂಬಂಧಿಸಿದಂತೆ ತಂದೆ ತಾಯಿಯರ ಮನೋಭಾವ ಮತ್ತು ಅದಕ್ಕೆ ಮಗುವಿನ ಪ್ರತಿಕ್ರಿಯೆ
ಇತರ ಯಾವುದೇ ಷರಾಗಳು.

---

**ವಿಚಾರಣೆಯ ಫಲಿತಾಂಶ–**

ಭಾವನಾತ್ಮಕ ಅಂಶಗಳ ಪ್ರಭಾವ ಮತ್ತು ಮನೋಪ್ರವೃತ್ತಿ
ದೈಹಿಕ ಸ್ಥಿತಿಗಳು ಮತ್ತು ಬುದ್ಧಿ ಶಕ್ತಿಯ ನಿರ್ಧರಣೆ
ಸಮಾಜೋ – ಆರ್ಥಿಕ ಅಂಶಗಳ ಪ್ರಭಾವ
ದುರಾಚಾರ, ಕೆಟ್ಟದಾಗಿ ನಡೆಸಿಕೊಳ್ಳುವುದು, ಶೋಷಣೆ, ಇತ್ಯಾದಿಗಳ ಪ್ರಭಾವ
ಗುರುತಿಸಲಾದ ಸಮಸ್ಯೆಗಳು ಮತ್ತು ಸದ್ಯದ ವರ್ತನೆಗೂ – ಸಮಸ್ಯೆಗೂ ಇರುವ ಸಂಬಂಧ
ಸಮಸ್ಯೆಗಳು ಉಂಟಾಗಲು ಇದ್ದಿರಬಹುದಾದ ಕಾರಣಗಳು
ಸಮಸ್ಯೆಗಳ ಮತ್ತು ವಿವಾದಾಂಶಗಳ ವಿಶ್ಲೇಷಣೆ
ಮಗುವಿಗೆ ನೆರವು ನೀಡುವಲ್ಲಿ ಕುಟುಂಬದವರ / ಸಂಬಂಧಿಗಳ ಪ್ರತಿಕ್ರಿಯೆ
ಪರಿವೀಕ್ಷಣಾಧಿಕಾರಿ / ಮಕ್ಕಳ ಕಲ್ಯಾಣ ಅಧಿಕಾರಿಯು ಮಗುವಿನ ಬಗ್ಗೆ ಸೂಚಿಸಿದ ನಿರ್ವಹಣಾ ಯೋಜನೆ

ಸಹಿ
ಪರಿವೀಕ್ಷಣಾಧಿಕಾರಿ / ವಿಷಯ ನಿರ್ವಾಹಕ

## ನಮೂನೆ – X

**[37 ನೇ ನಿಯಮದ (4) (ಸಿ) (xiv)ನೇ ಉಪನಿಯಮವನ್ನು ನೋಡಿ]**

**ಬಿಡುಗಡೆಗೆ ಮುಂಚಿನ ವರದಿ**

(1) ಮಗುವಿನ ಹೆಸರು
(2) ಮಗುವಿನ ವಯಸ್ಸು
(3) ಪ್ರವೇಶ ಸಂಖ್ಯೆ
(4) ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿ ಆದೇಶ ಸಂಖ್ಯೆ
(5) ಪಡೆದ ವಿದ್ಯಾರ್ಹತೆ
(6) ಬೇರೆ ಬೇರೆ ಸಂಸ್ಥೆಗಳಲ್ಲಿ ಮಗುವನ್ನು ಇರಿಸಿದ ಬಗ್ಗೆ ಮತ್ತು ತರಬೇತಿ ಪಡೆದ ಬಗ್ಗೆ ವಿವರಗಳು
(7) ಅಂತಿಮ ಪ್ರಗತಿ ವರದಿ (ಲಗತ್ತಿಸಬೇಕು)
(8) ಬಿಡುಗಡೆ ದಿನಾಂಕ
(9) ವರದಿಯ ದಿನಾಂಕ
(10) ಸಾಧ್ಯವಿರಬಹುದಾದ ಸ್ಥಳ ನಿರ್ದೇಶನಗಳೂ ಸೇರಿದಂತೆ ಶಿಫಾರಸ್ಸು ಮಾಡಲಾದ ಪುನರ್ವಸತಿ ಯೋಜನೆ
(11) ಅನ್ವಯಿಸುವುದಾದರೆ ಪ್ರಾಯೋಜಕತ್ವದ ಅಗತ್ಯತೆ ಮತ್ತು ವರದಿ
(12) ಮಗುವಿನ ಅಭಿಪ್ರಾಯ
(13) ಇತರ ಯಾವುದೇ ಮಾಹಿತಿ

**ಟಿಪ್ಪಣಿ:** ಬಿಡುಗಡೆ ದಿನಾಂಕಕ್ಕೆ 6 ತಿಂಗಳು ಮೊದಲೇ ಈ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅಂತಿಮ ಪರಿಶೀಲನಾ ವರದಿ / ಸಂಬಂಧಪಟ್ಟ ಇತರ ಎಲ್ಲ ಮಾಹಿತಿಯ ಶಿಫಾರಸ್ಸುಗಳನ್ನು ಪರಿಗಣಿಸತಕ್ಕದ್ದು.

(ಸಹಿ)

## ನಮೂನೆ – XI

**(37 ನೇ ನಿಯಮದ (10) (ಇ) ಉಪನಿಯಮವನ್ನು ನೋಡಿ)**

.......................... ರಾಜ್ಯ ಸರ್ಕಾರದ / ಕೇಂದ್ರ ಒಕ್ಕೂಟ ಆಡಳಿತದ ಬಿಡುಗಡೆ ಪ್ರಾಧಿಕಾರಿಯಾದ ....................... ಎಂಬ ನಾನು, (ಹೆಸರು ಮತ್ತು ಪದನಾಮ) ಬಾಲಕ ನ್ಯಾಯ ಮಂಡಲಿಯು/ ಮಕ್ಕಳ ಕಲ್ಯಾಣ ಸಮಿತಿಯು ತನ್ನ ಆದೇಶದ ಮೂಲಕ ಬಾಲಕ ನ್ಯಾಯ (ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000 ................ ನೇ ಪ್ರಕರಣದ ಅಡಿಯಲ್ಲಿ ................ ದಿನಾಂಕ ............... ತಿಂಗಳು 20 .............. ರಂದು .............. ಅವಧಿಯವರೆಗೆ ಪರಿವೀಕ್ಷಣಾಲಯದಲ್ಲಿ, ವಿಶೇಷ ಗೃಹದಲ್ಲಿ, ಮಕ್ಕಳ ಗೃಹದಲ್ಲಿ, ಆಶ್ರಯ ಗೃಹದಲ್ಲಿ ಸ್ಥಾನಬದ್ಧತೆಯಲ್ಲಿಡಲು ಆದೇಶಿಸಿರುವ ಮತ್ತು ಈಗ ................... ಇಲ್ಲಿನ ............... ಗೃಹದಲ್ಲಿರುವ, .................. ಸಂಖ್ಯೆಯ ................... ಜಾತಿಯ .................. ಇಲ್ಲಿನ ನಿವಾಸಿಯಾದ .................... ಇವರ ಮಗನಾದ/ ಮಗಳಾದ ..................... ಇವರನ್ನು ಮೇಲೆ ಹೇಳಿದ ತಂಗುವ ಉಳಿದ ಅವಧಿಯಲ್ಲಿ .............................. ಇವರ ಮೇಲ್ವಿಚಾರಣೆ ಮತ್ತು ಅಧಿಕಾರದಲ್ಲಿ ಇರಿಸಬೇಕೆಂಬ ಷರತ್ತಿನ ಮೇಲೆ ......................... ಗೃಹದಿಂದ ಬಿಡುಗಡೆ ಮಾಡಲು ಈ ಆದೇಶದ ಮೂಲಕ ಅನುಮತಿಸಿದ್ದೇನೆ.

ಈ ಆದೇಶವನ್ನು, ಇದರಲ್ಲಿ ನಿರೂಪಿಸಲಾದ ಷರತ್ತುಗಳಿಗೊಳಪಟ್ಟು ಹೊರಡಿಸಲಾಗಿದೆ. ಈ ಯಾವುವೇ ಷರತ್ತುಗಳನ್ನು ಉಲ್ಲಂಘಿಸಿದರೆ, ಅದು ರದ್ದುಗೊಳ್ಳಲು ಬದ್ಧವಾಗಿರತಕ್ಕದ್ದು.

ದಿನಾಂಕ: ಬಿಡುಗಡೆಗೊಳಿಸುವ ಪ್ರಾಧಿಕಾರಿಯ ಸಹಿ ಮತ್ತು ಪದನಾಮ

ಸ್ಥಳ:

**ಷರತ್ತುಗಳು:**

(1) ಬಿಡುಗಡೆಯಾದ ವ್ಯಕ್ತಿಯು, ಮಾಫಿಯನ್ನು ಕೂಡಲೇ ರದ್ದುಮಾಡಿದ ಹೊರತು, ಅವನ / ಅವಳ ಸ್ಥಾನಬದ್ಧತೆಯ ಅವಧಿ ಮುಗಿಯುವವರೆಗೂ ...................... ಇವರ ಮೇಲ್ವಿಚಾರಣೆ ಮತ್ತು ಅಧಿಕಾರದ ಅಡಿಯಲ್ಲಿ ಇರಲು ......................... ಇಲ್ಲಿಗೆ ಹೋಗತಕ್ಕದ್ದು.

(2) ಅವನು / ಅವಳು ...................... ಇವರ ಒಪ್ಪಿಗೆಯಿಲ್ಲದೆ ಆ ಸ್ಥಳದಿಂದ ಅಥವಾ .................. ಇವರು ಹೆಸರಿಸಲಾದ ಇತರ ಯಾವುದೇ ಸ್ಥಳದಿಂದ ಹೊರಹೋಗತಕ್ಕದ್ದಲ್ಲ.

(3) ಅವನು / ಅವಳು ತಾನು ನೇಮಕಗೊಂಡ ಕಡೆ ಅಥವಾ ಬೇರೆಕಡೆ ತಪ್ಪದೆ ಮತ್ತು ನಿಯತವಾಗಿ ಹಾಜರಾಗುವ ಬಗ್ಗೆ ಸದರಿ ...................... ಇವರಿಂದ ಸ್ವೀಕರಿಸಬಹುದಾದಂಥ ಸೂಚನೆಗಳನ್ನು ಅವನು/ ಅವಳು ಪಾಲಿಸತಕ್ಕದ್ದು.

(4) ಅವನು / ಅವಳು, ನಿಯತವಾಗಿ ...................... ಅಲ್ಲಿನ ಹಾಜರಾತಿ ಕೇಂದ್ರದಲ್ಲಿ ಹಾಜರಾಗತಕ್ಕದ್ದು.

(5) ಅವನು / ಅವಳು, ಯಾವುದೇ ಅಪರಾಧವನ್ನು ಮಾಡತಕ್ಕದ್ದಲ್ಲ ಮತ್ತು .................. ಅವರಿಗೆ ತೃಪ್ತಿಕರವಾಗುವಂತೆ ಹಿತಮಿತವಾದ ಮತ್ತು ಕ್ರಿಯಾಶೀಲ ಜೀವನವನ್ನು ನಡೆಸತಕ್ಕದ್ದು.

(6) ಅವನು / ಅವಳು, ಮೇಲ್ಕಂಡ ಯಾವುವೇ ಷರತ್ತುಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಈ ಮೂಲಕ ಮಂಜೂರಾದ ಸ್ಥಾನಬದ್ಧತೆಯ ಬಗೆಗಿನ ಮಾಫಿ ಅವಧಿಯು ರದ್ದಾಗತಕ್ಕದ್ದು ಮತ್ತು ಮಾಫಿಯು ಹಾಗೆ ರದ್ದಾದ ಮೇಲೆ, ಅವನ/ ಅವಳ ಬಗ್ಗೆ, ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000 ದ 59 ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಕ್ರಮಕೈಗೊಳ್ಳತಕ್ಕದ್ದು.

ನನಗೆ ಓದಿ ಹೇಳಲಾದ / ವಿವರಿಸಿ ಹೇಳಲಾದ ಮೇಲ್ಕಂಡ ಷರತ್ತುಗಳ ಬಗ್ಗೆ ನನಗೆ ಅರಿವಿದೆಯೆಂದು ಈ ಮೂಲಕ ನಾನು ಒಪ್ಪಿದ್ದೇನೆ ಮತ್ತು ನಾನು ಅವುಗಳನ್ನು ಅಂಗೀಕರಿಸಿದ್ದೇನೆ.

(ಬಿಡುಗಡೆಯಾದ ವ್ಯಕ್ತಿಯ ಸಹಿ)

ಮೇಲೆ ನಿರ್ದಿಷ್ಟಪಡಿಸಿರುವ ಷರತ್ತುಗಳನ್ನು ............................... (ಹೆಸರು) ಅವರಿಗೆ ಓದಿ ಹೇಳಲಾಗಿದೆಯೆಂದು / ವಿವರಿಸಿ ಹೇಳಲಾಗಿದೆಯೆಂದು ಮತ್ತು ಆ ಯಾವ ಷರತ್ತುಗಳ ಮೇಲೆ ಅವನಿಗೆ / ಅವಳಿಗೆ ಸ್ಥಾನಬದ್ಧತೆಯ ಅವಧಿಯ ಮಾಫಿ ದೊರೆಕಿದೆಯೋ ಆ ಷರತ್ತುಗಳನ್ನು ಅವನು / ಅವಳು ಒಪ್ಪಿರುವರೆಂದು ಮತ್ತು ತದನುಸಾರವಾಗಿ ಅವನನ್ನು/ ಅವಳನ್ನು .......................... ರಂದು ಬಿಡುಗಡೆ ಮಾಡಲಾಗಿದೆಯೆಂದು ಪ್ರಮಾಣೀಕರಿಸುತ್ತೇನೆ.

ಪ್ರಮಾಣೀಕರಿಸುವ ಪ್ರಾಧಿಕಾರಿಯ ಸಹಿ ಮತ್ತು ಪದನಾಮ,
(ಎಂದರೆ, ಸಂಸ್ಥೆಯ ಪ್ರಭಾರಿ ಅಧಿಕಾರಿ).

ವಿಧಿಸಬೇಕಾದ ಹೆಚ್ಚುವರಿ ಷರತ್ತುಗಳು ಯಾವುವಾದರೂ ಇದ್ದರೆ, ಅವುಗಳನ್ನು ಬಿಡುಗಡೆ ಮಾಡುವ ಪ್ರಾಧಿಕಾರಿಯು ಸೇರಿಸಬಹುದು.

## ನಮೂನೆ – XII

**[37 ನೇ ನಿಯಮದ (13) (ಸಿ) ಉಪನಿಯಮವನ್ನು ನೋಡಿ]**

**ಮಗುವು ಸಹಿ ಮಾಡಬೇಕಾದ ಬಂಧಪತ್ರ**

....................... ರಾಜ್ಯದ ...................... ಇಲ್ಲಿ ವಾಸಿಸುತ್ತಿರುವ (ಮನೆ ಸಂಖ್ಯೆ, ರಸ್ತೆ, ಗ್ರಾಮ / ಪಟ್ಟಣ/ ಜಿಲ್ಲೆಯ ಪೂರ್ಣ ವಿವರಗಳನ್ನು ಒದಗಿಸುವುದು) ................. ಎಂಬ ನಾನು, ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000 ದ .................. ಪ್ರಕರಣದ ಅಡಿಯಲ್ಲಿ ................ ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಯು ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ನಿಯಮಗಳು, 20 ........ರ .............ನೇ ನಿಯಮದ ................ನೇ ಉಪ ನಿಯಮದ ಅಡಿಯಲ್ಲಿ ಈ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಪಾಲಿಸುವ ಸಂಬಂಧದಲ್ಲಿ ನಾನು ಬಂಧಪತ್ರ ಬರೆದು ಕೊಟ್ಟ ತರುವಾಯ ನನ್ನ ಸ್ವಂತ ಊರಿಗೆ ಹಿಂದಿರುಗುವಂತೆ ಆದೇಶಿಸಿರುವುದರಿಂದ; ಈಗ, ................... ಅವಧಿಯಲ್ಲಿ ಈ ಷರತ್ತುಗಳನ್ನು ಪಾಲಿಸುತ್ತೇನೆಂದು ನಾನು ಶ್ರದ್ಧಾಪೂರ್ವಕವಾಗಿ ವಾಗ್ದಾನ ಮಾಡುತ್ತೇನೆ.

ನಾನು, ಈ ಮೂಲಕ ಈ ಮುಂದಿನವುಗಳಿಗೆ ಬದ್ಧನಾಗಿರುತ್ತೇನೆ,-

(1) .............. ಅವಧಿಯಲ್ಲಿ ಯಾವ ಗ್ರಾಮ / ಪಟ್ಟಣ/ ಜಿಲ್ಲೆಗೆ ನನ್ನನ್ನು ಕಳುಹಿಸಲಾಗಿದೆಯೋ ಅದನ್ನು, ನಾನು ಸಾಮಾನ್ಯವಾಗಿ ಬಿಡುವುದಿಲ್ಲ ಮತ್ತು ಸಾಮಾನ್ಯವಾಗಿ, ಇಲ್ಲಿಗೂ ಹಿಂದಿರುಗುವುದಿಲ್ಲ ಅಥವಾ .............. ಮಂಡಲಿಯ / ಸಮಿತಿಯ ಪೂರ್ವಾನುಮತಿ ಪಡೆಯದೆ ಸದರಿ ಜಿಲ್ಲೆಯಾಚೆಗೆ ಎಲ್ಲಿಗೂ ಹೋಗುವುದಿಲ್ಲ;

(2) ನಾನು, ಸದರಿ ಅವಧಿಯಲ್ಲಿ, ನನ್ನನ್ನು ಕಳುಹಿಸಲಾಗಿರುವ ಗ್ರಾಮ / ಪಟ್ಟಣ ಅಥವಾ ಸದರಿ ಜಿಲ್ಲೆಯಲ್ಲಿ ಕೆಲಸಕ್ಕೆ / ಶಾಲೆಗೆ ಹಾಜರಾಗುತ್ತೇನೆ;

(3) ನಾನು, ಒಂದು ವೇಳೆ ಸದರಿ ಜಿಲ್ಲೆಯಲ್ಲಿರುವ ಇತರ ಯಾವುದೇ ಸ್ಥಳದಲ್ಲಿ ಕೆಲಸಕ್ಕೆ / ಶಾಲೆಗೆ ಹಾಜರಾಗುವುದಿದ್ದರೆ, ನನ್ನ ಸಾಮಾನ್ಯ ವಾಸಸ್ಥಳದ ಬಗ್ಗೆ ಮಂಡಲಿಗೆ / ಸಮಿತಿಗೆ ತಿಳಿಸುತ್ತೇನೆ;

(4) ನಾನು ಸನ್ನಡತೆಯವನಾಗಿರುತ್ತೇನೆ ಮತ್ತು ಈ ಬಂಧಪತ್ರದಲ್ಲಿ ನಿರೂಪಿಸಲಾಗಿರುವ ಮತ್ತು ನಾನು ಒಪ್ಪಿರುವ ಯಾವುವೇ ಷರತ್ತುಗಳನ್ನು ಯಾವುದೇ ರೀತಿಯಲ್ಲೂ ಉಲ್ಲಂಘಿಸುವುದಿಲ್ಲ ;

(5) ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯಲ್ಲಿ ನಾನು ವಿಶೇಷವಾಗಿ ಈ ಮುಂದಿನ ಷರತ್ತುಗಳನ್ನು ಪಾಲಿಸುತ್ತೇನೆ,-

(ಎ) ಆದೇಶದಲ್ಲಿ ಹೆಸರಿಸಿದ ಯಾರ ಬಳಿಗೆ ನನ್ನನ್ನು ಕಳುಹಿಸಲಾಗಿದೆಯೋ ಆ ಸಂಬಂಧಿಯ ಅಥವಾ ಸೂಕ್ತ ವ್ಯಕ್ತಿಯ ಮಾರ್ಗದರ್ಶನ ಮತ್ತು ನೆರವನ್ನು ನಾನು ಪಡೆಯುತ್ತೇನೆ ಮತ್ತು ಸದರಿ ವ್ಯಕ್ತಿಯು, ಕಾಲಕಾಲಕ್ಕೆ ನನಗೆ ನೀಡುವ ನಿರ್ದೇಶನಗಳನ್ನು ನಾನು ಪಾಲಿಸುತ್ತೇನೆ;

(ಬಿ) ನನ್ನನ್ನು ಕಳುಹಿಸಿರುವ ಮನೆಯಿಂದ, ಶಾಲೆಯಿಂದ, ಕೆಲಸದ ಸ್ಥಳದಿಂದ ತಪ್ಪಿಸಿಕೊಂಡು ಓಡಿ ಹೋಗುವುದಿಲ್ಲ;

(ಸಿ) ನಾನು ಪ್ರಾಮಾಣಿಕವಾಗಿ ಜೀವಿಸುತ್ತೇನೆ ಮತ್ತು ಪ್ರಾಮಾಣಿಕ ಜೀವನೋಪಾಯ ನಡೆಸಲು ಯತ್ನಿಸುತ್ತೇನೆ. ಶಾಲೆಗೆ ನಿಯತವಾಗಿ ಹಾಜರಾಗುತ್ತೇನೆ ಮತ್ತು ಪ್ರಾಧಿಕಾರಿಗಳಿಗೆ ವಿಧೇಯನಾಗಿರುತ್ತೇನೆ. ನನ್ನನ್ನು ಯಾರ ಬಳಿ ಕಳುಹಿಸಿಕೊಡಲಾಗಿದೆಯೋ ಆ ಸಂಬಂಧಿಯ ಅಥವಾ ಸೂಕ್ತ ವ್ಯಕ್ತಿಯ ಅನುಮತಿ ಇಲ್ಲದೆ ನನ್ನ ಕೆಲಸವನ್ನು / ಶಾಲೆಯನ್ನು ಬದಲಾಯಿಸುವುದಿಲ್ಲ ;

(ಡಿ) ಹೆಚ್ಚುವರಿ ಷರತ್ತುಗಳು, ಯಾವುವಾದರೂ ಇದ್ದರೆ, ಅವುಗಳು;

(6) ನಾನು, ಮೇಲೆ ನಿರ್ದಿಷ್ಟಪಡಿಸಿದ ಯಾವುವೇ ಷರತ್ತುಗಳನ್ನು ಪಾಲಿಸಲು ತಪ್ಪಿದಲ್ಲಿ, ಸಕ್ಷಮ ಪ್ರಾಧಿಕಾರಿಯ ಮುಂದೆ ಮತ್ತೆ ಹಾಜರಾದಾಗ ಸಕ್ಷಮ ಪ್ರಾಧಿಕಾರಿಯು ಉಚಿತವೆಂದು ಭಾವಿಸಿ ಮಾಡಬಹುದಾದಂಥ ಆದೇಶವನ್ನು ಸ್ವೀಕರಿಸುತ್ತೇನೆ.

ದಿನಾಂಕ ....................

ಸಾಕ್ಷಿದಾರರ ಸಹಿ ಮತ್ತು ವಿಳಾಸ ಸಹಿ

1.

2.

## ನಮೂನೆ – XIII

**[37ನೇ ನಿಯಮದ (13) (ಸಿ) ಉಪ ನಿಯಮವನ್ನು ನೋಡಿ]**

............................ ರ ನಿವಾಸಿಯಾದ (ಅಂದರೆ, ಮನೆ ಸಂಖ್ಯೆ / ರಸ್ತೆ/ ಗ್ರಾಮ / ಪಟ್ಟಣ, ಜಿಲ್ಲೆ, ರಾಜ್ಯದ ಪೂರ್ಣ ವಿವರಗಳನ್ನು ನೀಡಿ) ....................... ಎಂಬ ನಾನು ಈ ಮುಂದಿನ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ......................... ಬಾಲಕ ನ್ಯಾಯ ಮಂಡಲಿ / ಮಕ್ಕಳ ಕಲ್ಯಾಣ ಸಮಿತಿಯ ಆದೇಶಗಳ ಮೇರೆಗೆ, ................ ವಯಸ್ಸಿನ .............................. ಎಂಬುವನ ಪ್ರಭಾರವನ್ನು ತೆಗೆದುಕೊಳ್ಳಲು ನಾನು ಸಮ್ಮತಿಸುತ್ತೇನೆಂದು ಈ ಮೂಲಕ ಘೋಷಿಸುತ್ತೇನೆ.

(I) ಅವನ / ಅವಳ ನಡತೆ ತೃಪ್ತಿಕರವಾಗಿಲ್ಲದಿದ್ದರೆ, ಆ ಬಗ್ಗೆ ನಾನು ಕೂಡಲೇ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸುತ್ತೇನೆ.

(II) ಸದರಿ ....................... ನು/ಳು ನನ್ನ ವಶದಲ್ಲಿರುವವರೆಗೂ ಅವನ / ಅವಳ ಕಲ್ಯಾಣಕ್ಕಾಗಿ ಮತ್ತು ಶಿಕ್ಷಣಕ್ಕಾಗಿ ಬಹಳಷ್ಟು ಶ್ರಮಿಸುತ್ತೇನೆ ಮತ್ತು ಅವನ / ಅವಳ ಪೋಷಣೆಗಾಗಿ ಸೂಕ್ತ ಏರ್ಪಾಟು ಮಾಡಿಕೊಡುತ್ತೇನೆ.

(III) ಅವನು/ ಅವಳು ಕಾಯಿಲೆ ಬಿದ್ದ ಸಂದರ್ಭದಲ್ಲಿ, ಹತ್ತಿರದ ಆಸ್ಪತ್ರೆಯಲ್ಲಿ ಅವನಿಗೆ / ಅವಳಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆಯನ್ನು ಕೊಡಿಸುತ್ತೇನೆ.

(IV) ಸಕ್ಷಮ ಪ್ರಾಧಿಕಾರವು ಅವನನ್ನು / ಅವಳನ್ನು ತನ್ನ ಮುಂದೆ ಹಾಜರುಪಡಿಸಬೇಕೆಂದು ಅಗತ್ಯಪಡಿಸಿದಾಗ ಹಾಗೆ ಮಾಡಲು ಜವಾಬ್ದಾರನಾಗಿರುತ್ತೇನೆ.

ದಿನಾಂಕ:.......................... ಸಹಿ

ಸಾಕ್ಷಿದಾರನ(ರ) ಸಹಿ ಮತ್ತು ವಿಳಾಸ:

## ನಮೂನೆ – XIV

**[39ನೇ ನಿಯಮದ (2) (ಬಿ) (iv) ನೇ ಉಪ ನಿಯಮವನ್ನು ನೋಡಿ]**

**ಪರಿವೀಕ್ಷಣಾಧಿಕಾರಿಯ ಪಾಕ್ಷಿಕ ಪ್ರಗತಿ ವರದಿ**

**ಭಾಗ I**

(1) ಪರಿವೀಕ್ಷಣಾಧಿಕಾರಿಯ / ವಿಷಯ ನಿರ್ವಾಹಕನ ಹೆಸರು

(2) ....................... ತಿಂಗಳಿಗಾಗಿ

(3) ನೋಂದಣಿ ಸಂಖ್ಯೆ

(4) ಸಕ್ಷಮ ಪ್ರಾಧಿಕಾರಿ

(5) ವ್ಯಕ್ತಿಚಿತ್ರಣ ಸಂಖ್ಯೆ

(6) ಮಗುವಿನ ಹೆಸರು

(7) ಮೇಲ್ವಿಚಾರಣಾ ಆದೇಶದ ದಿನಾಂಕ

(8) ಮಗುವಿನ ವಿಳಾಸ

(9) ಮೇಲ್ವಿಚಾರಣೆಯ ಅವಧಿ

**ಭಾಗ – II**

| **ಸಂದರ್ಶನದ ಸ್ಥಳಗಳು** | ದಿನಾಂಕಗಳು |
|---|---|
| .............................. | .............................. |
| .............................. | .............................. |
| .............................. | .............................. |

(1) ಮಗುವು ವಾಸವಾಗಿರುವ ಸ್ಥಳ

(2) ಯಾವುದೇ ಶೈಕ್ಷಣಿಕ / ತರಬೇತಿ ಅವಧಿಯಲ್ಲಿ ಮಾಡಿದ ಪ್ರಗತಿ

(3) ಅವನು / ಅವಳು ಕೆಲಸ ಮಾಡುತ್ತಿದ್ದರೆ, ಮಾಡುತ್ತಿರುವ ಕೆಲಸ ಮತ್ತು ಅವನ/ ಅವಳ ಮಾಸಿಕ ಸರಾಸರಿ ಗಳಿಕೆ

(4) ಅವನ / ಅವಳ ಹೆಸರಿನಲ್ಲಿ ಅಂಚೆ ಕಚೇರಿ / ಉಳಿತಾಯ ಬ್ಯಾಂಕ್ ಖಾತೆಯಲ್ಲಿ ಠೇವಣಿ ಇಡಲಾದ ಉಳಿತಾಯದ ಹಣ

(5) ಮಗುವಿನ ಆರೋಗ್ಯ

(6) ಅವನ/ ಅವಳ ಸಾಮಾನ್ಯ ನಡತೆ ಮತ್ತು ಪ್ರಗತಿಯ ಬಗ್ಗೆ ಷರಾ

(7) ಸರಿಯಾಗಿ ನೋಡಿಕೊಳ್ಳಲಾಗುತ್ತಿದೆಯೇ?

**ಭಾಗ – III**

(1) ಸಕ್ಷಮ ಪ್ರಾಧಿಕಾರಿಯ ಮುಂದೆ ಈ ಮುಂದಿನವುಗಳಿಗೆ ಸಂಬಂಧಿಸಿದಂತೆ ಇರುವ ಯಾವುವೇ ವ್ಯವಹರಣೆಗಳು:

(ಎ) ಬಂಧಪತ್ರದ ಷರತ್ತುಗಳಲ್ಲಿ ವ್ಯತ್ಯಾಸ

(ಬಿ) ವಾಸಸ್ಥಳದ ಬದಲಾವಣೆ

(ಸಿ) ಇತರ ವಿಷಯಗಳು

(2) ಮೇಲ್ವಿಚಾರಣಾ ಅವಧಿಯು ............................... ದಿನಾಂಕದಂದು ಮುಗಿದಿದೆ

(3) ಮೇಲ್ವಿಚಾರಣೆಯ ಫಲಿತಾಂಶ (ಯಾವುದಾದರೂ ಇದ್ದರೆ), ಷರಾದೊಂದಿಗೆ

(4) ಮೇಲ್ವಿಚಾರಣಾ ಅವಧಿ ಮುಗಿದ ತರುವಾಯ ಮಗುವನ್ನು ಯಾರ ಬಳಿ ರಕ್ಷಣೆಗೆಂದು ಇಡಬೇಕಾಗಿದೆಯೋ ಆ ತಂದೆ ತಾಯಿ ಅಥವಾ ಪಾಲಕ ಅಥವಾ ಸೂಕ್ತ ವ್ಯಕ್ತಿಯ ಹೆಸರು ಮತ್ತು ವಿಳಾಸ
ವರದಿಯ ದಿನಾಂಕ.

ಪರಿವೀಕ್ಷಣಾಧಿಕಾರಿ/ ವಿಷಯ ನಿರ್ವಾಹಕನ ಸಹಿ. ಪರಿವಿ

The above translation of the Karnataka Juvenile Justice (Care and Protection of Children) Rules, 2002 shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963).

**GOVERNER OF KARNATAKA**
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 355

**ಜಿ.ಕೆ. ಬೋರೆಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.